ಜೆ. ವಾಮನ ಭಟ್ಟ

ശാ. ൬൭

അമ്മെംബള ശംകരനാരായണ

നാവഡ

൧൮ - ൧൧ - ൫൭

ಶಕುಂತಳೆ
SHAKUNTALA

Approved by the Madras Text Book Committee for class use
vide *page 24 of Fort St. George Gazette*
Supplement dated May 20, 1947.

ಜೆ. ವಾಮನ ಭಟ್ಟ, ಬಿ. ಎ., ಎಲ್. ಟಿ.
J. VAMAN BHAT, B. A., L. T.

1949

Bhat & Co., Mangalore.

PRICE: 0 – 12 – 0] [ಕ್ರಯ: 0–12–0.

First Print 1—1—1935
Second Print 1—6—1936
Third Print 20—7—1945
Fourth Print 1—6—1947
Fifth Print 15—6—1949

ಕೆಲವು ಅಭಿಪ್ರಾಯಗಳು

ಶ್ರೀಮಾನ್ ಗೋವಿಂದ ಪೈಗಳು 3-1-1935ರಲ್ಲಿ ಹೀಗೆಂದು ಬರೆದರು:

It is very well-written and I congratulate you. I fair to be a faithful Kannada prose version of Kali celebrated Shakuntala drama. In this connection tell you that in the eighties or nineties of the last ce the late Mr. B. Venkatachar, publised Kannada trans of the famous Iswarachandra Vidyasagara's prose "Shakuntala"..........So far as I know copies o have already been scarce long since..........You congratulate yourself that though perhaps unawares have set up a new image carved from the same mo that of the old, before many could know that a nic Kannada literature had been long emptied of its old i and I too congratulate you once again on the accoun

2. The Hindu, 5-2-1935:—

This is a Kannada rendering of Kalidasa's cla drama "Shakuntala." The author has succeeded in ca ing the spirit of the original. The book is written in prose.

3. ಪ್ರಾಕ್ತನವಿಮರ್ಶವಿಚಕ್ಷಣ ಮಹಾಮಹೋಪಾಧ್ಯಾಯ ರಾವ ದ್ದೂರ್, ರಾ. ನರಸಿಂಹಾಚಾರ್ಯರು 5-9-1935 ಹೀಗೆಂದು ಬರೆದರು:—

ಶಕುಂತಳೆ ಎಂಬ ಪುಸ್ತಕವನ್ನು ಓದಿ ನೋಡಿದೆನು. ಶೈಲಿಯು ಸರಳವಾಗಿ ಗಂಭೀರವಾಗಿಯೂ ಇದೆ. ನಾಟಕದ ಕಥೆಯನ್ನು ಲಲಿತಶೈಲಿಯಲ್ಲಿ ಕನ್ನಡಿಗರಿಗೆ ಬಹಳ ಉಪಕಾರ ಮಾಡಿದ್ದೀರಿ. ಇದು ಪಾಠಶಾಲೆಗಳಲ್ಲಿ ಪಠ್ಯ ವಾಗಿ ಇಡಲಿಕ್ಕೂ ಯೋಗ್ಯವಾಗಿದೆ.

ವಿಜ್ಞಾಪನೆ

ಸಂಸ್ಕೃತದ ಜ್ಞಾನವಿಲ್ಲದವರಿಗೆ ಅಭಿಜ್ಞಾನ ಶಾಕುಂತಳದ ಕಥೆಯನ್ನಾದರೂ ತಿಳಿಯಪಡಿಸಬೇಕೆಂಬ ಉದ್ದೇಶದಿಂದ ಪುಸ್ತಕವಿದನ್ನು ಪ್ರಕಟಿಸುವ ಪ್ರಯತ್ನಕ್ಕೆ ಕೈ ಹಚ್ಚಿರುವೆನು.

ಗುರುಶಿಷ್ಯ ಸಂಬಂಧವನ್ನಿಟ್ಟು ಈ ಪುಸ್ತಕದಲ್ಲಿದ್ದ ಹಲವು ತಪ್ಪುಗಳನ್ನು ತಿದ್ದಿ ಮುನ್ನುಡಿಯೊಂದನ್ನೂ ಬರೆದು ಆಶೀರ್ವದಿಸಿದ ನಿವೃತ್ತ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜ, ಶ್ರೀ। ಎಮ್. ನರಸಿಂಗರಾವ್, ಬಿ. ಎ., ಎಮ್. ಎಲ್. ರವರಿಗೆ ನಾನು ಕೃತಜ್ಞನಿದ್ದೇನೆ.

ಈ ಗ್ರಂಥವನ್ನು ರಚಿಸುವುದರಲ್ಲಿ ಶ್ರೀ। ರಾಮವರ್ಮ ಮತ್ತು ಶ್ರೀ। ಕೆ. ಪಿಷಾರಕರ 'ಸಾರಾರ್ಥ ದೀಪಿಕಾ' ಎಂಬ ಟೀಕೆಯು ನನಗೆ ಬಹಳ ಉಪಯುಕ್ತವಾಗಿದೆ. ಆದುದರಿಂದಲೇ ಅದರಲ್ಲಿ ಇರುವಂತೆಯೇ 'ದುಷ್ಷಂತ' ಎಂತಲೇ ಬರೆದಿರುತ್ತೇನೆ. ರಾಘವ ಭಟ್ಟನ 'ಅರ್ಥ ದ್ಯೋತನಿಕಾ' ಟೀಕೆಯೂ, ಬಸವಪ್ಪ ಶಾಸ್ತ್ರಿಗಳ ಶಾಕುಂತಳ ನಾಟಕಾನುವಾದವೂ ನನಗೆ ಬಹಳ ಮಟ್ಟಿಗೆ ಪ್ರಯೋಜನ ಮಾಡಿವೆ.

1-1-1935. ಜೆ. ವಿ. ಬಿ.

ಐದನೆ ಮುದ್ರಣ

ಈ ಗ್ರಂಥದ ಮೂರನೆ ಮತ್ತು ನಾಲ್ಕನೆ ಮುದ್ರಣಗಳನ್ನು ಪ್ರಕಟಿಸಿ ಉಪಕಾರ ಮಾಡಿದ್ದಕ್ಕಾಗಿ ನಾನು ಶ್ರೀ ಸ್ಕೂಲ್ ಬುಕ್ ಕಂಪೆನಿಯ ಮ್ಹಾಲಕರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಮಂಗಳೂರು,
15-6-1949. ಜೆ. ವಿ. ಬಿ.

ಮಿತ್ರಮಂಡಳಿಯ ಸಂಸ್ಥಾಪಕ

ತ್ಯಾಗಮೂರ್ತಿ ದಿವಂಗತ

ಕಣ್ಣಂದೂರು ರಾಘವಾಚಾರ್ಯರ

ಸ್ಮಾರಕವಾಗಿ

ಮಂಗಳೂರು ಮಿಂತ್ರಮಂಡಳಿಗೆ

ಸಮರ್ಪಣೆ

1-1-1935

ಮುನ್ನುಡಿ

ಇಡೀ ಭೂಲೋಕದಲ್ಲಿ ಅತ್ಯುತ್ಕೃಷ್ಟವಾದ ಆರು ನಾಟಕ ಗ್ರಂಥಗಳ ಹೆಸರುಗಳನ್ನು ಹೇಳಬೇಕೆಂದಾದರೆ, ಕಾಳಿದಾಸ ಕವಿಯು ಸಂಸ್ಕೃತದಲ್ಲಿ ರಚಿಸಿದ ಅಭಿಜ್ಞಾನ ಶಾಕುಂತಳ ನಾಟಕವು ಆ ಆರರಲ್ಲಿ ಒಂದಾಗಿ ಬಾರದಿರದು. ಮೂಲ ಕವಿಯು ಶೇಕ್ಸಪಿಯರಿಗಿಂತ ಬಹು ಪುರಾತನನಾಗಿ ಅವನಂತೆ ಎಲ್ಲಾ ಕಾಲಕ್ಕೂ ಬರೆಯುವ ಗುಣವಿದ್ದವನು. ಅನುಶ್ರುತಿಯಾಗಿ ಕವಿಯು ಕ್ರಿಸ್ತಪೂರ್ವ ಒಂದನೆಯ ಶತಮಾನದಲ್ಲಿ ಉಜ್ಜಯಿನೀ ನಗರವುಳ್ಳ ಮಧ್ಯದೇಶದಲ್ಲಿ ಭೋಜರಾಜನೆಂಬುವನ ಆಸ್ಥಾನದಲ್ಲಿದ್ದನೆಂದುಂಟು. ರೇಖಾಮೂಲಕವಾಗಿ ಆತನ ದಾತನು ಅಲ್ಲಿಯ ವಿಕ್ರಮಾದಿತ್ಯರಾಯನೆಂದುಂಟು. ವಿಕ್ರಮಾದಿತ್ಯನೆಂಬ ಹೆಸರುಳ್ಳ ರಾಜರು ಅನೇಕರಿದ್ದರೆಂತಲೂ, ಕವಿಯ ದಾತನು ಕ್ರಿಸ್ತಾಬ್ದ ಆರನೆಯ ಶತಮಾನದ ವಿಕ್ರಮಾದಿತ್ಯನೆಂತಲೂ, ಆ ರಾಜನೇ ಸಂವತ್ಸರ ಪುರುಷನೆಂತಲೂ, ಮ್ಲೇಚ್ಛರನ್ನು ಜಯಿಸಿ ಆರನೂರ ವರ್ಷಕ್ಕೆ ಶಕವನ್ನು ಹಿಂದಿಟ್ಟನೆಂತಲೂ ಈಗಿನ ಒಂದು ಊಹೆ. ಕೆಲವರು ಕವಿಯ ಕಾಲವನ್ನು ಇನ್ನು ಒಂದು ಶತಮಾನಕ್ಕಾದರೂ ಹಿಂದೆ ತಳ್ಳುವರು. ಶಾಕುಂತಳ ನಾಟಕವನ್ನು ಕನ್ನಡದಲ್ಲಿ ಗದ್ಯಕಥಾರೂಪವಾಗಿ ಪ್ರಸ್ತುತ ಗ್ರಂಥದಲ್ಲಿ ಬರೆದಿದೆ.

ಅಲ್ಪ ಕಾಲಕ್ಕೆ ಹಿಂದೆ ನಮ್ಮ ಮಾತೃಭೂಮಿಯ ಸಂಸ್ಕೃತಾದಿ ಭಾಷೆಗಳಲ್ಲಿ ಪದ್ಯ ಕಾವ್ಯಗಳಲ್ಲದೆ ಗದ್ಯರೂಪವಾದ ಗ್ರಂಥಗಳು ಬಹು ದುರ್ಲಭವಾಗಿದ್ದುವು. ವೈದ್ಯಶಲ್ಯಶಾಸ್ತ್ರಗಳು, ವ್ಯಾಕರಣ ಛಂದಸ್ಸುಗಳು, ನಿಘಂಟು ಕೂಡ ಪದ್ಯರೂಪ. ಲಿಪಿಯಿಲ್ಲದ ಬಹು ಪೂರ್ವಕಾಲದಲ್ಲಿ ಪದ್ಯರೂಪವು ಸ್ಮರಣೆಗೂ ಪಾಠಕ್ಕೂ ಅನುಕೂಲವಾಗಿತ್ತಷ್ಟೆ! ಲಿಪಿ ರಚನೆಯ ನಂತರವೂ ಬಹು ಕಾಲ ಪದ್ಯರೂಪವೇ ಮುಂಚಿನಂತೆ ರೂಢಿಯಿತ್ತು. ಗ್ರಂಥವನ್ನು ತಾಳೆಯೆಲೆಗಳಲ್ಲಿ ಒಂದೊಂದಾಗಿ ಪ್ರಯಾಸಪಟ್ಟು ಬರೆಯಬೇಕು. ಅಂತಹ ಗ್ರಂಥವು ಸಿಕ್ಕುವುದು ದುರ್ಲಭ; ಸಿಕ್ಕಿದರೆ ಬೆಲೆ ಸುಲಭವಲ್ಲ. ಗದ್ಯವನ್ನು ಪದ್ಯಕಾವ್ಯದಂತೆ ಸಂಕೋಚವಾಗಿ ಬರೆಯಲು ಮನಸ್ಸುಬಾರದು. ಗದ್ಯದ ವಿರಳತೆಗೆ ಇವೇ ಕಾರಣಗಳು.

ಮುದ್ರಣ ಸಹಾಯದಿಂದ ಮುಂಚೆ ಇದ್ದ ಪ್ರಚಾರದ ಅನನುಕೂಲತೆಗಳು ಹೆಚ್ಚುಕಡಿಮೆ ಎಲ್ಲವು ಕಳೆದುಹೋದುವು. ಆದರೂ ಬಹುಕಾಲದಿಂದಿದ್ದ ಪದ್ಯಕಾವ್ಯದ ವಾಡಿಕೆಯು ಆಗಲೆ ಬಿಟ್ಟುಹೋಗಲಿಲ್ಲ. ಹಿರಿಯರು ನೆಟ್ಟ ಆಲದ ಮರದ ಕಥೆಯಾಯ್ತು. ಆದರೆ ಹೇಗೆ ಹೇಗೆ ಬರಹಬಲ್ಲವರ ಸಂಖ್ಯೆಯು ಏರುತ್ತ ಬಂದಿತ್ತೋ, ಹೇಗೆ ಹೇಗೆ ಪ್ರಚಾರದ ಸೌಕರ್ಯಗಳು ವರ್ಧಿಸಿ ಗಣ್ಯವಾದುವೋ, ಹಾಗೆ ಹಾಗೆಲ್ಲ ಸುಲಭವಾದ ಬಹಳ ಗ್ರಂಥಗಳಿಗೆ ಗ್ರಾಹಕರೊದಗಿದರು, ಹಾಗೆ ಹಾಗೆಲ್ಲ ಆ ತಗಾದೆಯ ಶಮನಕ್ಕೋಸ್ಕರ ಬರೆಯಬೇಕಾಯಿತು. ಪದ್ಯರೂಪವು ರಚನೆಗೂ ಪಾಠಕ್ಕೂ ಸುಲಭವಲ್ಲ; ವಿಪುಲವಾಗಿ ಬರೆಯಲಿಕ್ಕೂ ಬಾರದು. ಹೀಗೆ ಗದ್ಯಕ್ಕೊಂದು ಸುಯೋಗವು ಬಂದೊದಗಿತು.

ಗದ್ಯ ಗ್ರಂಥಗಳು ತಲೆಯೆತ್ತಿದುದು ಇತ್ತೀಚೆಗೆ; ಪ್ರಾಯಶಃ ಪ್ರಚಲಿತ
ಯಲ್ಲೆನ್ನಬಹುದು. ಇಷ್ಟು ಪುಟ್ಟ ಕೂಸಿಗೆ ತೊದಲ್ನುಡಿಯ ವಾಸನೆ ಇ
ಚೋದ್ಯವಲ್ಲ. ಶೈಲಿಸರಣಿಗಳು ನೆಲಸಿ ಬೇರೂರಲಿಲ್ಲ. ಮುದ್ರಾಯಂತ್ರವನ್ನು
ಯಾವ ಹೇತುವಿನಿಂದಲಾದರೂ ಕಷ್ಟಪಟ್ಟು ಪ್ರಚುರಗೊಳಿಸಿದ ಒಂದು
ಕನ್ನಡಕ್ಕೆ 'ಪಾದರಿ ಕನ್ನಡ'ವೆಂದು ಧಿಕ್ಕಾರದಿಂದೆಂಬಂತೆ ಮೂಗಿಗೆ ಸುಕ್ಕು
ನುಡಿಯುವವರು ಕೃತಘ್ನರು. 'ಮುದುಕರ ಕಿರೀಟವು ಮಕ್ಕಳ ಮಕ್ಕಳೇ' ಎ
'ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ,' ಎಂದೂ
ದುಂಟು, ನಿಜ. ಆದರೆ, ಹೇಗಾದರೂ ಬರೆದು ಆಗಲೆ ಪುಸ್ತಕಗಳನ್ನು ಪ್ರ
ಇರುತ್ತಿದ್ದರೆ ಸಾಧಾರಣ ಜನರಿಗೆ ತಿಳಿಯುವಂತೆ ಇಷ್ಟರ ತನಕ ಯಾವುದೆ
ಶೈಲಿಯೂ ಅರಳದೆ ಇರುತ್ತಿತ್ತು. ಅಂತಹ ವಿಕಾಸವು ಈಗಲೂ ಪರಿಪೂರ್ಣ
ಎನ್ನಲು ಅವಕಾಶವಿಲ್ಲ. ಸಾಹಿತ್ಯ ಸಾಮಗ್ರಿಯನ್ನು ಹಳೆಯ ಆಚಾರದ ಬರ
ರಿಂದ ಕಿತ್ತುಕೊಂಡುದೇನೋ ಸುಭಗವೇ. ಆದರೆ ಕಿತ್ತುಕೊಂಡ ಸುಧಾರಣಿಕ
ಗಳಲ್ಲಿ ಹಲವರು ಎಚ್ಚತ್ತು ಇನ್ನೊಂದು ಗುಂಡಿಯಲ್ಲಿ ಬೀಳಲಿಕ್ಕೆ ಪ್ರಾರಂಭ. ಅ
ಭಾವನೆ ಇಂಗ್ಲಿಷಿನಲ್ಲಿ, ಭಾಷಾಂತರ ಕನ್ನಡದಲ್ಲಿ; ಭಾಷೆ ಕನ್ನಡ, ವಾಕ್ಯರಚ
ವಿಧಿ ಇಂಗ್ಲಿಷು. ಹೀಗಾಗಬಾರದೆಂದು ಕೆಲವು ಸಾಹಿತಿ ವಿಮರ್ಶಕರಿಗೆ
ಬಂದುದು ಕರ್ಣಾಟಕ ಭಾಷಾದೇವಿಯ ಭಾಗ್ಯ.

ಪ್ರಸ್ತುತ ಗ್ರಂಥದಲ್ಲಿ ಅಂತಹ ದೋಷವು ಇರುವುದಾಗಿ ಕಾಣಲಿಲ್ಲ. ಶೈಲಿ
ವಾಕ್ಸರಣಿಯೂ ಸಹಜವಾಗಿಯೂ ಅನತಿಕ್ಲಿಷ್ಟವಾಗಿಯೂ ಇದೆ. ಅತಿ ಸುಲಭ
'ಎಲ್ಲರೂ ತಿಳಿಯುವಂತೆ', ಬರಿಯಬೇಕೆಂದು ಹೇಳುವವರುಂಟು. ಆದರೆ
ಯಾಸವೂ ಇಲ್ಲದೆ ಓದಿ ತಿಳಿಯಲಾಗುವುದಾದರೆ ಭಾಷಾವಿಜ್ಞಾನವು ಇದ್ದಲ್ಲಿಯೆ
ಪರಂತು ಪಾಂಡಿತ್ಯವನ್ನು ತೋರಿಸುವುದಕ್ಕೆ ಮಾತ್ರ ಕ್ಲಿಷ್ಟವಾದ ಶೈಲಿಸರಣಿ
ಇಟ್ಟರೆ, ಅವಜ್ಞೆಯ ಘಟನೆ ಉಂಟಾಗಬಹುದು. ಮಧ್ಯ ಮಾರ್ಗವೇ ಉ
ವಲ್ಲವೇ? "ಅತಿ ಸರ್ವತ್ರ ವರ್ಜಯೇತ್." ಗ್ರಂಥಕರ್ತರು, ಕೇವಲ ಯ
ರಾಗಿಯೂ ಭಾಷೋತ್ಸಾಹಿಗಳು, ಸಾಹಿತ್ಯಭಕ್ತರು. ಬರವಣಿಗೆಯಲ್ಲಿ ಹೃದ
ಯಿಂದ ಮನಃಪೂರ್ತಿಯಾಗಿ ತೊಳಲುವರು. ಸಾಕಷ್ಟು ನುರಿತಿಲ್ಲವೆಂದಾ
ಕೂಡ, ಸಾಹಿತ್ಯ ವಿಜ್ಞಾನದಲ್ಲಿ ಎದೆಗೊಟ್ಟು ಮುನ್ನಡೆಯುವವರಲ್ಲದೆ ಹಿಂಜ
ವವರಲ್ಲವೆಂಬುದು ಪ್ರತ್ಯಕ್ಷವಾಗುವುದು. ಇನ್ನೂ ಅನೇಕರು ಈ ರೀತಿಯಾ
ಕೊಡಿದಷ್ಟು ವ್ಯಾಕರಣ ಶುದ್ಧವುಳ್ಳ ಮತ್ತು ಅಲ್ಪಾಯಾಸದಿಂದ ಅರಿಯಲ
ಪರಿಷ್ಕೃತ ವಾಕ್ಸರಣಿಯಲ್ಲಿ ಗದ್ಯ ಸಾಹಿತ್ಯವನ್ನು ಬರೆದು ಬೆಳೆಯಿಸಲೆಂಬ ಕೋ

ಮಂಗಳೂರು,
14ನೇ ಡಿಸೆಂಬರ್ 1934.

M. Narasing

ಶಕುಂತಳೆ

೧. ಮೃಗಯಾವಿಹಾರ

ಅಭಿಜ್ಞಾನ ಶಾಕುಂತಳದ ಕಥೆಯು ಜಗತ್ಪ್ರಸಿದ್ಧವಾಗಿದೆ. ಕವಿಶ್ರೇಷ್ಠನಾದ ಕಾಳಿದಾಸನು ಮಹಾಭಾರತದ ಉಪಾಖ್ಯಾನವೊಂದನ್ನು ಆಧಾರವಾಗಿಟ್ಟುಕೊಂಡು ಈ ಕಥೆಯನ್ನು ಸಂಸ್ಕೃತ ಭಾಷೆಯಲ್ಲಿ ವಿರಚಿಸಿದನು. ಕಾಲದ ದಟ್ಟಡವಿಯಲ್ಲಿ ಹುಟ್ಟಿ, ಶತಮಾನಗಳ ಬೆಟ್ಟಗಳನ್ನು ಕೊರೆದು, ಸಂಪತ್ ಸಮೃದ್ಧ ಸಾಮ್ರಾಜ್ಯಗಳ ಭಗ್ನಾವಶೇಷಗಳಲ್ಲಿ ಹರಿದು, ಅನಂತವಾದ ಸಾಗರಕ್ಕೆ ಇದರ ಒರತೆಯು ಹರಿಯುತ್ತಿದೆ. ಸಾಮ್ರಾಜ್ಯಗಳು ಮುರಿದರೂ, ಜನಾಂಗಗಳು ಬಲಗುಂದಿದರೂ, ಈ ಕಥೆಯ ಸಂಸ್ಕೃತಿಯು ಮಾಲಿನ್ಯವನ್ನು ಹೊಂದಿಲ್ಲ. ಇದರೊಳಗಿನ ಆಚಾರವಿಚಾರಗಳು, ರೀತಿನೀತಿಗಳು, ನಡೆನುಡಿಗಳು, ಭಕ್ತಿವಿಶ್ವಾಸಗಳು– ಇನ್ನೂ ನಮ್ಮ ಜೀವನದಲ್ಲಿ ಹೊಸ ಹುರುಪನ್ನು ತೂರಿಸಿ, ನವಚೇತನವನ್ನು ಕೊಡಬಲ್ಲುವು. ಈ ಕಥೆಯಲ್ಲಿ ಪ್ರತಿಪಾದಿತವಾದ ತತ್ವವು ಸ್ವರ್ಗೀಯವಾದ ಪ್ರೇಮವಾಗಿರುತ್ತದೆ. ಗಂಡ ಹೆಂಡಿರಲ್ಲಿ ಹುಟ್ಟುವ, ತಂದೆಮಕ್ಕಳಲ್ಲಿರುವ, ಗೆಳತಿಗೆಳೆಯರಲ್ಲಿ ತೋರುವ ಸ್ವಾಭಾವಿಕವಾದ ಪ್ರೇಮವು ಚಮತ್ಕಾರವಾಗಿ ಈ ಕಥೆಯಲ್ಲಿ ವರ್ಣಿತವಾಗಿದೆ. ಬಹಳವೇನು? ಸಂಸಾರವು ಪರಸ್ಪರ ಪ್ರೇಮದಿಂದ ಹೊಂದಿರುವುದರಿಂದ ಈ ಕಥೆಯ ಮನನವು ನಮಗೆ ಬಹಳ ಮಟ್ಟಿಗೆ ಪ್ರಯೋಜನವಾಗಬಹುದು. ಮಾತ್ರವಲ್ಲ, ನಮ್ಮ ವಿಚಾರಗಳನ್ನೂ ಅಭಿಪ್ರಾಯಗಳನ್ನೂ ಸರಿಪಡಿಸಿ, ನಮ್ಮ ಸ್ಥಿತಿಗತಿಗಳನ್ನು ಇದು ಸುಧಾರಿಸಬಲ್ಲುದು.

ನಮ್ಮ ದೇಶವನ್ನು ಭರತಭೂಮಿಯೆಂದು ಯಾವ ಪುಣ್ಯಪುರುಷನ ಸುಂದರವಾದ ಹೆಸರಿನಿಂದ ಕರೆಯುತ್ತಿರುವೆವೊ, ಆ ಭರತಚಕ್ರವರ್ತಿಯ ತಂದೆತಾಯ್ಗಳ ಪವಿತ್ರವಾದ ಕಥೆಯಿದಾಗಿದೆ. ಆಸೇತುಹಿಮಾಚಲದ ಭೂಮಿಗೆ ಒಡೆಯನಾಗಿ, ಅದನ್ನು ಭೂಮಿಯನ್ನು ತನ್ನ ಹೆಸರಿನಿಂದ ಕರೆಯಿಸುವಷ್ಟು ಯೋಗ್ಯತೆಯನ್ನು ಸಂಪಾದಿಸಿದ ಭರತನನ್ನು ಪುತ್ರನನ್ನಾಗಿ ಪಡೆದ ದುಷ್ಯಂತ ಶಕುಂತಳೆಯರು ಅವನಿಗಿಂತಲೂ ಮಿಗಿಲಾದ ಭಾಗ್ಯವಂತರಾಗಿದ್ದಿರಬೇಕಲ್ಲವೆ?

ಈ ತಂದೆತಾಯ್ಗಳ ನಡತೆಯು ಬಹಳ ಉದಾತ್ತವಾಗಿದ್ದಿರಬೇಕಲ್ಲವೆ?
ದಿದ್ದರೆ, 'ಪುತ್ರಾದಿಚ್ಛೇತ್ ಪರಾಜಯಮ್' ಎಂಬ ಪೂರ್ವಿಕರ ಮಾ
ತಮಗಿಂತಲೂ ಶ್ರೇಷ್ಠನಾದ ಪುತ್ರನನ್ನು ಪಡೆಯುವಷ್ಟು ಪುಣ್ಯಶಾ
ಅವರಾಗುತ್ತಿರಲಿಲ್ಲ.

ದುಷ್ಯಂತನು ಹಸ್ತಿನಾವತಿಯ ಮಹಾರಾಜನಾಗಿದ್ದನು. ಈತನ
ಕಾಯನೂ ಸುಶೀಲನೂ ಆಗಿದ್ದನು. ಈತನು ಶತ್ರುಗಳಿಗೆ ಮಣಿದ
ಋಷಿಗಳನ್ನು ಸನ್ಮಾನಿಸಿ ದಣಿದವನಲ್ಲ. ವೃಕ್ಷಾದಿಗಳು ಬಿಸಿಲಿನ
ತಲೆಕೊಟ್ಟು ನೆರಳಿತ್ತು ಆಶ್ರಿತರನ್ನು ತಣಿಸುವಂತೆ, ತನ್ನ ಸುಖವನ್ನೆ
ಪ್ರಜೆಗಳನ್ನು ರಕ್ಷಿಸಲಿಕ್ಕೆ ಯಥಾಶಕ್ತಿ ಈತನು ಪ್ರಯತ್ನಿಸುತಿದ್ದನು. ದು
ರ್ಗದಲ್ಲಿ ವರ್ತಿಸುವ ಜನರನ್ನು ತಡೆದು, ಜನರ ವಿವಾದಗಳನ್ನು ಯಥಾ
ವಾಗಿ ಬಿಡಿಸಿ, ಜನರ ರಕ್ಷಾಶಿಕ್ಷೆಯಲ್ಲಿ ಅಗ್ಗಳನೆನಿಸಿ, ಪೊಡವಿಗೆ ಒಡೆಯ
ಪ್ರಜೆಗಳಿಗೆ ಬಂಧುವಾಗಿ ಈತನು ಪ್ರಖ್ಯಾತಿಯನ್ನು ಹೊಂದಿದ್ದನು. ಸೂರ್ಯ
ಯಾವಾಗಲೂ ರಥಾರೋಹಿಯಾಗಿರುವಂತೆ, ಗಾಳಿಯು ಹಗಲಿರುಳೂ
ಲಿಸುವಂತೆ, ಮಹಾಶೇಷನು ಭೂಮಿಯ ಭಾರವನ್ನು ಅಹರ್ನಿಶವೂ
ಕೊಳ್ಳುವಂತೆ, ಈ ಮಹಾರಾಜನು ತನ್ನ ದೇಶವನ್ನು ರಕ್ಷಿಸಿ ತನ್ನ ಪ್ರಜೆಗ
ಕ್ಲೇಶಪಡುತ್ತಿದ್ದನು. ಆದುದರಿಂದಲೇ, ಈತನ ಕೀರ್ತಿಯು ಇಂದ್ರಲೋ
ಮುಟ್ಟಿತ್ತು. ಸ್ವರ್ಗದೊಡೆಯನಾದ ಇಂದ್ರನು ಈತನ ಪರಮಸಖನಾಗಿ
ಶತ್ರುಗಳಾದ ರಾಕ್ಷಸರ ಮುಂಡಗಳನ್ನು ಚೆಂಡಾಡಿ, ಮೂರು ಲೋ
ಕಂಟಕಗಳನ್ನು ಹೋಗಲಾಡಿಸಿ, ಸುಖಪರನಾದ ಇಂದ್ರನಿಗೆ ಉಪಕಾರ
ದವರೆಂದರೆ ಅಭೇದ್ಯವಾದ ಧನುಸ್ಸುಳ್ಳ ದುಷ್ಯಂತನೊಬ್ಬನು, ಹರಿ
ಉಗುರುಗಳುಳ್ಳ ನೃಸಿಂಹನಿನ್ನೊಬ್ಬನು. ಸಂತೋಷಪಟ್ಟ ಇಂದ್ರನ
ದೇವರ್ಷಿ-ಪಿತೃ-ಗಂಧರ್ವರಿಂದ ಕೂಡಿದ ಸಭೆಯಲ್ಲಿ ತನ್ನ ಆಸನದ
ದುಷ್ಯಂತನನ್ನು ಕುಳ್ಳಿರಿಸಿ, ಆತನ ಕೊರಳನ್ನು ತನ್ನ ಮಂದಾರಮಾಲೆ
ಸಿಂಗರಿಸಿ ಸತ್ಕರಿಸಿದ್ದನು. ಇಂತಹ ಬಹುಮಾನಕ್ಕೆ ಇಂದ್ರನ ಮ
ಜಯಂತನೂ ಅಸೂಯೆಪಟ್ಟಿದ್ದನು.

ಈ ರಾಜನೊಮ್ಮೆ ಮೃಗಯಾವಿಹಾರಿಯಾಗಿ ಹಿಮಾಲಯದ
ದಲ್ಲಿದ್ದ ಕಾಡುಗಳನ್ನು ಪ್ರವೇಶಿಸಿದನು. ಬಹು ಪೂರ್ವಕಾಲದಲ್ಲಿ ಪೃ
ಈಗಿನಷ್ಟು ನಿರ್ಭಯಾಕಾರವಾಗಿರಲಿಲ್ಲ. ಆಗ ಭೂಪೃಷ್ಠವೆಲ್ಲ ಕಾಡು

ತುಂಬಿದ್ದು, ಮನುಷ್ಯರು ಹುಲಿ ಕರಡಿಗಳೊಡನೆ ಜೀವಿಸುತ್ತಿದ್ದರು. ಆದರೆ ಕ್ರಮೇಣ ಜನರು ಕಾಡನ್ನೆಲ್ಲ ಕಡಿದು, ನಾಡನ್ನು ಕಟ್ಟಿದುದರಿಂದಲೆ, ಇಂದು ಕಾಡುಗಳು ವಿರಳವಾಗಿರುವುವು. ಪೂರ್ವಕಾಲದಲ್ಲಿ ಋಷಿಗಳು ಅಲ್ಲಲ್ಲಿ ಕಾಡುಗಳನ್ನು ಕಡಿದು, ಆಶ್ರಮಗಳನ್ನು ಮಾಡಿಕೊಂಡು, ನಿರ್ಭಯರಾಗಿ ತಮ್ಮ ಜಪತಪೋನುಷ್ಠಾನಗಳಲ್ಲಿ ತನ್ಮಯರಾಗಿರುತ್ತಿದ್ದರೂ, ದುಷ್ಯಂತನಂತಹ ಅರಸರ ಮೃಗಯಾಪ್ರವೃತ್ತಿಯು ಅವರಿಗೆ ಬಹಳ ಮಟ್ಟಿಗೆ ಪ್ರಯೋಜನಕರ ವಾಗುತ್ತಿತ್ತು. ಏಕೆಂದರೆ, ಆ ಕಾಲದಲ್ಲಿ ಅರಸರೂ ಇತರ ಕ್ಷತ್ರಿಯರೂ ಬೇಟೆಯೆಂದು ಕಾಡುಕಾಡುಗಳಲ್ಲಿ ಸುತ್ತಾಡಿ, ವನ್ಯಮೃಗಗಳನ್ನು ಕೊಂದು, ಜನಸಾಮಾನ್ಯರಿಗೆ ಅವುಗಳಿಂದುಂಟಾಗುವ ಬಾಧೆಯನ್ನು ಹೋಗಲಾಡಿಸು ತ್ತಿದ್ದರು.

ಬೇಟೆಯೆಂಬುದು ಸಪ್ತವ್ಯಸನಗಳಲ್ಲಿ ಒಂದೆಂದು ನಮ್ಮ ಹಿರಿಯರು ಎನ್ನುವುದುಂಟು. ಜೂಜಿನಂತೆ ಬೇಟೆಯೂ ಸರ್ವನಾಶಕ್ಕೆ ಕಾರಣವಾಗ ಬಹುದು. ಬೇಟೆಯೆಂದು ಹಗಲಿರುಳು ವನದಿಂದ ವನಕ್ಕೆ ಅಲೆದು, ದೇವರು ಕೊಟ್ಟ ತಮ್ಮ ಅಮೂಲ್ಯವಾದ ಸಮಯವನ್ನೂ ಬಡವರು ಸಲ್ಲಿಸಿದ ತಮ್ಮ ಹೇರಳವಾದ ಸಂಪತ್ತನ್ನೂ ಅರಸರು ಹಾಳುಮಾಡಿರಬಹುದು. ಆದರೆ ಮೃಗಯೆಯು ಪ್ರಯೋಜನಕಾರಿಯಾದುದರಿಂದಲೆ ಅದರ ಕೊಂಡಾಟವನ್ನು ಪ್ರಾಚೀನ ಸಾಹಿತ್ಯದಲ್ಲಿ ನಾವು ಕಾಣುತ್ತೇವೆ. ಮೃಗಗಳ ಸಹಿಸಲಾರದಷ್ಟು ಕ್ರೂರವಾದ ಪೀಡೆಯನ್ನು ಹೋಗಲಾಡಿಸಲು ಬೇಟೆಯೊಂದೇ ಸಾಧನವಾಗಿತ್ತು. ಬೇಟೆಯು ಮೆಚ್ಚುಗೆಗೆ ಪಾತ್ರವಾದುದರಿಂದಲೆ, ಬೇಟೆಯ ವರ್ಣನೆಯಿಲ್ಲದ ಹಳೆಯ ಗ್ರಂಥವಿಲ್ಲ; ಬೇಟೆಯ ಕಥೆಯಿಲ್ಲದ ಪುರಾಣವಿಲ್ಲ. ಪುತ್ರಸಂತಾನ ವಿಲ್ಲವೆಂದು ದುಃಖಪಡುತ್ತಿದ್ದ ದಶರಥ ಮಹಾರಾಜನೊಮ್ಮೆ ಬೇಟೆಗಾಗಿ ಹೊಂಚುಹಾಕಿ ವನದಲ್ಲಿ ಕುಳಿತಿದ್ದಾಗ ತಟಾಕವೊಂದರಲ್ಲಿ ವರಾಹವೊಂದು ನೀರ್ಕುಡಿಯುವುದೆಂದು ಭ್ರಾಂತಿಗೊಂಡು, ನೀರಿಗಾಗಿ ಕೆರೆಗಿಳಿದ ಮುನಿಪುತ್ರ ನೊಬ್ಬನನ್ನು ಕೊಂದುಬಿಟ್ಟನು. 'ಹಾ, ತಾತ!' ಎಂದವನು ಕೂಗಿದೊಡನೆಯೆ, ಅರಸನು ದಿಗಿಲುಗೊಂಡು ನೋಡುವಾಗ, ಮುನಿಪುತ್ರನು ಮಡಿದಿದ್ದನು. ಆತನ ತಂದೆತಾಯ್ಗಳು ದುಃಖದ ಕಂಬನಿಯನ್ನೆ ಕೈಯಲ್ಲಿ ಹಿಡಿದುಕೊಂಡು, 'ನಮ್ಮಂತೆ ಪುತ್ರಶೋಕದಿಂದ ನೀನು ಮಡಿಯುವೆ'ಯೆಂದು ದಶರಥನಿಗೆ ಶಾಪಕೊಟ್ಟು ಪ್ರಾಣಬಿಟ್ಟರು. ಅರಸನಿಗೆ ಈ ಶಾಪವು ಪ್ರಸಾದವನ್ನೆ

ಮಾಡಿತು. ಶಾಪದ ಫಲದಿಂದಾಗಿ ಅರಸನು ಪುತ್ರವಂತನಾದನು!
ಸುಂದರವಾದ ಕಥೆಗಳ ಸಂಖ್ಯೆಗೆ ಲೆಕ್ಕವೇ ಇರುವುದಿಲ್ಲ. ಅಂತೂ ಬ
ಪೂರ್ವಿಕರಿಗೆ ಬಹಳ ಮಟ್ಟಿಗೆ ಮೆಚ್ಚುಗೆಯಾಗಿದ್ದಿತೆಂದು ಊಹಿಸಬ

ದುಷ್ಯಂತನು ಧನುರ್ಧಾರಿಯಾಗಿ ಕಾಡನ್ನು ಪ್ರವೇಶಿಸಿದನು.
ಒಬ್ಬಂಟಿಗನಾಗಿದ್ದಿಲ್ಲ. ಸ್ನೇಹಿತರೂ ಪರಿವಾರದವರೂ ಆತನನ್ನು ಹಿ
ದ್ದರು. ಜನಸ್ತೋಮದ ನಿಮಿತ್ತದಿಂದ ಆಕಾಶವೆಲ್ಲ ಧೂಳಿಧೂಸರಿತವ
ವಾದ್ಯಗಳ ಕೋಲಾಹಲದಿಂದ ಕಾಡೆಲ್ಲ ಶಬ್ದಮಯವಾಯಿತು.
ಕಾಡು ಎಚ್ಚರವಾಗಿಬಿಟ್ಟಿತು. ಆನೆಗಳು ಹಿಂಡುಹಿಂಡಾಗಿ ಓಡಲ
ದುವು. ಕೃಷ್ಣಮೃಗಗಳು ಹೆದರಿ, ಕಿವಿಗೊಟ್ಟು ಶಬ್ದಸ್ಥಾನವನ್ನು ವಿಮ
ಮುನ್ನಡೆದುವು. ಹುಲಿಕರಡಿಗಳು ಆರ್ಭಟಿಸುತ್ತ ತಮ್ಮ ಗುಹೆಗ
ಕೆರಳಿ, ಅನಂತರ ಹೊರಬಿದ್ದುವು. ಸಿಂಹಗಳು ತಮ್ಮ ಮೈಯ
ದಿಟ್ಟಿಸಿ, ಅನಂತರ ಸುತ್ತಮುತ್ತಲೂ ಕಣ್ಣನ್ನು ಅರಳಿಸಿ ಹೆದರಿದಂತ
ಪ್ಲುತವಿಟ್ಟು ಹಾರಿದುವು. ಕಾಡೆಲ್ಲ ಚೆಲ್ಲಾಪಿಲ್ಲಿಯಾಯಿತು. ಮರಗ
ಅರಸನ ಸೈನಿಕರ ಉಪಟಳದಿಂದ ಕಂಪಿಸತೊಡಗಿದುವು. ಹಕ್ಕಿಗಳೆಲ್ಲ '
ವಿನಾಶ' ಎಂದು ಕೂಗಿದುವು. ಶೀಘ್ರದಲ್ಲಿಯೆ ಅರಸನೂ ಆತನ
ದವರೂ ಅನೇಕಾನೇಕ ಕ್ರೂರ ಮೃಗಗಳನ್ನು ಕೊಂದು, ಋಷಿಗಳ, ಬೆ
ಗಾರರ ಮತ್ತು ಕಾಡಾಡಿಗಳ ಅಭಿನಂದನೆಗೆ ಪಾತ್ರರಾದರು.

ಅರಸನಿಗೆ, ತನ್ನ ಧನುಷ್ಟಂಕಾರದಿಂದ ಕೆರಳಿ ಗುಹೆಯಿಂದ ಹೊ
ಕೇಸರಿಯೊಂದು ದೂರದಲ್ಲಿ ಗೋಚರವಾಯಿತು. ಸಮಸ್ತವನದ ಏಕ
ಪತ್ಯದಲ್ಲಿ ಮೆರೆದು, ಮೃಗರಾಜನೆಂದು ಎಣಿಸಿಕೊಳ್ಳಲ್ಪಟ್ಟು, ತೊರೆಗಳ
ದಲ್ಲಿ ಬೆಳೆದಿದ್ದ ಬಂಡೆಗಳ ನಡುವೆ ಹುಟ್ಟಿದ ಕುಂಜಗಳ ತಮ್ಮ ಅರಮ
ಶೂನ್ಯದೃಷ್ಟಿಯಿಂದ ಕುಳಿತು, ಹಿಂದು ಮುಂದು, ನಿನ್ನೆ ನಾಳೆ, ಮೇಲು
ಎಂಬುದೆಲ್ಲವನ್ನೂ ಮರೆತು ಇದ್ದ ಕೇಸರಿಯು ರಾಜಶಬ್ದಕ್ಕೆ ಅರಸನು ಅ
ಪಟ್ಟನು. ಆ ಕೇಸರಿಯು ಮನುಷ್ಯರಾಜನನ್ನು ಕಂಡು, ತನ್ನ ಕೇಸರ
ಅರಳಿಸಿ, ಮುಖವನ್ನೆಲ್ಲ ವಕ್ರಮಾಡಿ, ಹಲ್ಲುಗಳನ್ನೆಲ್ಲ ಕಿಸಿದು, 'ಆ'
ಘೋಷಮಾಡಿತು. ಒಂದು ಹೆಜ್ಜೆ ಮುಂದಕ್ಕೆ ಹಾರಿ, ಹುಲ್ಲಿನ ಮೈ
ಪ್ಲುತದ ಮೇಲೆ ಪ್ಲುತವಿಟ್ಟು ದಾಟಿತು. ಕಡೆಗೆ ಸಿಂಹವು ತಾನು ಹಾ
ಸ್ಥಳದ ಮೇಲೆ ದೃಷ್ಟಿಕ್ಷೇಪವನ್ನು ತಿರುಗಿಸಿ ಸಿಂಹಾವಲೋಕನವನ್ನು

ತ್ತಿದ್ದಾಗ ತಾನೆ, ಅಲ್ಲಿಯೆ ದೂರದಲ್ಲಿ ಹೊಂಚುಹಾಕಿ ಕುಳಿತ ಅರಸನು ಬಾಣದಿಂದ ಗುರಿಯಿಟ್ಟು ಹೊಡೆದು, ಆ ಸಿಂಹವನ್ನು ಕೊಂದುಬಿಟ್ಟನು.

ಆಗಲೆ ಸಮೀಪದಲ್ಲಿ ಚಮರೀಮೃಗವೊಂದು ಧಾವಿಸುತ್ತಿತ್ತು. ಗಾಳಿಯ ವೇಗದಿಂದ ಅದರ ಬಾಲವು ಬೀಸಣಿಗೆಯಂತೆ ತೋರಿ ಅಲ್ಲಿಯೆ ಸಮೀಪವಿದ್ದ ಒಂದು ಸಿಂಹಕ್ಕೆ ಗಾಳಿ ಎಂಬಂತೆ ಬೀಸಿ ರಾಜೋಪಚಾರಗಳಿಂದ ಮನ್ನಿಸಿದಂತೆ ಕಂಡಿತು. ರಾಜನದನ್ನು ಸಹಿಸಲಾರದವನಾದನು. ರಕ್ಷಾಶಿಕ್ಷೆಯಲ್ಲಿ ದಕ್ಷನಾದವನು ತಾನಲ್ಲದೆ ಮತ್ತಾರಿರುವನು ಎಂದು, ಸಿಂಹಕ್ಕೆ ರಾಜೋಪಚಾರವನ್ನು ಮಾಡುವ ಚಮರೀಮೃಗದ ಬಾಲವನ್ನು ಬಾಣಪ್ರಯೋಗ ಮಾಡಿ ರಾಜನು ಕತ್ತರಿಸಿಬಿಟ್ಟನು.

ಇಷ್ಟು ಹೊತ್ತಿಗೆ ಗುಹೆಯ ಕತ್ತಲಿಂದ ಹುಲಿಯೊಂದು ಜೀವದಾಸೆ ಬಿಟ್ಟು ಹೊರಕ್ಕೆ ನೆಗೆಯಿತು. ಅದರ ಮುಖವು ಮರದ ತಳಿಗೋರ್ಪುರದಂತಿತ್ತು. ಮೈಮೇಲೆ ತುಂಬ ಚಿತ್ರಗಳಿದ್ದು ಅದು ದೂರದಿಂದ ತೂತಿನ ಮೃಗವೆಂಬಂತೆ ಕಾಣುತ್ತಿತ್ತು. ಹುಲಿಯು ಅರಸನ ಬರುವಿಕೆಯನ್ನು ಕಂಡು–ತನ್ನ ಬಾಲವನ್ನು ನೆಲಕ್ಕಪ್ಪಳಿಸಿ, ಒಳೊಗೊಳಗೇ ಆರ್ಭಟಿಸುತ್ತ ಅರಸನ ಕತ್ತನ್ನು ಕಡಿಯುವ ಆಲೋಚನೆಯಿಂದ ಮೈಯನ್ನು ಲಘುಮಾಡಿ ಅರಸನ ಮೈಮೇಲೆ ಹಾರಬೇಕೆಂದಿತು. ಅಷ್ಟರೊಳಗೆ ಹಸ್ತಲಾಘವವಿದ್ದ ಅರಸನು ಅದರ ಮುಖರಂಧ್ರವನ್ನು ತುಂಬಿಸಿಬಿಟ್ಟನು.

ಆಗ ಅರಸನ ಹಿಂದಿನಿಂದ ಖಡ್ಗಮೃಗವೊಂದು ತನ್ನ ತಲೆಯನ್ನು ಕೆಳಬಗ್ಗಿಸಿ, ದೀರ್ಘೋಚ್ಛ್ವಾಸಗಳನ್ನು ಎಳೆಯುತ್ತ, ಅರಸನ ಮೇಲೆ ರೇಗಿ ಬಂತು. ಅರಸನು ಬಹಳ ಉತ್ಸಾಹದಿಂದ ಹಿಂದಕ್ಕೆ ತಿರುಗಿ ಖಡ್ಗಮೃಗದ ಖಡ್ಗವನ್ನೆ ತರಿದು, ಅದರ ತಲೆಯು ಹೊತ್ತುಕೊಳ್ಳುವ ಭಾರವನ್ನು ಹಗುರವಾಗಿ ಮಾರ್ಪಡಿಸಿದನು. ಅದರ ಹಿಂದೆಯೆ, ಕಾಡೆಮ್ಮೆಯೊಂದು ಇದಿರಾಗಲು, ಆಗ ಅರಸನು ಬಿಟ್ಟ ಬಾಣವು ಎಮ್ಮೆಯ ಕಣ್ಣನ್ನು ಹೊಕ್ಕು, ಮೊದಲು ಎಮ್ಮೆಯನ್ನು ಉರುಳಿಸಿ, ಅನಂತರ ತಾನು ಕೆಳಕ್ಕಿಳಿಯಿತು.

ಇಷ್ಟಾಗುತ್ತಿರಲು, ಪಲ್ವಲಗಳ ಕೆಸರಿನಲ್ಲಿ ಉರುಳುತ್ತಿದ್ದ ವರಾಹಗಳು ಜೀವದಾಸೆಯಿಂದ ಓಡಿ ಬಿಟ್ಟವು. ಅವುಗಳ ಮೈಯಿಂದ ಕೆಳಸುರಿದ ನೀರಿನ ಮಾರ್ಗವಾಗಿಯೇ ಬೆನ್ನಟ್ಟಿ ಅವುಗಳನ್ನು ಅರಸನು ಇದಿರಾಡಿದನು. ತನ್ನ ವೈರಿಯನ್ನು ಸದೆಬಡೆಯಬೇಕೆಂದು ಅವುಗಳಲ್ಲೊಂದು ತನ್ನ ಕೇಸರಗಳನ್ನೆಲ್ಲ

ಮೇಲ್ಮಾಡಿ, ಮರವೊಂದನ್ನು ತನ್ನ ಆಧಾರವಾಗಿಟ್ಟುಕೊಂಡು ಹೋ
ಅರಸನು ಬಿಟ್ಟ ಕೂರಾದ ಬಾಣವು ವರಾಹದ ನಡುವಿಂದ ಹಾದು
ಮರಕ್ಕೆ ಸಿಕ್ಕಿಕೊಂಡಿತು. ವರಾಹವನ್ನಿರಿದು ಜಯಶೀಲನಾದ ಅರಸನ
ಇನ್ನೊಂದೆಡೆಗೆ ತೆರಳಿದ ಅನಂತರವೂ ಆ ವರಾಹವು ಶತ್ರುವಿನೊಡ
ಪ್ರತಿಭಟಿಸುವಂತಿತ್ತು; ಶತ್ರುವಿಲ್ಲದಿದ್ದರೂ ಶತ್ರುವಿನೊಡನೆ ಹೋ
ವಂತಿತ್ತು.

ಈ ರೀತಿಯಲ್ಲಿ ನೂರಾರು ಮೃಗಗಳನ್ನು ಕೊಂದ ಕಾರಣ,
ಹೃದಯವು ಕಠೋರವಾಗಿತ್ತು. ನಿರ್ದಯವಾಗಿ ಪ್ರಾಣಿಹಿಂಸೆಯನ
ತಿದ್ದುದರಿಂದ ಅವನ ಮನಸ್ಸೂ ಪಶುಸಮಾನವಾಗಿದ್ದಿತು. ಆದರೆ,
ರಾದವರ ಮನಸ್ಸು ಕಲ್ಲಿಗಿಂತ ಕಠಿನವೂ ಹೂವಿಗಿಂತ ಕೋಮಲವ
ವುದುಂಟು. ಅರಸನು ಮುಂದಕ್ಕೆ ನಡೆಯುತ್ತಿದ್ದಾಗ ಸಮೀಪ
ಚೂತವೃಕ್ಷದ ರೆಂಬೆಯಲ್ಲಿ, ಸುಂದರವಾದ ಗರಿಗಳನ್ನು ಕೆಳಗೆ ಜೋ
ಮಯೂರವೊಂದನ್ನು ಕಂಡನು. ಅರಸನಿಗೆ ಅದನ್ನು ಹೊಡೆಯ
ಯುಂಟಾಯಿತು. ಆದರೆ ಆ ಜೋಲುಗರಿಗಳು ಹೆಂಗಸರ ಬಿಡುಮು
ಹೋಲುತ್ತವೆಂದು, ಅರಸನು ಮರುಕದಿಂದ, 'ಮಯೂರನೆ! ಕುಣಿ
ಹಾಡು! ನಾನೀ ಬಾಣವನ್ನು ಆಕಾಶಕ್ಕೆ ಬಿಡುವಾಗ ಉಂಟಾಗುವ
ದೊಡನೆ ಓರಗೆಯಿಟ್ಟು ಹಾಡುವೆಯಾದರೆ, ಬೇಸಗೆಯಲ್ಲಿ ಮೋಡವು
ವಂತೆ ಮಾಡುವೆ'ನೆಂದು ಕಣ್ಣಾಣಿಯಿಂ ಅದನ್ನು ದಿಟ್ಟಿಸಿದನು; ಮ
ಅದರ ಸೊಬಗನ್ನು ಹೀರಿದನು.

ಆಗಲೆ ಕೃಷ್ಣಮೃಗಗಳ ಹಿಂಡೊಂದು ಬಲದಿಂದ ತಿರುಗಿ ಅ
ರಾಯಿತು. ಆ ಮೃಗಗಳಿಗೆ ಬಾಯ್ತುಂಬ ಹುಲ್ಲು; ಮುಖ ತುಂ
ಆ ಹಿಂಡಿನ ಮೊದಲಲ್ಲಿ ಕೃಷ್ಣಮೃಗವೊಂದು ತಾನೀ ಹಿಂಡಿಗೆ ಅಧಿಪ
ಹೆಮ್ಮೆಯಿಂದ ಕೋಡುಗಳನ್ನು ಎತ್ತರವಿಟ್ಟು, ಅಧಿಕಾರದಿಂದ, ಜವಾ
ಕೆಯ ದರ್ಪದಿಂದ ಮುನ್ನಡೆಯುತ್ತಿತ್ತು. ಅದರೊಡನೆ ಹಿಂಡೂ
ಸರಿಯುತ್ತಿತ್ತು. ಆ ಹಿಂಡಿನಲ್ಲಿ ಹೆಣ್ಣು ಮೃಗಗಳೊಡನೆ ಅವುಗಳ
ದ್ದುವು. ಅವುಗಳು ಮೊಲೆಹಾಲನ್ನು ಆಗಾಗ ಕುಡಿಯಬರುತ್ತಿದ
ತಾಯಿಜಿಂಕೆಗಳ ನಡೆಯು ತಡೆಯಲ್ಪಡುತ್ತಿತ್ತು. ಅರಸನು ಹಿಂಡಿನ
ದರ್ಪಕ್ಕೆ ಅಸೂಯೆಪಟ್ಟನು. ಆತನು ಬತ್ತಳಿಕೆಯಿಂದ ಬಾಣವ

ತೆಗೆದು, ಬಿಲ್ಲಿಗೆ ಹೂಡಿ, ಕಿವಿಯವರೆಗೆ ಎಳೆದು ಕಣ್ಣನ್ನು ಸೂಕ್ಷ್ಮವಾಗಿರಿಸಿ, ಗುರಿಯನ್ನು ನಿಶ್ಚಯಮಾಡುವುದರೊಳಗೆ ಹಠಾತ್ತಾಗಿ ಆ ಕೃಷ್ಣಮೃಗದ ಸಹಚರಿಯು ಮುಂದೆ ಬಂದು ತನ್ನ ಪ್ರಿಯನ ದೇಹಕ್ಕೆ ಅಡ್ಡವಾಗಿ ಸುಳಿದಳು. ಅರಸನ ಹೆದೆಬಿಗಿದ ಮುಷ್ಟಿಯು ಒಡೆಯಿತು. ಕಣ್ಣಿಂದ ಒಂದು ತಟಕು ನೀರು ಹನಿಯಿತು. ಅರಸನು ಆ ಮೃಗಗಳ ಹಿಂಡನ್ನು ಕಣ್ತುಂಬ ನೋಡಿ, ಮನತುಂಬ ಸಂತೋಷಪಟ್ಟು, ಇನ್ನೊಂದೆಡೆಗೆ ತನ್ನ ರಥವನ್ನು ತಿರುಗಿಸಿದನು.

ಎಲ್ಲಿ ನೋಡಿದರತ್ತ ವಿಶಾಲವಾದ ಬಯಲು ಕಣ್ಗೊಳಿಸುತ್ತಿತ್ತು. ಅದರಲ್ಲಿ ಬೆಳೆದ ಎಳೆಯ ಹುಲ್ಲು ಹುಲುಸಾಗಿ ಬೆಳೆದು ಮನೋಹರವಾಗಿ ತೋರುತ್ತಿತ್ತು. ಅಲ್ಲಿ ಕ್ರೂರ ಮೃಗಗಳ ಹಾವಳಿಯಿದ್ದಂತೆ ತೋರುತ್ತಿರಲಿಲ್ಲ. ಎಲ್ಲೆಲ್ಲಿಯೂ ಶಾಂತಿಯು ಮನಸ್ಸಿಗೆ ವಿಶ್ವಾಸವನ್ನೂ, ಕಣ್ಣಿಗೆ ಗಾಂಭೀರ್ಯವನ್ನೂ, ಕಿವಿಗೆ ನಿಶ್ಶಬ್ದತೆಯನ್ನೂ ತುಂಬಿಸುತ್ತಿದ್ದಳು. ಅಲ್ಲೊಂದು ಕಾಲ್ದಾರಿಯಿದ್ದಿತು. ಇದರ ಇಬ್ಬದಿಯಲ್ಲಿ ಬೆಳೆದ ಎಳೆಯ ದರ್ಭೆಗಳನ್ನು ಒಂದು ಜಿಂಕೆಮರಿಯು ತಿನ್ನುತ್ತಿತ್ತು. ಅದಕ್ಕೆ ಗುರಿಯಿಟ್ಟು ಹೊಡೆಯಬೇಕೆಂಬ ಉತ್ಕಟವಾದ ಇಚ್ಛೆಯು ಅರಸನಿಗುಂಟಾಯಿತು. ಕೂಡಲೆ ತನ್ನ ರಥವನ್ನು ಅತ್ತ ಓಡಿಸಲು ಸಾರಥಿಗೆ ಆಜ್ಞಾಪಿಸಿ, ಅನಂತರ ಬಿಲ್ಲಿಗೆ ಬಾಣವನ್ನು ಹೂಡಿ ಸಿದ್ಧನಾಗುವುದರೊಳಗೆ ರಥಚಕ್ರದ ಕರ್ಕಶವಾದ ಶಬ್ದವನ್ನು ತಿಳಿದು, ಆ ಹುಲ್ಲೆಮರಿಯು ಅರ್ಧ ಜಗಿದ ದರ್ಭೆಯನ್ನು ಬಾಯಲ್ಲೆ ಹಿಡಿದುಕೊಂಡು, ಪಲಾಯನ ಮಾಡಿಬಿಟ್ಟಿತು. ಹುಲ್ಲೆಮರಿಯು ಬಹಳ ವೇಗವಾಗಿ ಹರಿಯಿತು. ಅದರ ಹಿಂದಕ್ಕೆ ಅರಸನ ರಥವು ಶೀಘ್ರವಾಗಿ ಓಡಿತು. ರಥವೇಗದ ನಿಮಿತ್ತದಿಂದ ಬಹಳ ದೂರದಲ್ಲಿದ್ದುದು ಸೂಕ್ಷ್ಮವಾಗಿ ಅರಸನಿಗೆ ತೋರುತ್ತಿತ್ತು. ಸೂಕ್ಷ್ಮವಸ್ತುವೊಂದು ಕ್ಷಣದಲ್ಲಿಯೇ ಸ್ಥೂಲವಾಗಿ ತೋರಿಬಂದು ಹಿಂದಕ್ಕೆ ಸರಿಯುವಂತೆ ಕಾಣುತ್ತಿತ್ತು. ಈಗ ಸಮೀಪವಿದ್ದುದು ಕ್ಷಣದಲ್ಲಿ ದೂರಗತವಾಗುತ್ತಿತ್ತು. ನೈಸರ್ಗಿಕವಾಗಿಯೇ ವಕ್ರವಾಗಿದ್ದ ಮರಗಳ ಸಾಲು ಸಮರೇಖವಾಗಿ ತೋರುತ್ತಿತ್ತು. ಮಧ್ಯದಲ್ಲಿ ವಿಚ್ಛಿನ್ನವಾದರೂ ವೃಕ್ಷಗಳ ಪಂಕ್ತಿಯು ಜೋಡಿಸಲ್ಪಟ್ಟಂತೆ ಕಾಣುತ್ತಿತ್ತು. ಈ ತರದ ವಾಯುವೇಗದಿಂದ ಅರಸನ ರಥವು ಓಡಿದರೂ ಶೀಘ್ರವಾಗಿ ಹರಿಯುವ ಆ ಹುಲ್ಲೆಮರಿಗೆ ಗುರಿಯಿಟ್ಟು ಹೊಡೆಯಲಾಗಲಿಲ್ಲ. ಅದಿವನನ್ನು ಬಹಳ ದೂರಕ್ಕೆ ಒಯ್ದಿತು.

ಇಷ್ಟರ ವರೆಗೆ ಭೂಮಿಯು ವಿಷಮವಾಗಿದ್ದು, ಈಗತಾನೇ ಅರಸನ

ರಥವು ಸಮಪ್ರದೇಶವನ್ನು ಹೊಂದಿತು. ಸಾರಥಿಯು ಕುದುರೆಗಳ ಕ
ವನ್ನು ಸಡಿಲು ಬಿಟ್ಟು, ಜಾಗ್ರತೆಯಿಂದ ರಥವನ್ನೋಡಿಸಿದನು. ರಥದ
ಗಳು ತಮ್ಮೆದುರು ಓಡುತ್ತಿದ್ದ ಜಿಂಕೆಯೊಡನೆ ಸ್ಪರ್ಧಿಸಿ ಧೀಂಕಿಟ್ಟವು.
ತಲೆಯ ಮೇಲಿನ ಜುಟ್ಟು ಮಿಡುಕದೆ ನೆಟ್ಟಗೆ ನಿಂತಿತು. ಅವು ತಮ್ಮ
ವನ್ನು ನೀಳವಾಗಿ ಚಾಚಿ, ತಮ್ಮ ಕಿವಿಗಳನ್ನು ಮೇಲಕ್ಕೆ ಎತ್ತಿದುವು.
ವಾಗ ಧೂಳೆದ್ದರೂ, ಆ ಧೂಳು ಅವುಗಳನ್ನು ಮುಟ್ಟುತ್ತಿರಲಿಲ್ಲ.

ಹುಲ್ಲೆಮರಿಯು ಬಹಳವಾಗಿ ದಣಿದಿದ್ದಿತು. ಅದು ಆಗಾಗ
ಕೊರಳನ್ನು ಕೊಂಕು ಮಾಡಿ, ತನ್ನನ್ನು ಹಿಂದೆಯೇ ಅನುಸರಿಸುತ್ತಿದ್ದ
ದೃಷ್ಟಿಯನ್ನಿಡುತ್ತಿತ್ತು. ರಥವನ್ನು ಕಂಡೊಡನೇ, ವಿವೃದ್ಧ ವೇಗವಾಗಿ
ಲ್ಲೊಮ್ಮೆಗೆ ಕಾಲಿಟ್ಟು, ಆಕಾಶದಲ್ಲಿಯೇ ಹಾರಿ ಹೋಗುವಂತೆ ಓಡಿ
ಮರೆಯಾಗುತ್ತಿತ್ತು. ಓಡುವುದರಿಂದ ಆಯಾಸವಾಗಿ ಅದರ ಬಾಯ
ಬಿದ್ದ ದರ್ಭಾಂಕುರದ ಚಿಹ್ನೆಗಳಿಂದ ಮಾರ್ಗವನ್ನು ಊಹಿಸಿ ಅರಸನು
ಬೆಂಬತ್ತಿದನು. ಅದು ಹೆದರಿ, ಎಲ್ಲಿ ತನ್ನ ಮೇಲೆ ಅರಸನ ಬಾಣವು
ತ್ತದೋ ಎಂದು ಅರಸನಿಂದ ಆದಷ್ಟು ದೂರವಿರಬೇಕೆಂಬ ಇಚ್ಛೆಯಿಂದ
ಹಿಂಭಾಗವನ್ನು ಕೂಡ ಮುಂಭಾಗದಲ್ಲಿ ಆಕುಂಚಿಸುತ್ತಿತ್ತು. ಈ ರೀತಿ
ಜಿಂಕೆಮರಿಯು ಅರಸನನ್ನು ಬಹಳ ದೂರಕ್ಕೆ ಕೊಂಡೊಯ್ದಿತು. ಕಡೆಗೆ
ಸೋತು ಅರಸನಿಗೆ ಸಮೀಪವಾಗಲು, ಅರಸನು ಬಿಲ್ಲನ್ನೆತ್ತಿ, ಬಾಣವನ್ನು
ಹೆದೆಯನ್ನು ಜಗ್ಗಿ, ಮೃಗವನ್ನು ಹೊಡೆಯುವುದರೊಳಗೆ, 'ಒಹೋ
ರಾಜನೇ! ಆಶ್ರಮಮೃಗವಿದು ಕೊಲ್ಲತಕ್ಕುದಲ್ಲ,' ಎಂಬ ಮಾತು ಕೇಳಬ
ಅರಸನಿಗಾಶ್ಚರ್ಯವಾಯಿತು. ವನಾಂತರದಲ್ಲಿ ಇವರು ಯಾರಿರಬಹುದ
ತರ್ಕಿಸಿದನು. ಸಾರಥಿಯು ಅರಸನಿಗೆ ಬಾಣ ಹೊಡೆಯುದಿರೆಂದು ಸ
ದನು. ಮತ್ತು ರಥವನ್ನು ನಿಲ್ಲಿಸಿ, ಬಂದವರಾರೆಂದು ನೋಡ ನಿಂತನು.

ಜಿಂಕೆಯ ಬೆಂಬತ್ತಿ, ಘೋರಾರಣ್ಯವನ್ನು ದಾಟಿ ಅರಸನು ಕಣ್ವಾಶ್ರ
ಬಂದು ಮುಟ್ಟಿದ್ದನು. ಆತನ ಬಾಣಕ್ಕೂ ಹುಲ್ಲೆಮರಿಗೂ ಅಡ್ಡಲಾಗಿ ಬ
ಅರಸನ ಧನುರ್ವ್ಯಾಪಾರವನ್ನು ತಡೆದವರು ಕೆಲವು ವೈಖಾನಸರಾಗಿ
ಅವರು ಕಣ್ವಾಶ್ರಮದ ಶಿಷ್ಯರು; ಹೋಮಕ್ಕೆ ಸಮಿತ್ತುಗಳನ್ನು ಕೊಯ್ಯುವ
ಹೊರಟವರು. ಅವರಲ್ಲೊಬ್ಬರು, ತ್ವರೆಯಿಂದ ಮುನ್ನಡೆದು ಬಂದು,
ಬಲಗೈಯನ್ನೆತ್ತಿ, "ಎಲೈ ಮಹಾರಾಜನೇ! ಇದು ಆಶ್ರಮಮೃಗವು. ಸಿ

ಸಾಟಿಯಾಗಿರುವಂತಹ ನಿನ್ನ ಬಾಣವು ಬಹಳ ಕೋಮಲವಾದ ಹುಲ್ಲೆಮರಿಯ ಮೇಲೆ ಬೀಳುವುದೆ? ಹೂವಿನ ರಾಶಿಯಲ್ಲಿ ಬೆಂಕಿ ಬಿದ್ದಂತಾದೀತು! ಆದುದರಿಂದ ಎಲೈ ಅರಸನೆ, ತೊಟ್ಟ ಬಾಣವನ್ನಿಳಿಸು. ನಿನ್ನಂತಹವರ ಅಸ್ತ್ರವಿದ್ಯೆಯು ದೀನರನ್ನು ಪೊರೆಯುವುದಕ್ಕಲ್ಲದೆ ನಿರಪರಾಧ ಜಂತುಗಳನ್ನು ವಧಿಸಲಿಕ್ಕಲ್ಲವಲ್ಲ!" ಎಂದು ಹೇಳಿಕೊಂಡನು. ಅರಸನಿಗೆ ತನಗಿಂತ ಹಿರಿಯರಲ್ಲಿಯೂ ಜ್ಞಾನಿಗಳಲ್ಲಿಯೂ ತಪಸ್ವಿಗಳಲ್ಲಿಯೂ ಪರಮವಿಶ್ವಾಸವಿದ್ದಿತು; ಭಕ್ತಿಯಿದ್ದಿತು; ಪ್ರೇಮವಿದ್ದಿತು. ಕೂಡಲೆ ತೊಟ್ಟ ಬಾಣವನ್ನಿಳಿಸಿ, ಆತನು ಋಷಿಕುಮಾರನ ಅಭಿನಂದನೆಗೆ ಪಾತ್ರನಾದನು. ಅವರು ತಮ್ಮ ಎರಡೂ ಕೈಗಳನ್ನೆತ್ತಿ ಓಡಿ ಹೋಗುತ್ತಿದ್ದ ಹುಲ್ಲೆಮರಿಯನ್ನು ಈಕ್ಷಿಸುತ್ತ, "ವಿನಯಶಾಲಿಯಾದ ಅರಸನೆ! ನಿನ್ನಂತೆ ಗುಣವಂತನಾಗಿ ಚಕ್ರವರ್ತಿಯಾಗುವ ಪುತ್ರನನ್ನು ಪಡೆಯು" ಎಂದು ಹರಸಿದರು.

ಇಷ್ಟರೊಳಗೆ ಜಿಂಕೆಮರಿಯು ಎಲ್ಲಿಗೋ ಮಾಯವಾಗಿತ್ತು; ಅದು ತನ್ನ ಸಮಾನಬಂಧುಗಳ ಹಿಂಡನ್ನು ಸೇರಿದ್ದು, ಎಲ್ಲವನ್ನು ಮರೆದು, ಆಯಾಸವನ್ನು ಪರಿಹರಿಸುತ್ತಿರಬಹುದು. ಅರಸನು, "ಎಲೈ ಋಷಿಗಳಿರಾ! ನಿಮ್ಮ ವರಪ್ರದಾನದಿಂದ ಅನುಗೃಹೀತನಾದೆನು. ಯಾವ ಜಿಂಕೆಮರಿಯು ಬೆಂಬತ್ತಿ ಬಂದು ತಮ್ಮ ಪ್ರಸಾದದಿಂದ ಅನುಗೃಹೀತನಾದೆನೊ, ಅದರ ಸ್ಪರ್ಶಸುಖವನ್ನು ನನಗೆ ಒದಗಿಸಿ ಕೊಡುವಿರಾದರೆ, ಪೂತನಾದವನು ಮತ್ತೂ ಪಾವನಗೊಳ್ಳುವೆನು," ಎಂದು ಕೃತಜ್ಞತಾಬುದ್ಧಿಯಿಂದ, ಸೌಂದರ್ಯೋಪಾಸನೆಯ ಆಸಕ್ತಿಯಿಂದ ಕೇಳಿದನು. ವೈಖಾನಸರಿಗೆ ಪರಮಸಂತೋಷವಾಯಿತು. ಅವರು ಆತನಿಗೆ ಸ್ವಾಗತವನ್ನು ಬಯಸಿ, "ಎಲೈ ಅರಸನೆ, ಇದು ಕಣ್ವಾಶ್ರಮವು. ಅಗೋ, ದೂರದಲ್ಲಿ ಕಾಣುವವಳೆ ಮಾಲಿನಿಯು. ನೀನಲ್ಲಿಗೆ ಅತಿಥಿಯಾಗಿ ತೆರಳಿದರೆ, ಆಶ್ರಮವಾಸಿಗಳೆಲ್ಲರೂ ಅಭಾರಿಗಳಾಗುವರು. ನೀನಲ್ಲಿ ನಂಬುಗೆಯಿಂದ ಸುಳಿಯುವ ಸಾವಿರಾರು ಹುಲ್ಲೆಮರಿಗಳನ್ನು ಕಾಣುವೆ. ಸ್ವತಂತ್ರವಾಗಿ ಹಾರುತ್ತ ಹಾಡುವ ಪಕ್ಷಿಗಳ ಗಾನವನ್ನು ಕೇಳುವೆ. ಮಾತ್ರವಲ್ಲ, ಬಳ್ಳಿಮನೆಯ ನೆಳಲಿನಲ್ಲಿ ಕಿರಿಬುಗ್ಗೆ ಉಕ್ಕಿ ಬಂದು, ನಿನ್ನ ಪಾದಗಳನ್ನು ತೊಳೆಯುವುದು; ಪಂಜರದ ಗಿಳಿಯು ನಿನಗೆ ಸ್ವಾಗತವಿತ್ತು, ಮಾತಿನ ಬೆಲ್ಲವನ್ನು ಕೊಡುವುದು; ವೃಕ್ಷಗಳು ಬಗ್ಗಿ ಬಂದು, ಕೊಂಬೆಗಳ ಆಸನವನ್ನು ನಿನಗೀಯುವುವು; ಬದಿಬದಿಯ ಗಿಡಬಳ್ಳಿಗಳು ಕುಸುಮಗಳ ಮಳೆಯನ್ನು ನಿನ್ನ ಮಸ್ತಕದ ಮೇಲೆ ಸುರಿಸುವುವು;

ಮರಗಿಡಗಳು ಫಲಪುಷ್ಪಗಳ ಕಾಣಿಕೆಯನ್ನು ನಿನ್ನ ಚರಣಕ್ಕೊಪ್ಪಿಸು
ನಾಡಿನ ರಾಜನೆ! ನಿನ್ನ ಕಾಡಿನ ಪ್ರಜೆಗಳನ್ನು ಕಾಣು. ಹೆದೆಯನ್ನು ಜಗ್ಗಿ
ಕರ್ಕಶವಾದ ನಿನ್ನ ತೋಳ್ಗಳ ಕೀರ್ತಿಯನ್ನು ವನದೇವತೆಗಳು ಬಿದಿರುಮೆಳೆ
ಅವಿತು ಹಾಡುವುದನ್ನಿಲ್ಲಿ ಕೇಳು. ಸುರಲೋಕದ ಇಂದ್ರನೊಡನೆ ಸಖ್ಯ
ಬೆಳೆಯಿಸಿ, ಮಳೆ ಬೆಳೆಯು ಚೆನ್ನಾಗುವಂತೆ ಮಾಡಿ ರಕ್ಷಿಸುವ ನಿನ್ನ ಹೆಸ
ಆಶ್ರಮದ ಮುನಿಕನ್ಯೆಗಳು ಹೊಗಳುವುದನ್ನು ಕಿವಿಯಾರೆ ಕೇಳು. ಕ
ನೋಡು. ಇಕೋ, ಇಲ್ಲಿ ಕಾಣುವುದೇ ಕಣ್ವಾಶ್ರಮದ ಮಾರ್ಗವು.
ಸಮಿತ್ತುಗಳನ್ನು ಕೊಯ್ಯುವುದಕ್ಕಾಗಿ ಹೊರಟವರು. ಇಲ್ಲದಿದ್ದರೆ, ನಿನ
ಆಶ್ರಮಕ್ಕೆ ಬರುತ್ತಿದ್ದೆವು. ನೀನು ಆಶ್ರಮಕ್ಕೆ ತೆರಳಿ, ನಮ್ಮನ್ನು ಧನ್ಯರ
ಮಾಡು," ಎಂದೆಂದರು.

ಅರಸನು ಒಪ್ಪಿದನು; ವೈಖಾನಸರು ತಮ್ಮ ಕೆಲಸಕ್ಕಾಗಿ ಮುನ್ನಡೆ
ಸಾರಥಿಯು ರಥವನ್ನು ನಡೆಸಿ, ಕಣ್ವಾಶ್ರಮದ ಹೊರಗಿನ ತೋರಣದ
ಬಂದುಬಿಟ್ಟರು. ಅರಸನು ಆಗ ರಥವನ್ನು ನಿಲ್ಲಿಸ ಹೇಳಿ, ಕುದುರೆಗ
ನೀರಿಗೆ ಬಿಟ್ಟು ತೊಳೆಯಲು ಸಾರಥಿಗೆ ಆಜ್ಞಾಪಿಸಿ, ತನ್ನ ಅರಸೊತ್ತಿ
ವಸ್ತ್ರಾಭರಣಗಳನ್ನೆಲ್ಲ ತೆಗೆದಿಟ್ಟು, ವಿನೀತ ವೇಷದಿಂದ ಪಾದಚಾರಿ
ನಡೆದು, ಕಣ್ವಾಶ್ರಮವನ್ನು ಸೇರಿದನು.

೨. ಕಣ್ವಾಶ್ರಮ

ಪೂರ್ವಕಾಲದಲ್ಲಿ ಋಷ್ಯಾಶ್ರಮಗಳು ಜ್ಞಾನದ ದೀಪವನ್ನು ಹೊ
ಜನರ ಮನಸ್ಸಿನ ಅಂಧಕಾರವನ್ನು ಹೋಗಲಾಡಿಸುವಂತಹ ಕ್ಷೇತ್ರಗ
ದ್ದುವು. ಈ ಆಶ್ರಮಗಳು ಜನರಲ್ಲಿ ವಿದ್ಯಾಪ್ರಚಾರವನ್ನು ಮಾಡುತ್ತಿದ್ದಂ
ಜ್ಞಾನದ ಉತ್ತರೋತ್ತರ ಅಭಿವೃದ್ಧಿಗಾಗಿ ಹಗಲಿರುಳು ಸತ್ಯದ ಅನ್ವೇ
ಯನ್ನು ಗೈಯುವ ಸನ್ಯಾಸಿಗಳ ವಾಸಸ್ಥಾನವಾಗಿದ್ದುವು. ಒಂದೊ
ಆಶ್ರಮವೂ ಒಬ್ಬೊಬ್ಬ ಕುಲಪತಿಯ ನೇತೃತ್ವದಲ್ಲಿರುತ್ತಿತ್ತು. ಹತ್ತು ಸ
ವಿದ್ಯಾರ್ಥಿಗಳಿಗೆ ಉಡಲು ಬಟ್ಟೆಯನ್ನೊದಗಿಸಿ, ಉಣ್ಣಲು ಆಹಾರ
ಕೊಟ್ಟು, ನನ್ನಿಯನ್ನು ನುಡಿಯಲಿಕ್ಕೂ ತನ್ನಂತೆ ಪರರನ್ನು ಬಗೆಯುವುದ
ಕಲಿಸುವವನೆ ಕುಲಪತಿಯಾಗಿದ್ದನು.

ಈ ಋಷ್ಯಾಶ್ರಮಗಳಿಗೆ ಆ ಕಾಲದಲ್ಲಿ ರಾಜಾಶ್ರಯವು ತಪ್ಪುತ್ತಿದ್ದಿಲ್ಲ. ಅರಸನು ಅವರಿಂದ ತೆರಿಗೆಯನ್ನು ಎತ್ತುತ್ತಿದ್ದಿಲ್ಲ; ಬದಲಿಗೆ, ಅವರಿಗೆ ದ್ರವ್ಯ ಸಹಾಯವನ್ನು ಮಾಡುತ್ತಿದ್ದನು. ಒಮ್ಮೊಮ್ಮೆ ಕುಲಪತಿಯು ಆಶ್ರಮದ ಸುತ್ತುಮುತ್ತಲಿನ ನೂರಾರು ಗ್ರಾಮಗಳಿಂದ ತನಗೆ ಬರುವ ಕಂದಾಯವೆಲ್ಲವನ್ನೂ ಕುಲಪತಿಗೆ ಒಪ್ಪಿಸುವಂತೆ ತನ್ನ ಪ್ರಜೆಗಳಿಗೆ ಅರಸನು ಆಜ್ಞಾಪಿಸುತ್ತಿದ್ದನು. ಕುಲಪತಿಯು ತಾನು ಮಾಡುವಂತಹ ಜಪತಪೋನುಷ್ಠಾನಗಳ ಫಲದ ಆರನೆಯೊಂದಂಶವನ್ನು ತನಗೆ ಬಿಟ್ಟುಕೊಟ್ಟು ತನ್ನನ್ನು ಋಣಿಯನ್ನಾಗಿ ಮಾಡುವನೆಂದು ಅರಸನು ಎಣಿಸುತ್ತಿದ್ದನು.

ಇಂತಹ ಆಶ್ರಮಗಳಿಗೆ ರಾಜಾಶ್ರಯವು ಮಾತ್ರವಲ್ಲ, ಪ್ರಜಾಶ್ರಯವೂ ಬಹಳವಿದ್ದಿತು. ಯಾವ ಸಂಸ್ಥೆಯೇ ಆಗಲಿ, ಅದಕ್ಕೆ ಜನತೆಯ ಬೆಂಬಲವಿಲ್ಲದಿದ್ದರೆ ಅದು ನೆಟ್ಟಗೆ ನಿಲ್ಲಲಾರದು. ಆಶ್ರಮದ ಸುತ್ತಮುತ್ತಲಿನ ಗೃಹಸ್ಥರೆಲ್ಲರೂ ದವಸಧಾನ್ಯಗಳನ್ನೂ ಹಾಲುಮೊಸರನ್ನೂ ಒದಗಿಸಿ ಋಷಿಗಳು ಕೈಕೊಂಡ ಉದ್ದೇಶಸಾಧನೆಯಲ್ಲಿ ತಾವೂ ತಮ್ಮ ಅಳಿಲಸೇವೆಯನ್ನು ಮಾಡುತ್ತಿದ್ದರು.

ಕಣ್ವನೂ ಕುಲಪತಿಯಾಗಿದ್ದನು. ಆತನು ನಿಷ್ಠಾವಂತನಾಗಿದ್ದನು. ಬ್ರಹ್ಮಚಾರಿಯಾಗಿದ್ದು ಜ್ಞಾನದಲ್ಲಿ, ಸೇವೆಯಲ್ಲಿ, ಗುಣದಲ್ಲಿ ಹೆಸರುವಾಸಿಯಾಗಿದ್ದನು. ಆತನ ಹೆಸರು ಮನೆಮಾತಾಗಿತ್ತು.

ಕಣ್ವಾಶ್ರಮವು ಶಾಂತಿಯ ಬೀಡಾಗಿತ್ತು; ಸೌಂದರ್ಯದ ಗನಿಯಾಗಿತ್ತು; ಸಂತೋಷದ ತವರಾಗಿತ್ತು. ಮುಗಿಲನ್ನು ಚುಂಬಿಸುವ ಬೆಟ್ಟಗಳು ದೂರದಲ್ಲಿ ಉನ್ನತವಾಗಿ ನಿಂತು ಕಣ್ವಾಶ್ರಮದ ಕಾವಲುಗಾರರಂತೆ ತೋರುತ್ತಿದ್ದುವು. ಅವುಗಳ ಬುಡದಲ್ಲಿಯೇ ಮಾಲಿನೀ ನದಿಯು ಹರಿಯುತ್ತಿತ್ತು. ತೀರದಲ್ಲಿ ಬೆಳೆದ ವೃಕ್ಷಗಳ ಜೀರ್ಣಪರ್ಣಗಳು ಬಿದ್ದು ಅದರ ನೀರು ಪಾಂಡುವಾಗಿ ತೋರುತ್ತಿತ್ತು. ಅದರ ನಡುನಡುವೆ ಬೆಳೆದೆದ್ದ ಬಂಡೆಗಳಲ್ಲಿ ನಿಂತ ಮರಗಿಡಗಳನ್ನು ಬಳ್ಳಿಗಳು ಸುತ್ತುವರಿದು, ಅವುಗಳ ತಳಿರೆಲೆಗಳನ್ನು ತಮ್ಮ ಪುಷ್ಪಸ್ತಬಕಗಳಿಂದ ಅಡಗಿಸಿ ಸುಂದರವಾಗಿ ಕಾಣುತ್ತಿದ್ದುವು. ಅಲ್ಲಲ್ಲಿ ಕಮಲಪುಷ್ಪಗಳ ನೆಳಲಲ್ಲಿ ಹಂಸಮಿಥುನಗಳು ಕಣ್ಣುಗಳನ್ನು ಮುಚ್ಚಿ, ಶಾಂತಿಯ ತೊಡೆಯಲ್ಲಿ ತೂಕಡಿಸುತ್ತಿದ್ದುವು. ಹೊಳೆಯ ಮಳಲ್ದಂಡೆಯಲ್ಲಿ ಬೆಳೆದ ಮರಗಳು ತಮ್ಮ ರೆಂಬೆಗಳನ್ನು ಬಹಳ ಕೆಳಗೆ ಬಗ್ಗಿಸಿ, ನೆರಳನ್ನು ಇತ್ತಿದ್ದವು. ಆ ಮರ

ಗಳಡಿಯಲ್ಲಿ ಋಷಿಕನ್ಯೆಯರು ಕೂಡಿ, ತಂಪಾದ ಗಾಳಿಯಲ್ಲಿ ವಿಹರಿಸುತ್ತಿದ್ದ
ನಾನಾ ತರದ ಆಟಗಳನ್ನಾಡಿ ಅವರು ಎಂತಹವನನ್ನೂ ಮುಗ್ಧಗೊಳಿಸುತ್ತಿದ್ದ
ಗಿಳಿಗಳು ಅಲ್ಲಲ್ಲಿ ಮರಗಳ ಕೋಟರಗಳಲ್ಲಿ ವಾಸಮಾಡಿಕೊಂಡು, ಋ
ಗಳೊಡನೆ ವೇದಪಾಠದಿಂದ ಪರಮಾತ್ಮನನ್ನು ಸ್ತುತಿಸುತ್ತಿದ್ದುವು. ಅಲ್ಲಿ
ಬಿದಿರಮೆಳೆಗಳು ಗಾಳಿಯಲ್ಲಿ ತೊನೆದಾಡಿ, ಕೊಳಲ ಗಾನದಿಂದ ಋಷಿ
ದನಕರುಗಳನ್ನು ಆಹ್ಲಾದಪಡಿಸುತ್ತಿದ್ದುವು. ಜಿಂಕೆಯ ಮರಿಗಳು ಆಶ್ರ
ಹೊರಗಿನ ಮೈದಾನಿನಲ್ಲಿ ಯಾವ ಶಂಕೆಯೂ ಇಲ್ಲದೆ, ಯಾವ ಭಯ
ಇಲ್ಲದೆ, ನಂಬುಗೆಯಿಂದ ಮೆಲ್ಲಮೆಲ್ಲನೆ ನಡೆಯುತ್ತಿದ್ದುವು. ಮುನ್ನಡೆ
ತ್ತಿದ್ದಂತೆ ಹುಲ್ಲನ್ನು ಮೇಯುತ್ತಿದ್ದುವು. ಹುಲ್ಲನ್ನು ಮೆದ್ದು ಮರಗಳ
ಯಲ್ಲಿ ಮಲಗಿ ಮೆಲುಕಾಡುತ್ತಿದ್ದುವು.

ಇಂತಹ ಆಶ್ರಮದಲ್ಲಿ ವಾಸಮಾಡುತ್ತಿದ್ದ ಮುನಿವರ್ಯನೆ ಧನ್ಯ
ಅಂತಹ ಮುನಿವರ್ಯನ ಶಿಷ್ಯರಾಗಿ ವೇದವೇದಾಂತಗಳ ಸಾರವನ್ನು ಹೀ
ವಟುಗಳೆ ಪುಣ್ಯಜನ್ಮರು! ದುಷ್ಯಂತನು ಮೃಗಯಾವಿಹಾರಿಯಾಗಿ ಆಶ್ರ
ಅತಿಥಿಯಾಗುವ ಕೆಲ ದಿನಗಳ ಹಿಂದಕ್ಕೆ ಕಣ್ವನು ಸೋಮತೀರ್ಥಕ್ಕೆ
ಳಿದ್ದನು. ಮಗಳಾದ ಶಕುಂತಳೆಯ ಗ್ರಹಚಾರವು ಸ್ವಲ್ಪ ಪ್ರತಿಕೂಲವಿ
ದರಿಂದ ಅದಕ್ಕೆ ವಿಶಿಷ್ಟ ಜಪತಪೋನುಷ್ಠಾನಗಳಿಂದ ಪರಿಹಾರ ಮ
ಬೇಕೆಂಬುದೇ ಆತನು ಅಲ್ಲಿಗೆ ತೆರಳಿದ ಸಂಕಲ್ಪವಾಗಿತ್ತು.

ಶಕುಂತಳೆಯು ಕಣ್ವನ ಸಾಕುಮಗಳು. ಆತನೊಮ್ಮೆ ಎಂದಿನ
ಸಮಿತ್ತುಗಳನ್ನು ಕೊಯ್ದು ಹಿಂದಕ್ಕೆ ಬರುತ್ತಿದ್ದಾಗ ಹಕ್ಕಿಗಳ ನಡುವೆ ಅ
ತ್ತಿದ್ದ ಸಣ್ಣ ಹೆಣ್ಣು ಶಿಶುವೊಂದನ್ನು ಕಂಡು, ಎತ್ತಿ ಮುದ್ದಿಟ್ಟು ತನ್ನದನ
ಮಾಡಿಕೊಂಡನು. ತಾನು ಕಂಡಾಗ ಶಕುಂತಗಳೊಡನೆ ಆಡುತ್ತಿದ್ದುದರಿ
ಶಿಶುವನ್ನು ಶಕುಂತಳೆಯೆಂದು ಕರೆದನು. ಮೇನಕೆಯ ರೂಪಲಾವಣ್ಯಗ
ಸೋತು, ಮುಗ್ಧನಾಗಿ, ತನ್ನ ತಪಸ್ಸನ್ನೇ ಅವಳ ದಾಂಪತ್ಯಕ್ಕಾಗಿ ತೆತ್ತು, ಅವ
ವಿಶ್ವಾಮಿತ್ರನು ಪಡೆದ ಶಿಶುವೇ ಶಕುಂತಳೆಯಾಗಿದ್ದಳು. ಮೇನಕೆ
ದೇವಲೋಕದವಳು. ವಿಶ್ವಾಮಿತ್ರನ ತಪಸ್ಸನ್ನು ಕೆಡಿಸಲು ಇಂದ್ರನಾಜ್ಞೆಯಿ
ಭೂಮಿಗಿಳಿದು ಮುಗಿಲ ಮಧ್ಯದಲ್ಲಿ ಮಿಂಚಿ ಮಾಯವಾದ ಜ್ಯೋತಿಯ
ಮೇನಕೆಗೆ ಹೆಚ್ಚು ಹೊತ್ತು ಮರ್ತ್ಯಲೋಕದಲ್ಲಿರಲಾಗದು; ಅವಳು ಕೊನೆ
ಸಲಕ್ಕೆ ಮಗುವಿಗೆ ಮುದ್ದಿಟ್ಟು ಅದನ್ನು ಋಷಿಯ ಕೈಗೆ ಒಪ್ಪಿಸಿ

ಲೋಕಕ್ಕೆ ನಡೆದುಬಿಟ್ಟಳು. ತಾಯಿಗೆ ಬೇಡವಾದ ಮಗು ತಂದೆಗೆ ಬೇಕಾದೀತೇ? ವಿಶ್ವಾಮಿತ್ರನ ಮನಸ್ಸು ಕಲ್ಲಿನಂತಹುದು. ಬ್ರಹ್ಮತ್ವಕ್ಕಾಗಿ ಸಾಮ್ರಾಜ್ಯದ ವೈಭವಕ್ಕೆ ಹಿಂದೆ ತಿಲಾಂಜಲಿಯನ್ನಿತ್ತಿದ್ದನು. ಆತ್ಮಬಲದ ಸಾಕ್ಷಾತ್ಕಾರಕ್ಕಾಗಿ ಸಂಸಾರಕ್ಕೆ ಮುಂಚೆ ಜಲಾಂಜಲಿಯನ್ನು ಕೊಟ್ಟಿದ್ದನು. ಒಮ್ಮೆ ಸಂಸಾರಕ್ಕೆ ಬೆನ್ನು ತೋರಿಸಿದಂತೆ ಇನ್ನೊಮ್ಮೆ ಮೋಹದ ಮಡದಿಯಲ್ಲಿ ಜನಿಸಿದ ಮನೋಹರವಾದ ಮಗುವಿಗೆ ಬೆನ್ನಿಕ್ಕಿ, ಕಾಡಿನ ಹಾದಿಯನ್ನು ಹಿಡಿದನು. ಮಗುವನ್ನು ಮೇನಕೆ ಕೊಟ್ಟಲ್ಲಿಯೇ ಇಟ್ಟು, ವನಾಂತರದ ಗಿರಿಬೆಟ್ಟಗಳ ಗುಹೆಗಳ ಕತ್ತಲಲ್ಲಿ ಮೂಗು ಹಿಡಿದು ತಪಸ್ಸನ್ನಾಚರಿಸಲು ನಡೆದುಬಿಟ್ಟನು.

ತಾಯ್ತಂದೆಗಳಿಗೆ ಬೇಡವಾದ ಮಗುವು ವಿಶ್ವಕುಟುಂಬಿಯ ಕೈಸೇರಿತು. ವಿಶ್ವಕುಟುಂಬಿಯ ಆಶ್ರಮದಲ್ಲಿ ಗೌತಮಿಯ ಆರೈಕೆಯಿಂದ ಶಕುಂತಳೆ ಬಳೆದಳು. ಗೌತಮಿಯೆಂದರೆ ಬ್ರಹ್ಮವಾದಿನಿಯು; ಕಣ್ವನ ಭಗಿನಿಯು. ಶಕುಂತಳೆಯು ತನ್ನ ಸಖಿಯರೊಡನೆ ಕಣ್ವನಿಂದ ಓದುಬರಹವನ್ನು ಕಲಿತಳು. ಹಕ್ಕಿಗಳಿಂದ ಇಂಪಾಗಿ ಹಾಡಲಿಕ್ಕೆ ಕಲಿತಳು. ಹೆಣ್ಣು ಜಿಂಕೆಗಳ ಸಹವಾಸದಿಂದ ಓರೆನೋಟದ ಸೊಬಗನ್ನು ತನ್ನದನ್ನಾಗಿ ಮಾಡಿಕೊಂಡಳು. ಗಿಡಬಳ್ಳಿಗಳಿಂದ ಒಯ್ಯಾರದ ಬೆಡಗನ್ನೂ ವಿಲಾಸದ ಸಹಜತೆಯನ್ನೂ ತಿಳಿದುಕೊಂಡಳು. ಶಕುಂತಳೆಯು ಸಖಿಯರಿಂದೊಡಗೂಡಿ ತಂದೆಯಾದ ಕಣ್ವನಿಂದ ಮಾನವ ಹೃದಯದಲ್ಲಿ ಸಹಜವಾಗಿರದ ಪ್ರೇಮವನ್ನೂ ಮಾರ್ದವವನ್ನೂ ಕಲಿತುಕೊಂಡಳು. ಬಳೆದು ಯುವತಿಯಾದಾಗ ಅವಳನ್ನು ರೂಪಲಾವಣ್ಯದಲ್ಲಿಯೂ ಗುಣಶೀಲದಲ್ಲಿಯೂ ಮೀರುವವರಿದ್ದಿಲ್ಲ.

ಶಕುಂತಳೆಯ ಸೌಂದರ್ಯವು ನಿಷ್ಕಾರಣವಾಗಿಯೆ ಹೃದಯಂಗಮವಾಗಿತ್ತು. ಅವಳ ತಾಯಿ ಸುರಲೋಕದ ಸುಂದರಿ; ಅವಳ ತಂದೆ ಭೂಲೋಕದ ರಾಜರ್ಷಿ. ಸ್ವರ್ಗಮರ್ತ್ಯಗಳೆರಡರ ಸೌಂದರ್ಯವೆಲ್ಲವೂ ಅವಳಲ್ಲಿ ಹೊಂದಿಕೆಯಾಗಿದ್ದಿತು. ಅವಳ ತುಟಿ ತಳಿರಿಗೆ ಸಾಟಿ; ಅವಳ ನಳಿದೋಳ್ಗಳು ಮೆಲ್ಗೊಂಬೆಗಳಂತ್ತಿದ್ದುವು. ಅವಳ ದೇಹದಲ್ಲಿ ತೋರುವ ಯೌವನವು ಬಳ್ಳಿಯಲ್ಲಿ ತೋರುವ ಪುಷ್ಪದಂತೆ ಮನೋಹರವಾಗಿತ್ತು. ಆಶ್ರಮವಾಸಕ್ಕುಚಿತವಾದ ನಾರುಡೆಯನ್ನೆ ಉಟ್ಟಿದ್ದರೂ ಅವಳ ರೂಪಲಾವಣ್ಯವು ಕುಂದಲಿಲ್ಲ; ಕಳೆಯೇರಿತ್ತು. ಯುವತಿಯರಿಗೆ ನಾರುಡೆಯು ಸಹಜವಲ್ಲ. ಆದರೆ ಸುಂದರಿಯಾದವರಿಗೆ ಯಾವುದು ತಾನೆ ಭೂಷಣವಲ್ಲ? ಸುತ್ತಲೂ ಬೆಳೆದ

ಪಾಚಿಯು ತಾವರೆಯ ಕಾಂತಿಯನ್ನು ಹೆಚ್ಚಿಸುವುದಿಲ್ಲವೆ? ಚಂದ್ರನು ತನ್ನ ನಡುವಿನಲ್ಲಿದ್ದ ಕಪ್ಪು ಕಲೆಯಿಂದಲೂ ಕಾಂತತರನಾಗುವುದಿಲ್ಲವೆ? ಹಾಗೆಯೆ, ನಾರುಡೆಯನ್ನುಟ್ಟು, ಮುಗುಳ್ನಗೆಗಳ ಬಳೆಗಳನ್ನು ತೊಟ್ಟು, ಹೂದಳಿರ ಗೊನೆಯನ್ನು ಮುಡಿಯಲ್ಲಿಟ್ಟು, ತನ್ನ ಸಖಿಯರೊಡನೆ ಬೆಳಗಿನ ಹನಿಮಂಜಿನಂತಿದ್ದ ಪವಿತ್ರವಾದ ಪ್ರೇಮದಿಂದ ಇರುತ್ತಿದ್ದ ಶಕುಂತಳೆಯು ಕಣ್ವನಾಶ್ರಮಕ್ಕೆ ಮಕುಟಪ್ರಾಯವಾಗಿದ್ದಳು.

ಅರಸನು ಇಂತಹ ಪವಿತ್ರವಾದ ಆಶ್ರಮದ್ವಾರವನ್ನು ಪ್ರವೇಶಿಸುವಾಗ ಆತನ ಬಲಗಣ್ಣು ಸ್ಫುರಿಸಿತು. ಇದಿರಿನಲ್ಲಿ ಹಕ್ಕಿಗಳು ಸಾಲಾಗಿ ಹಾರಿ, ಆತನನ್ನು ದಾಟಿದುವು. ಕೋಗಿಲೆಯು ಮಂಗಳವನ್ನು ಹಾಡಿತು. ನವಿಲು ನರ್ತನವನ್ನು ಮಾಡಿ ತನ್ನ ಸಹಚರಿಯನ್ನು ಸಮೀಪಕ್ಕೆ ಕರೆಯಿತು. ದೂರದಲ್ಲಿ ಕೃಷ್ಣಮೃಗವೊಂದು ಮರದ ನೆರಳಲ್ಲಿ ವಿಶ್ರಮಿಸುತ್ತ, ತನ್ನ ಕೋಡಿನ ತುದಿಯಿಂದ ಹೆಣ್ಣುಮೃಗದ ವಾಮನಯನವನ್ನು ತುರಿಸಿತು. ಇದನ್ನೆಲ್ಲ ಕಂಡು ಹರ್ಷವದನನಾಗಿ ಅರಸನು ಮುನ್ನಡೆಯುತ್ತಿದ್ದಾಗ, ಕಣ್ವಾಶ್ರಮದ ಹೂದೋಟವು ಆತನ ಕಣ್ಣಿಗೆ ರಮ್ಯವಾಗಿ ಕಂಡಿತು.

ಹೂದೋಟದಲ್ಲಿ ಹೆಂಗೆಳೆಯರು ಕೆಲವರು, ಸಲ್ಲಾಪವನ್ನು ಮಾಡುವುದು ಆತನಿಗೆ ಕೇಳಿಬಂತು. ಆತನು ಅವರ ಸಲ್ಲಾಪವನ್ನು ಕೇಳಿ, ಅವರ ವಿಲಾಸಗಳ ಸಂಭ್ರಮವನ್ನು ಕಂಡು, ಮನದಣಿಯೆ ಸಂತೋಷಪಡಬೇಕೆಂದು ಎಣಿಸಿದನು. ಅವರ ದರ್ಶನವು ಮಧುರವಾಗಿತ್ತು; ಮಾತು ಇಂಪಾಗಿತ್ತು. ಸೃಷ್ಟಿಯ ಪರಮಾವಧಿಯ ಮುಕುಟವು ಮಾನವರ ಚೆಲುವಾಗಿದೆ. ಮರಗಿಡಗಳನ್ನೂ, ಬಳ್ಳಿಪೊದರುಗಳನ್ನೂ, ಸಂಧ್ಯಾಕಾಲದ ಚಿಲುಮೆಯನ್ನೂ ಹೊತ್ತಾರೆಯ ಹುರುಪನ್ನೂ ಕಂಡು ನಾವು ಆನಂದಪಡುವೆವು; ಕರು ತನ್ನ ತಾಯಿಯ ಮೊಲೆಯನ್ನು ಬಾಲವನ್ನೆತ್ತಿ ಕುಡಿಯುವುದನ್ನು ನೋಡಿ ನಾವು ನಲವೇರುವೆವು; ಅಂತೆಯೆ ನಮ್ಮ ಸಮಾಜದ, ಮಾನವ ಸಮಾಜದ ಚೆಲುವಿನ ವಿಭೂತಿಗಳನ್ನು ಕಂಡು ನಯನಗಳನ್ನು ಸಫಲವನ್ನಾಗಿ ಮಾಡಲು ಯಾರೂ ಆತಂಕಿಸುವುದಿಲ್ಲ. ಸುಂದರವಾದ ಬಣ್ಣಗಳಿಂದೊಪ್ಪುವ ತುಂಬಿಯು ತನ್ನ ರೆಕ್ಕೆಗಳನ್ನು ಅಗಲಿಸಿ ಹಾರುವಂತೆಯೆ, ಸೃಷ್ಟಿಯ ತರುಣಿಯೊಬ್ಬಳು ಆಂತರಿಕ ಪವಿತ್ರತೆಯ ರೆಕ್ಕೆಯನ್ನು ಅಗಲಿಸಿ ತೇಲುವುದಾದರೆ, ಅಂತಹ ತೇಜೋರಾಶಿಯನ್ನು ಸೌಂದರ್ಯೋಪಾಸಕನಾಗಿ, ಹರಿಯುವ ತೊರೆಗಳನ್ನು ಕಂಡಂತೆ, ಮರವನ್ನು ಸುತ್ತು

ವರಿವ ಬಳ್ಳಿಯನ್ನು ನೋಡಿದಂತೆ, ತುಂಬಿದ ಚಂದ್ರನನ್ನು ದಿಟ್ಟಿಸಿದಂತೆ, ಹರಡುವ ಬೆಳ್ದಿಂಗಳಲ್ಲಿ ವಿಹರಿಸುವಂತೆ, ಇಂಪಾಗಿ ಹಾಡುವ ಕೋಗಿಲೆಯನ್ನು ಮೈಮರೆತು ಆಲಿಸಿದಂತೆ,—ನೋಡಿ ಸಂತೋಷಿಸುವುದು ಸರಿಯಾಗಿದೆ.

ಅರಸನು ಸೌಂದರ್ಯೋಪಾಸಕನಾಗಿದ್ದನು. ಆತನು ಮರಗಳಿಗೆ ಅಡ್ಡಲಾಗಿ ನಿಂತು ತರುಣಿಯರ ಸಲ್ಲಾಪವನ್ನು ಕೇಳತೊಡಗಿದನು. ಈ ತರುಣಿಯರು ತಪಸ್ವಿಕನ್ಯೆಗಳು; ಸರಳ ಸ್ವಭಾವದವರು; ನಿತ್ಯತೃಪ್ತರು. ಈ ಬಾಲಿಕೆಯರು ಮುಗ್ಧೆಯರು; ಸ್ನೇಹಸಲ್ಲಾಪಚತುರೆಯರು. ಕಣ್ವಾಶ್ರಮದ ಸ್ತ್ರೀಯರೆಲ್ಲ ಸ್ವಾತಂತ್ರ್ಯ ಸಂಪನ್ನೆಯರಾಗಿದ್ದರು; ನಂಬಿಕೆಗೆ ಪಾತ್ರರಾಗಿದ್ದರು; ಧಾರ್ಮಿಕರಾಗಿದ್ದರು. ತಪಸ್ವಿಕನ್ಯೆಗಳು ಮೂವರಿದ್ದರು. ಅವರಲ್ಲೊಬ್ಬಳು ಶಕುಂತಳೆಯು; ಉಳಿದವರು ಪ್ರಿಯಂವದೆ ಅನಸೂಯೆಯರು. ಅವರು ತಮ್ಮ ಕೈಗಳಲ್ಲಿ ಸೇಚನಘಟಗಳನ್ನು ಹಿಡಿದುಕೊಂಡು, ಸಮೀಪವೇ ಇದ್ದ ಕೊಳದಿಂದ ನೀರನ್ನೆತ್ತಿ ಮರಗಿಡಗಳಿಗೆ ಮತ್ತು ಬಳ್ಳಿಪೊದರುಗಳಿಗೆ ಅದನ್ನು ಎರೆಯುತ್ತಿದ್ದರು.

ಈ ಉದ್ಯಾನದ ಎಲ್ಲ ಗಿಡಬಳ್ಳಿಗಳನ್ನು ಶಕುಂತಳೆಯೆ ತನ್ನ ಸಖಿಯರೊಡಗೂಡಿ ಬೆಳೆಸಿದ್ದಳು. ಅವುಗಳ ಮೇಲೆ ಇವಳಿಗೆ ತುಂಬ ಪ್ರೇಮವಿದ್ದಿತು. ಹೂ ಬಿಟ್ಟ ಲತೆಯನ್ನು ಕಂಡೊಡನೆ ಇವಳ ಕಣ್ಣುಗಳೂ ಅರಳುತ್ತಿದ್ದುವು. ತಳಿರಿಟ್ಟ ಗಿಡವನ್ನು ನೋಡಿದೊಡನೆಯೆ ಇವಳ ಕೈಗಳೂ ಮುಂದಕ್ಕೆ ನೆಗೆಯುತ್ತಿದ್ದವು. ಈ ಮರಗಿಡಗಳಲ್ಲಿ ಗೂಡುಗಳನ್ನು ಕಟ್ಟಿ, ಕಣ್ವಾಶ್ರಮದ ಶಾಂತಿಯ ಪುಣ್ಯವನ್ನು ಹೊಂದುವ ಹಕ್ಕಿಗಳ ಮೇಲೂ ಶಕುಂತಳೆಗೆ ತುಂಬ ಮಮತೆಯಿದ್ದಿತು. ಮರಗಳ ಪಾತಿಗಳಲ್ಲಿರುವ ನೀರನ್ನು ಕುಡಿಯಲೆಂದು ವಿಶ್ವಾಸದಿಂದ ಬಂದು, ಕುಪ್ಪಳಿಸಿ, ಚೀರಿ, ಗುಟುಕೆತ್ತಿ, ಎಡಬಲಕ್ಕೆ ಕಣ್ಣಿಡುವ ಹಕ್ಕಿಗಳಂತೆಯೆ ಶಕುಂತಳೆಯೂ ಕುಪ್ಪಳಿಸಿ ಮೆಲ್ಲನೆ ಸನ್ನೆಯಿಂದಲೆ ತನ್ನ ಮನಃಸಂತೋಷವನ್ನು ಸಖಿಯರಿಗೆ ತಿಳಿಸುತ್ತಿದ್ದಳು. ತಾನು ಬರುವುದನ್ನು ಕಂಡು ಹಕ್ಕಿಗಳು ಭುರ್ರನೆ ಹಾರಿದೊಡನೆ, ಶಕುಂತಳೆಯು ತನ್ನ ಮುಖವನ್ನೆತ್ತಿ ಹುಬ್ಬುಗಳ ಮೇಲೆ ಜೋಲುಬಿದ್ದ ಮುಂಗುರುಳುಗಳನ್ನು ಎಡಗೈಯಿಂದ ಮೇಲಕ್ಕೆ ಸರಿಸಿ, 'ಹಕ್ಕಿಯೇ! ನಿನ್ನಂತೆ ಹಾಡಬಲ್ಲೆ; ಆದರೆ ನಿನ್ನಂತೆ ಹಾರಲಾರೆ. ಬಾ, ಬಾ! ನನಗೂ ಹಾರಲು ಕಲಿಸು. ಎಡಗೈಯ ಮಣಿಕಟ್ಟಿನಲ್ಲಿ ನಿಂತು, ನನ್ನೊಡನೆ ಓರಗೆ ಇಟ್ಟು ಹಾಡು ಮತ್ತು ಹಾರು. ನೀನು ರೆಕ್ಕೆಯನ್ನು

ಅಗಲಿಸುವ ರೀತಿಯನ್ನು ಕಾಣುವೆನು. ನೀನು ರೆಕ್ಕೆಯನ್ನು ಬಡೆಯುವ ವಿಧಾನವನ್ನು ಕಾಣುವೆನು. ಬಾ! ಬಾ!' ಎಂದು ಬಾಲಿಶವಾಗಿ ಹೇಳುವ ಶಕುಂತಳೆಯ ಹೃದಯವು ಎಷ್ಟು ಕವಿತಾಕುಶಲವಾಗಿರಬೇಕು? ಎಷ್ಟು ಸುಂದರವಾಗಿರಬೇಕು?

ಅವರಿಂದು ಎಂದಿನಂತೆ ಕೊಡಗಳನ್ನು ಹಿಡಿದು ಆಶ್ರಮದಿಂದ ಹೂದೋಟಕ್ಕೆ ಹೊರಡುವಾಗ ದೂರದಲ್ಲಿ ಕೆಲವು ಹಕ್ಕಿಗಳು ಆಕಾಶದಲ್ಲಿ ಹಾರುತ್ತಿದ್ದವು. ಅವುಗಳಲ್ಲೊಂದು ಮೇವಿಗಾಗಿ ಧರೆಗಿಳಿದುಬಿಟ್ಟಿತ್ತು. ಅದರ ಒಡನಾಡಿಯು ಅಂತೆಯೆ ಕೆಳಗಿಳಿಯುವುದರೊಳಗೆ ಅದಕ್ಕೆ ಪ್ರತಿಕೂಲವಾಗಿ ಗಾಳಿಯು ಬೀಸಿತು. ಅದು ಆ ಗಾಳಿಯ ಆಹತಿಗೆ ಸಿಕ್ಕಿ ಚೀರುವಾಗ ಶಕುಂತಳೆಯು ಬೆಚ್ಚಿ ಬಿದ್ದು, ಮೇಲೆ ನೋಡುತ್ತ, ತನ್ನ ಸಖಿಯರೊಡನೆ ಮುಂದಕ್ಕೆ ಓಡುತ್ತಿರುವಷ್ಟರಲ್ಲಿ ಆ ಹಕ್ಕಿ ಕೆಳಗಿಳಿದು, ತನ್ನ ಸಹಚರಿಯೊಡನೆ ಕುಪ್ಪಳಿಸಿ ಮೇಯುತ್ತಿತ್ತು. ಶಕುಂತಳೆಯು ಮತ್ತೆ ಸಖಿಯರೊಡನೆ ಏನೋ ಪಿಸುಗುಟ್ಟುವಾಗ ಹಕ್ಕಿಗಳು ಅಲ್ಲಿಂದ ಮಾಯವಾಗಿಬಿಟ್ಟುವು. ಹಕ್ಕಿಗಳು ಅಲ್ಲಿಂದ ಮಾಯವಾಗಿದ್ದರೂ ಶಕುಂತಳೆಗಾನಂದವಾಯಿತು. ಈ ದೃಶ್ಯವನ್ನು ಮನಸ್ಸಿನ ಪಟದಲ್ಲಿ ಲೇಖಿಸಿ, ಸಖಿಯರು ಮತ್ತೆ ಮೆಲ್ಲನೆ ಅಲ್ಲಿಂದ ಕೊಳಕ್ಕೆ ನೀರಿಗಾಗಿ ಕೊಡಗಳನ್ನು ಹಿಡಿದು ನಡೆದರು.

ಕೊಳದ ತೀರದಲ್ಲಿ ನಿಂತು ಒಂದು ಹುಲ್ಲೆಮರಿಯು ನೀರನ್ನು ಕುಡಿಯುತ್ತಿತ್ತು. ಅದರ ಮೋರೆ ನೀರೊಳಗಿತ್ತು. ಅದರ ಕಣ್ಣುಗಳು ಹೆದರುತ್ತಿದ್ದುವು. ಅದರ ದೇಹವು ಬಳಲಿ ಬಳುಕುತ್ತಿತ್ತು. ಶಕುಂತಳೆಯು ಬೇಗನೇ ಧಾವಿಸಿ, ಅದರ ಬೆನ್ನಿನ ಮೇಲೆ ಕೈಯಾಡಿಸಿ, "ಅಹಾ! ಹರಿಣಶಿಶುವು ತುಂಬಾ ಬಳಲಿದೆ. ಪ್ರಿಯಂವದೆಯೆ! ಇಂದು ಹೊತ್ತಾರೆಯಿಂದ ನಾನೀ ಮರಿಯನ್ನು ಕಂಡಿಲ್ಲ. ಮುದ್ದು ಎಲ್ಲಿ ಮಾರ್ಗ ತಪ್ಪಿಬಳಲಿತೊ!" ಎಂದು ದುಃಖದಿಂದ ಹೇಳುವಾಗ ಅನಸೂಯಾಪ್ರಿಯಂವದೆಯರು, ಎಳದಳಿರು, ತೃಣದೂರ್ವಾಂಕುರಾದಿಗಳನ್ನು ಆಯ್ದಾಯ್ದು ಜಿಂಕೆಮರಿಗೆ ಬಾಯೊಳಗೆ ಬೆರಳಿಟ್ಟು ತಿನ್ನಿಸಿದರು. ಬಳುಕುವ ಮರಿಯ ಮುಖವನ್ನೆತ್ತಿ ಮಾತನಾಡಿಸಿದರು. ಮರಿಯ ಮೈಯ ಬಿಳಿಯ ಚಿತ್ರಗಳನ್ನು ತೊಯ್ದು ಶುಚಿಪಡಿಸಿದರು. ಮತ್ತು ಆಶ್ರಮದತ್ತ ತಿರುಗಾಡುತ್ತಿದ್ದ ಅದರ ತಾಯಿಯೆಡೆಗೆ ಅದನ್ನು ಕಳುಹಿಸಿಕೊಟ್ಟರು.

ಸಖಿಯರು ಹಾಡುತ್ತ ಕೊಳದಿಂದ ನೀರನ್ನು ತಂದು, ಮರಗಿಡಗ

ಪಾತಿಗೆ ಅದನ್ನು ಎರೆದರು. ತಮ್ಮಷ್ಟೆ ಬೆಳೆದ ಗಿಡಗಳನ್ನು ಅಕ್ಕತಂಗಿಯರೆಂದು ಕರೆದರು. ತಮಗಿಂತ ಉದ್ದ ಬೆಳೆದ ಗಿಡಗಳನ್ನು 'ತಾಯೆ!' ಎಂದು ಸಂಬೋಧಿಸಿದರು. ಬೀಳಲುಗಳಿಂದ ತುಂಬಿದ ವೃಕ್ಷ ಮಹಾಶಯನನ್ನು ಕಂಡು 'ಅಜ್ಜ, ನಮಿಸುವೆವು,' ಎಂದು ಬಾಗಿದರು. ನಾಚಿಕೆಯ ಗಿಡವನ್ನು ನಾಚುವಂತೆ ಮಾಡಿ, 'ಗಿಡವೆ! ನಾವು ನಿನ್ನ ತಂಗಿಯರು, ಗಂಡಸರಲ್ಲ,' ಎಂದು ಉಪಹಾಸ ಮಾಡಿದರು. ಗುಲಾಬಿ ಗಿಡವು ತಮ್ಮ ಸೆರಗನ್ನು ಎಳೆದು ನಿಲ್ಲಿಸಿದೊಡನೆಯೆ, 'ಗುಲಾಬಿ! ನಿನ್ನೊಡನೆ, ಮಾತಾಡಲು ಮರೆತೆವು. ಸೆರಗು ಬಿಡು,' ಎಂದು ಅಂಗಲಾಚಿ ಸೆರಗನ್ನು ಹಿಂದಕ್ಕೆ ಎಳೆದರು.

ಆಡುತ್ತ ನೀರೆರೆಯುತ್ತಿದ್ದುದರಿಂದ ಅವರಿಗಾಯಾಸವಾಗಲಿಲ್ಲ. ಆದರೆ ಶಕುಂತಳೆಯು ಅವರಲ್ಲಿ ಸ್ವಲ್ಪ ಪೇಶಲಳು; ಮೈಕಟ್ಟು ಅಷ್ಟು ಬಿಗಿಯಾಗಿದ್ದಿಲ್ಲ. ಆದುದರಿಂದ ಅವಳು ಆಟದಲ್ಲಿ ಸೋತಳು. ಯಾರಿಂದ ಬೇಗನೇ ಹತ್ತು ಮರಗಳಿಗೆ ನೀರೆರೆದು ಮುಗಿಯುತ್ತದೆಂದು ನೋಡುವ ಆಟದಲ್ಲಿ, ಪ್ರಿಯಂವದೆಯು ತನ್ನ ಹತ್ತೂ ಸಸಿಗಳಿಗೆ ನೀರೆರೆದು, ಶಕುಂತಳೆಯು ಇನ್ನೂ ನೀರೆರೆಯದೆ ಉಳಿದ ಎರಡು ಸಸಿಗಳಿಗೆ ತಾನೇ ನೀರು ಸುರಿದು, ಶಕುಂತಳೆಯನ್ನು ಸೋಲಿಸಿ ಬಿಟ್ಟಳು. ಪ್ರಿಯಂವದೆಯು ಗೆದ್ದಳೆಂದು ನ್ಯಾಯಾಧೀಶೆಯಾಗಿ ನಿಂತ ಅನಸೂಯೆಯ ತೀರ್ಮಾನವಾಯಿತು. 'ಅವಳು ಗೆದ್ದರೇನು? ನಾನು ಸೋತವಳಲ್ಲವೆ?' ಎಂದು ಶಕುಂತಳೆಯು ಓರೆಗಣ್ಣಿನಿಂದ ಪ್ರಿಯಂವದೆಯನ್ನು ಕಾಣುತ್ತ ಅನುಸೂಯೆಗೆಂದಳು. 'ಆಗಲಿ, ಸೋತವರು ಗೆದ್ದವರಿಗೆ ಋಣಿಗಳು! ಗೆದ್ದವರು ಸೋತವರಿಗೆ ಧನಿಗಳೇನು?' ಎಂದು ನುಡಿದು, 'ಶಕುಂತಳೆ, ನಿನ್ನ ಬಲದಲ್ಲಿ ಬೀಜವೊಂದು ಮೊಳೆತಿದೆ! ಮೊಳಕೆಯು ಎಷ್ಟು ಧೈರ್ಯದಿಂದ ಮೇಲ್ಮೊಗವಾಗಿ ನಿಂತಿದೆ!' ಎಂದು ಪ್ರಸ್ತಾವವನ್ನೆ ಅನಸೂಯೆಯು ಬದಲಾಯಿಸಿದಳು. ಎಲ್ಲರ ಕಣ್ಣುಗಳೂ ಅದರೆಡೆಗೆ ಸುಳಿದುವು. ಇನ್ನು ನಾಲ್ಕು ದಿವಸಗಳಲ್ಲಿ ಅದು ಬಳ್ಳಿಯಾಗಿ ಹರಡಬಹುದೆಂಬ ನಿರೀಕ್ಷೆಯು ಹೊರಟಿತು; ಅದರಲ್ಲಿ ಸ್ವಲ್ಪ ಸಂಶಯವಾಯಿತು; ವಿಮರ್ಶೆಯಾಗಿ, ಇನ್ನೂ ಎಂಟು ದಿವಸಗಳು ಹೋದರೂ ಹೋಗಬಹುದೆಂದಾಯಿತು. ಅಲ್ಲಿಂದ ಅವರು ಮತ್ತೆ ಮುನ್ನಡೆದರು.

ಅಷ್ಟರಲ್ಲಿ ಗಾಳಿ ಬೀಸಿತು. ಕೇಸರವೃಕ್ಷವೊಂದರ ಚಿಗುರುಗಳು ಗಾಳಿಯಲ್ಲಿ ಚಲಿಸುತ್ತಿದ್ದುವು. ಶಕುಂತಳೆಯಾಗ ಈ ವೃಕ್ಷವು ತನ್ನ ಬೆರಳುಗಳಿಂದ ತನ್ನನ್ನು ತ್ವರೆಗೊಳಿಸುತ್ತಿದೆಯೆಂದು ಅದನ್ನು ಆದರಿಸಲು ಅದರಡಿಗೆ

ನಡೆದಳು. ಪ್ರಿಯಂವದೆಯು, "ಎಲೆ ಶಕುಂತಳೆ! ಅಲ್ಲಿಯೇ ಮುಹೂರ್ತ
ನಿಲ್ಲು. ನೀನಲ್ಲಿರುವುದರಿಂದ ಕೇಸರವೃಕ್ಷವು ಒಂದು ಲತೆಯಿಂದ ಕೂಡಿದಂತೆ
ಶೋಭಿಸುತ್ತದೆ"ಯೆಂದು ಹೇಳಿದೊಡನೆಯೆ, ಶಕುಂತಳೆಗೆ ಪರಮಾನಂದ
ವಾಯಿತು. ತನ್ನನ್ನು ಲತೆಗೆ ಹೋಲಿಸಿದುದಕ್ಕಾಗಿ ಆಕೆ ಬಹಳ ಮೆಚ್ಚಿದಳು.
ಹೆಂಗಸರು ಸ್ವಭಾವದಿಂದಲೆ ಪ್ರಶಂಸೆಗೆ ಮೆಚ್ಚುತ್ತಾರೆ, ಎಂದ ಮೇಲೆ ಪ್ರಿಯಂ
ವದೆಯಂತಹ ಮಾತುಬಲ್ಲ ಗೆಳತಿಯ ಪ್ರಶಂಸೆಯನ್ನು ಕೇಳಿ, ಯಾವಾಕೆ
ತನ್ನ ಸೆರಗನ್ನು ಎಳೆದು, ಲಜ್ಜೆಯಿಂದ ಒಂದು ಹಜ್ಜೆ ಮುಂದಿಟ್ಟು, ಒಯ್ಯಾರದ
ಬಿಜ್ಜೆಯಿಂದ 'ಕೇಸರವೃಕ್ಷವು ನಿಜವಾಗಿಯೂ ಚೆನ್ನಾಗಿ ಬೆಳೆದಿದೆ'ಯೆಂದು
ಉತ್ತರವನ್ನು ಕೊಡಲಿಕ್ಕಿಲ್ಲ?

ಎದುರಿನಲ್ಲಿ ಒಂದು ಮಾವಿನ ಮರವಿದ್ದಿತು. ಅದಷ್ಟು ಬೆಳೆದ ಮರವಲ್ಲ;
ಆದರೆ ಸಣ್ಣ ಗಿಡವೂ ಅಲ್ಲ. ಅಲ್ಲಿಯೆ ಸಮೀಪದಲ್ಲಿ ಒಂದು ಮಲ್ಲಿಗೆಯ
ಬಳ್ಳಿಯೂ ಬೆಳೆದಿತ್ತು. ಶಕುಂತಳೆಯು ಆ ಬಳ್ಳಿಗೆ ವನಜ್ಯೋತ್ಸ್ನೆಯೆಂದು
ಹೆಸರಿಟ್ಟು ಮಾವಿನ ಮರದ ಸ್ವಯಂವರವಧುವೆಂದು ಮಾಡಿ, ಆ ಬಳ್ಳಿಯು
ಮರವನ್ನೇರುವಂತೆ ಸಾಧಿಸಿದ್ದಳು. ಈಗ ಮರವನ್ನೇರಿದ ಬಳ್ಳಿಯು ತನ್ನ
ಪುಷ್ಪಗುಚ್ಛಗಳಿಂದ ಅಲ್ಲಲ್ಲಿ ಮರವನ್ನು ಮರೆಯಿಸಿತ್ತು. ಶಕುಂತಳೆಯು
ಸಂತೋಷದಿಂದ ಈ ವಧೂವರರನ್ನು ಕಂಡು ಮನದಣಿಯೆ ಕೊಂಡಾಡಿದಳು;
ಕಣ್ದಣಿಯೆ ದಿಟ್ಟಿಸಿದಳು.

ಪ್ರಿಯಂವದೆಯು ಬಳ್ಳಿಯನ್ನು ದಿಟ್ಟಿಸುತಿದ್ದ ಶಕುಂತಳೆಯನ್ನು ಕಂಡು
ಮನದಲ್ಲಿಯೆ ಸಂತಸಗೊಂಡಳು; ನಸುನಕ್ಕಳು. 'ಎಲೌ ಅನಸೂಯೇ!
ಶಕುಂತಳೆ ಈ ವನಜ್ಯೋತ್ಸ್ನೆಯನ್ನು ಏಕೆ ಈ ತೆರ ನೋಡುವಳೆಂದು
ಬಲ್ಲೆಯಾ?' ಎಂದು ವಕ್ರವಾಗಿ ಸಖಿಯೊಡನೆ ಅವಳು ಕೇಳಿದಳು. ಸ್ವಾಭಾ
ವಿಕವಾಗಿಯೆ ಸರಳೆಯಾದ ಅನಸೂಯೆ ತಾನರಿಯೆ ಎಂದೆಂದುಬಿಟ್ಟಳು.
ಆಗ ಪ್ರಿಯಂವದೆಯು, 'ಈ ವನಜ್ಯೋತ್ಸ್ನೆಯು ಅನುರೂಪವಾದ ವೃಕ್ಷವನ್ನು
ಸೇರಿದಂತೆ, ತಾನೂ ತನಗೆ ತಕ್ಕ ವರನನ್ನು ಸೇರಬೇಕೆಂದು ಯೋಚಿಸಿ ನಿಂತಿರು
ವಳೆ'ಂದು ಹೇಳಿದೊಡನೆಯೆ, ಶಕುಂತಳೆಗೆ ಇಲ್ಲದ ಕೋಪವು ಬಂದಿತು;
ತರುಣಿಯರು ಅನ್ಯರ ವಿವಾಹಸಂಬಂಧದ ವಿಷಯ ಉಪನ್ಯಾಸಗಳನ್ನು
ಕೊಡಲು ಸಿದ್ಧರು. ಪರಿಹಾಸ್ಯಕ್ಕೇ ಆಗಲಿ, ಬೇರೆಯವರು ತಮ್ಮ ವಿವಾಹಾ
ಗಳ ವಿಷಯ ಮಾತಾಡುವುದೆಂದರೆ, ಅವರಿಗೆ ಅಸಹ್ಯವಾಗುವುದು; ಇಲ್ಲದ

ಕೋಪವು ಉಂಟಾಗುವುದು. ಅವಳು ಕೋಪದಿಂದ ಕಿಡಿಯಾದಳು. ಆದರೆ ಆ ಕೋಪವು ದುಷ್ಟವಾದುದಲ್ಲ. ಕೋಪದಂತೆ ಕಂಡುಬಂದರೂ, ಅದೊಂದು ತೆರದ ಅಸೂಯೆಯಾಗಿತ್ತು. ಶಕುಂತಳೆಯು ತನ್ನ ಮುಖವನ್ನು ಸ್ವಲ್ಪ ಅಲ್ಲಾಡಿಸಿ, ನಿಂತವಳು ಫಕ್ಕನೆ ಬದಿಗೆ ತಿರುಗಿ, 'ನಿಜ. ಇದು ನಿನ್ನದೇ ಮನಸ್ಸಿನ ಇಚ್ಛೆ'ಯೆಂದು ನವಮಾಲಿಕೆಯ ಬಳ್ಳಿಗೆ ನೀರೆರೆದಳು.

ನವಮಾಲಿಕೆಯು ಪುಷ್ಪಿತಳಾಗಿದ್ದಳು. ಹೂಗಳು ಅರಳಿದ್ದುವು. ತುಂಬಿಯೊಂದು ಹೂವೊಂದರಲ್ಲಿ ಅಡಗಿ, ನೀರವವಾಗಿ ಜೇನಿನ ಸವಿಪಾನವನ್ನು ಮಾಡುತ್ತಿದ್ದಿತು. ನೀರೆರೆದುದರಿಂದ ಬಳ್ಳಿಯು ಬಳುಕಿ, ತಳಿರೆಲೆಗಳು ನಡುಗಿ, ಹೂ ಈಷತ್ ಕಂಪಿಸಿತು. ಒಳಗಿನ ತುಂಬಿಯು ಬೆದರಿತು; ಭೂಕಂಪವುಂಟಾಯಿತೆಂದು ಭ್ರಮಿಸಿರಬಹುದು. ಅದು ಹೂವಿಂದ ಹಾರಿ ಶಕುಂತಳೆಯ ಮುಖಕ್ಕೆ ಎರಗಿತು. ಆಕೆ ಬೆದರಿ, ತನ್ನ ಕೊಡವನ್ನು ಕೆಳಕ್ಕೆ ಚೆಲ್ಲಿಬಿಟ್ಟಳು. ಹೆದರಿದ ಆ ತುಂಬಿಯು ಅಲ್ಲಿಯೇ ಝೇಂಕರಿಸುತ್ತ ಸುಳಿಯುತ್ತಿತ್ತು. ಶಕುಂತಳೆಯು ಹೆದರಿ ನಡುಗುತ್ತಿದ್ದಳು. ಓರೆ ನೋಟದಿಂದ ಅವಳು ಅದನ್ನು ನೋಡುತಿದ್ದಾಗ, ಆ ತುಂಬಿಯು ಶಕುಂತಳೆಯ ಕಣ್ಣು ಕಮಲವೆಂದು ಭ್ರಾಂತಿಗೊಂಡಿತೊ ಎಂಬಂತೆ ಅವಳ ನೇತ್ರವನ್ನು ಬಂದು ಚುಂಬಿಸಿತು. ಮತ್ತೆ ಹಿಂದಕ್ಕೆ ಹಾರಿ ತಿರಿಗೊಮ್ಮೆ ಅವಳ ಕಿವಿಯ ಸಮೀಪದಲ್ಲಿಯೆ ಗುಟ್ಟನ್ನು ಹೇಳಲಿಕ್ಕೆ ಬಂದಿತೋ ಎಂಬಂತೆ ಜಿನುಗಿತು; ಆಕೆ ಹೆದರಿ, ತನ್ನ ಎರಡೂ ಕೈಗಳನ್ನೂ ಕೊಡುತ್ತ ತುಂಬಿಯನ್ನು ನಿವಾರಿಸುತ್ತಿದ್ದಾಗ, ತುಂಬಿಯು ಬಂದು ಅವಳ ತುಟಿಯನ್ನು ಚುಂಬಿಸಿತು. ಶಕುಂತಳೆಯು ಅಧೀರೆಯಾಗಿ, 'ಎಲೌ ಸಖಿಯರೆ! ಈ ದುರುದುಂಬಿಯಿಂದ ಬಾಧೆ ಪಡುವ ನನ್ನನ್ನು ರಕ್ಷಿಸಿರಿ, ರಕ್ಷಿಸಿರಿ,' ಎಂದು ಮೊರೆಯಿಟ್ಟಳು. ಸಖಿಯರಾಗ ಕೇವಲವಾದೊಂದು ಭ್ರಮರದ ಬಾಧೆಯನ್ನು ತಡೆಯಲಾರದ ತಮ್ಮ ಸಖಿಯನ್ನು ಕಂಡು, ಆಕೆ ಬಾಧೆಹೊಂದುವುದರಲ್ಲಿಯೂ ಒಂದು ತರದಲ್ಲಿ ಸಂತೋಷಪಟ್ಟು, ನಸುನಗುತ್ತ, 'ನಿನ್ನನ್ನು ರಕ್ಷಿಸುವುದಕ್ಕೆ ನಾವೇನು ಗಂಡಸರೆ? ದುಷ್ಯಂತನಿಗೆ ಮೊರೆಯಿಡು. ಅವನಲ್ಲವೆ ರಕ್ಷಿಸುವವನು?' ಎಂದು ಸುಮ್ಮನೆ ನಿಂತುಕೊಂಡರು. ಅಸಹಾಯಳಾದ ಶಕುಂತಳೆಯು ಸಖಿಯರ ಧೃಷ್ಟತನವನ್ನು ಕಂಡು ಒಂದು ಹಜ್ಜೆ ಮುಂದಿಟ್ಟರೂ ತುಂಬಿ ಅವಳನ್ನೆ ಅನುಸರಿಸುತ್ತಿತ್ತು. ಸಖಿಯರು ನಿಂತಲ್ಲಿಯೆ ನಿಂತು ಸಂತೋಷಪಡುತ್ತಿದ್ದರು.

ಮರಗಳ ಮರೆಯಲ್ಲಿ ನಿಂತ ಅರಸನು ಶಕುಂತಳೆಯ ಇಂಪಾದ ಮಾತು ಗಳನ್ನು ಕೇಳಿ, ಸುಂದರವಾದ ಶರೀರವನ್ನು ಕಂಡು ಆಕೆಯಲ್ಲಿ ಅನುರಾಗಪಟ್ಟಿ ದ್ದನು. ಆದರೆ, ಶಕುಂತಳೆಯು ಕಣ್ವನ ಮಗಳಾಗಿದ್ದಿದ್ದರೆ, ಅಭೀಷ್ಟವು ಸಿದ್ಧಿಸುವಂತಿಲ್ಲ. ಕಾರಣ, ಕ್ಷತ್ರಿಯರು ಬ್ರಾಹ್ಮಣ ಕನ್ನಿಕೆಗಳನ್ನು ವಿವಾಹ ವಾಗುವುದು ಆ ಕಾಲದಲ್ಲಿ ಸ್ಮೃತಿವಿರೋಧವಾಗಿದ್ದಿತು. ಹಾಗಿದ್ದರೂ ಅವನ ಮನಸ್ಸು ಪದೇ ಪದೇ ಶಕುಂತಳೆಯನ್ನೆ ಬಯಸುತಿತ್ತು. ತುಂಬಿಯು ರಸಿಕ ನಂತೆ ಶಕುಂತಳೆಯ ಮುಖಕಮಲದ ಬಳಿಯಲ್ಲಿ ಸುಳಿದಾಡುವಾಗ, "ತುಂಬಿಯೇ ಧನ್ಯವು! ನಾನು ತತ್ವಾನ್ವೇಷಿಯಾಗಿ ಹಿಂದುಳಿದೆನು," ಎಂದು ಆತನು ಅಸೂಯೆಪಟ್ಟಿದ್ದನು. ಅಂತೂ ಮೃಗಬೇಟೆಗಾಗಿ ಬಂದ ದುಷ್ಯಂತ ಮಹಾರಾಜನು ಕಣ್ವಾಶ್ರಮಕ್ಕೆ ಬಂದು ಮದನನ ಬೇಟೆಗೆ ಸಿಕ್ಕಿಬಿಟ್ಟಿದ್ದನು. ಆಗತಾನೆ ಆತನಿಗೆ ತನ್ನನ್ನು ಪ್ರಕಾಶಗೊಳಿಸಿ, ಮುನಿಕನ್ಯೆಯರೊಡನೆ ಬೆರೆಯ ಲಿಕ್ಕೆ ಚೆನ್ನಿನಂತಹ ಸಂದರ್ಭವೊಂದು ಒದಗಿತು.

ತನ್ನ ಹೆಸರನ್ನು ಎತ್ತಿದೊಡನೆ ಮರೆಯಲ್ಲಿದ್ದ ಅರಸನಿಗೆ ತನ್ನನ್ನು ಕಾಣಿಸಿ ಕೊಳ್ಳಲಿಕ್ಕೆ ಸಂದರ್ಭವೊಂದು ಒದಗಿತು. "ಪುರುಕುಲದರಸು ದುರುಳರನ್ನು ಶಿಕ್ಷಿಸುವಾಗ ಮುಗ್ಧೆಯರಾದ ನಿಮ್ಮಲ್ಲಿ ಅವಿನಯವನ್ನು ಮಾಡುವವರು ಯಾರು?" ಎಂದೆ ಆತನು ಮುಂದಾದನು. ಮುನಿಕನ್ಯೆಯರಿಗೆ ಆಶ್ಚರ್ಯ ವಾಯಿತು! ಸ್ವಲ್ಪಮಟ್ಟಿಗೆ ಅವರು ಅವಾಕ್ಕಾದರು.

---

೩. ಪ್ರಥಮ ಸಂದರ್ಶನ

ಶಕುಂತಳೆಯು ಹೆದರಿ ಚಕಿತಳಾದಾಗ ದುಷ್ಯಂತ ಮಹಾರಾಜನು ಋಷಿಕನ್ಯೆಯರಿಗೆ, 'ಹೆದರಬೇಡಿ'ರೆಂದು, ಬಾಣಗಳನ್ನು ಜಗ್ಗಿಜಗ್ಗಿ ಕಠೋರವಾದ ತನ್ನ ಬೆರಳುಗಳ ಶಾಂತಿಮಯವಾದ ಅಂಗೈಯನ್ನು ತೋರಿಸಿದನು. ಇಂತಹ ಘಟನೆಯು ಆ ಋಷಿಕನ್ಯೆಯರಿಗೆ ಅಭೂತಪೂರ್ವವಾಗಿತ್ತು. ಆದರೆ, ಅವರು ಹೆದರಿ ಅಥವಾ ಲಜ್ಜೆಯಿಂದ, ಬಂದವನೊಡನೆ ಮಾತಾಡದಿರಲಿಲ್ಲ. ಏಕೆಂದರೆ ಕುಲಪತಿಯು ಆಶ್ರಮವನ್ನೆ ಬಿಟ್ಟು ತೆರಳುವಾಗ, ಶಕುಂತಳೆಗೂ ಆಕೆಯ ಸಖಿಯರಿಗೂ ಅತಿಥಿಗಳನ್ನು ಚೆನ್ನಾಗಿ ಉಪಚರಿಸಬೇಕೆಂದು ಹೇಳಿಕೊಂಡು ಹೋಗಿದ್ದನು. ಅತಿಥಿಗಳಿಗೆ ಉಪಚಾರ ಮಾಡಿದಷ್ಟು ಸಾಕಾಗುವುದಿಲ್ಲ

ಬಳಲಿ ಬಂದವರು, ವಿಶೇಷ ಅಭಿಮಾನವಿಟ್ಟು ಬಂದವರು, ತೆರೆದ ಹೃದಯ ಸ್ಥಾನಕ್ಕೆ ಸ್ವೀಕರಿಸುವ ನೆಗೆದ ಕೈಯ ಸುಸ್ವಾಗತವನ್ನು ಬಯಸುವರು. ಮುಂದೆ ನೀಡಿದ ಹಸ್ತದ ಔದಾರ್ಯಕ್ಕೆ ಪರಮಾನ್ನಭೋಜನವೂ ಕೀಳಾಗಿದೆ. ಯಾವಾತನ ಸ್ವಾಗತವು ಅತಿಥಿಯ ಅಭಿಮಾನವಿದ್ದಷ್ಟು ಸ್ಪಷ್ಟವಾಗಿಲ್ಲವೊ ಆತನ ಸತ್ಕಾರವನ್ನು ಅತಿಥಿಯು ಸಂತೋಷದಿಂದ ಕೈಗೊಳ್ಳುವುದಿಲ್ಲ. ಹಿಂದೆ, ನಚಿಕೇತನೆಂಬ ವಿದ್ಯಾರ್ಥಿಯು ಯಮಧರ್ಮನ ಅತಿಥಿಯಾಗಿದ್ದನು. ಆದರೆ, ಯಮಧರ್ಮನು ಮನೆಯಲ್ಲಿರಲಿಲ್ಲ; ಹೊರಗೆ ತೆರಳಿದ್ದನು. ಅತಿಥಿಯು ಅನ್ನಾಹಾರಗಳಿಲ್ಲದೆ, ಮೂರು ದಿವಸ ಯಮಧರ್ಮನ ಹೊರಬಾಗಿಲಲ್ಲೆ ಉಳಿಯಬೇಕಾಯಿತು. ಕಡೆಗೆ ಅಶರೀರ ವಾಣಿಯೊಂದು ಈ ವಿಷಯದಲ್ಲಿ ಯಮಧರ್ಮನಿಗೆ ಎಚ್ಚರ ಕೊಟ್ಟೊಡನೆಯೆ, ಆತನು ಮನೆಗೆ ಧಾವಿಸಿ, ವಿನಯಭಕ್ತಿಗಳಿಂದ ಅತಿಥಿಯನ್ನು ಉಪಚರಿಸಲು, ನಚಿಕೇತನು ತನಗೆ ಆತ್ಮವಿದ್ಯೆಯನ್ನೂ ಸ್ವರ್ಗನರಕಗಳ ಸ್ವರೂಪವನ್ನೂ ತಿಳಿಸಬೇಕೆಂದನು. ಅತಿಥಿಗೆ ಯಮಧರ್ಮನು ಹೆದರಿ, ರಹಸ್ಯವಾದುದನ್ನು ಬಯಲುಮಾಡಬೇಕಾಯಿತು; ಆತ್ಮವಿದ್ಯೆಯೆಲ್ಲವನ್ನು ತಿಳಿಸಬೇಕಾಯಿತು – ಎಂಬ ಕಥೆಯಿದು ಪೂರ್ವಿಕರ ಅತಿಥಿಸತ್ಕಾರದ ವಿಷಯ ತುಂಬ ಹೇಳುತ್ತಿದೆ.

ಅನಸೂಯೆಯು ಬಂದ ಅತಿಥಿಯನ್ನು ಕಂಡು ತಮ್ಮ ಸಖಿಯು ಕೇವಲ ಭೃಂಗಕ್ಕೆ ಹೆದರಿದಳೆಂದು ಶಕುಂತಳೆಯನ್ನು ಬೆರಳಿಟ್ಟು ತೋರಿಸಿದಳು. ಅರಸನಾಗ ಶಕುಂತಳೆಯನ್ನು ದಿಟ್ಟಿಸಿ, 'ತಪಸ್ಸು ವರ್ಧಿಸುತ್ತಿದೆಯೇ?' ಎಂದು ಕೇಳಿದೊಡನೆ, ಶಕುಂತಳೆಯು ತಲೆ ಬಾಗಿಸಿ ಸುಮ್ಮನಿದ್ದಳು. ಗಂಡಸರ ಕಣ್ಣಿನಲ್ಲಿ ಕಠೋರತೆಯಿರಬೇಕು; ಇಲ್ಲದಿದ್ದರೆ, ಗಂಡಸರ ಕಣ್ಣನ್ನು ಕಂಡೊಡನೆ ಹೆಂಗಸರೇಕೆ ತಲೆ ಬಗ್ಗಿಸಬೇಕು?

ದುಷ್ಯಂತ ಮಹಾರಾಜನಿಗೆ ಸಖಿಯರು ಫಲಮೂಲಾದಿಗಳಿಂದ ಅರ್ಘ್ಯವನ್ನಿತ್ತರು. ಸುತ್ತಾಡಿ ಬಂದುದರಿಂದ ಆಯಾಸವಾಗಿರಬಹುದೆಂದು ಅಲ್ಲಿಯೇ ಬೆಳೆದಿದ್ದ ಸಪ್ತಪರ್ಣವೃಕ್ಷದಡಿಯಲ್ಲಿದ್ದ ಜಗುಲಿಯ ಮೇಲೆ ಸುಖಾಸೀನನಾಗಲು ಸಖಿಯರು ಆತನೊಡನೆ ಕೇಳಿಕೊಂಡರು. ಆತನು ಕುಳಿತೊಡನೆಯೆ ತಾವೂ ಒಂದು ಪಕ್ಕದಲ್ಲಿ ವಿಶ್ರಮಿಸಿದರು. ಅರಸನು ಆ ಕನ್ನಿಕೆಗಳ ಸ್ನೇಹವು ಸಮಾನವಾದ ಪ್ರಾಯದಿಂದಲೂ ರೂಪದಿಂದಲೂ ರಮಣೀಯವಾಗಿರುವುದೆಂದು ಹೊಗಳಿ, ಸಂಭಾಷಣೆಗೆ ಮೊದಲುಮಾಡಿದನು. ಆತನು ಮಧುರ

ವಾಗಿಯೂ ಚಮತ್ಕಾರವಾಗಿಯೂ ಮಾತನಾಡುವುದನ್ನು ಕಂಡು, ಸಖಿಯರಿಗೆ ಆತನಾರಿರಬಹುದೆಂಬ ಜಿಜ್ಞಾಸೆಯುಂಟಾಯಿತು. ಶಕುಂತಳೆಗಾದರೊ, ಆತನು ಯಾರೆಂದು ತಿಳಿಯಬೇಕೆಂಬ ಆಶೆಯಿತ್ತು. ಮಾತ್ರವಲ್ಲ, ಆಕೆಯ ಮನಸ್ಸು ತಪೋವನಕ್ಕೆ ವಿರೋಧವಾದ ವಿಕಾರಕ್ಕೆ ಒಳಗಾಗಿತ್ತು. ಅವಳೆದೆಯು ಉಬ್ಬಿತ್ತು; ಮುಖವೆತ್ತಿ ಅತಿಥಿಯನ್ನು ಕಣ್ಣಿಟ್ಟು ಕಾಣಲಾರದಾದಳು; ಸಖಿಯರೊಡನೆ ಸಂಭಾಷಣೆಯಲ್ಲಿ ಸೇರಲೂ ಅವಳಿಗೆ ಅಶಕ್ಯವಾಯಿತು. ಅನಸೂಯೆಯು ತನಗೆ ಸಹಜವಾದ ಚಪಲತೆಯಿಂದ ಅತಿಥಿಯ ಕುಲಗೋತ್ರಗಳನ್ನು ವಿಚಾರಿಸಿದಳು. ಅರಸನಾಗ ತನ್ನ ನಿಜಸ್ಥಿತಿಯನ್ನು ತಿಳಿಸಲು ಸಂಕೋಚಪಟ್ಟು, ತಾನೊಬ್ಬನು ಪುರುಕುಲದರಸನ ಧರ್ಮಾಧಿಕಾರಿಯೆಂದೂ ಆಶ್ರಮವಾಸಿಗಳ ಕ್ರಿಯೆಗಳು ನಿರ್ವಿಘ್ನವಾಗಿರುವುದರ ವಿಷಯ ನೋಡಲು ತಾನು ಬಂದವನೆಂದೂ ತಿಳಿಸಿದೊಡನೆಯೆ, ಶಕುಂತಳೆಯು ತನ್ನ ಸೆರಗನ್ನು ಎಳೆದು, ತಾನು ಕೂತ ರೀತಿಯನ್ನು ಬದಲಾಯಿಸಿ, ನಸುನಗುತ್ತ ಶೃಂಗಾರ ಲಜ್ಜೆಯನ್ನು ತೋರ್ಪಡಿಸಿದಳು.

ಶಕುಂತಳೆಯು ಮಾತನಾಡದೆ ಕುಳಿತಿರುವುದನ್ನು ಕಂಡು ಮತ್ತು ಆಕೆಯು ಲಜ್ಜಿತಳಾದುದನ್ನು ನೋಡಿ ಪ್ರಿಯಂವದೆಗೆ ಶಕುಂತಳೆಯಲ್ಲಿ ಸಂಶಯವೊಂದು ಹುಟ್ಟಿತು. ಅರಸನು ಮಾತನಾಡುತ್ತಿದ್ದಾಗ, ಆಕೆ ನುಡಿಯುತ್ತಿದ್ದಿಲ್ಲ. ಆತನು ತನ್ನ ದೃಷ್ಟಿಯನ್ನು ಆಕೆಯೆಡೆಗೆ ತಿರುಗಿಸಿದೊಡನೆಯೆ ಶಕುಂತಳೆಯು ತನ್ನ ಕಣ್ಣನ್ನು ಬೇರೆ ಕಡೆಗೆ ಹರಡಿಸುತ್ತಿದ್ದಳು. ಆದರೆ, ತಿರುಗೊಮ್ಮೆ ಆತನ ದರ್ಶನವನ್ನು ಕದಿಯುತ್ತಿದ್ದಳು. ಇದನ್ನೆಲ್ಲ ಕಂಡು ಶಕುಂತಳೆಗೆ ಪರಿಹಾಸ ಮಾಡಬೇಕೆಂದು, ಅರಸನಿಗೆ ಕೇಳಿಸದಂತೆ ಪ್ರಿಯಂವದೆಯು, 'ಸಖಿ, ಈಗ ಇಲ್ಲಿ ತಂದೆಯಾದ ಕಣ್ವನು ಇದ್ದಿದ್ದರೆ–' ಎಂದು ಗುಟ್ಟಿನಿಂದ ಹೇಳಿದೊಡನೆಯೆ, ಸರಳೆಯಾದರೂ ಶಕುಂತಳೆಯು ಕೋಪದಿಂದ, 'ಇದ್ದರೇನಾಗುತ್ತಿತ್ತು?' ಎಂದು ಆಕೆಯನ್ನು ಪ್ರಶ್ನಿಸಿದಳು. 'ತನ್ನ ಜೀವಿತ ಸರ್ವಸ್ವದಿಂದ ಈ ಅತಿಥಿಯನ್ನು ಕೃತಾರ್ಥನನ್ನಾಗಿ ಮಾಡುತ್ತಿದ್ದನು,' ಎಂದು ಪ್ರಿಯಂವದೆಯು ವಾಗ್ಬಾಣ ಬಿಟ್ಟೊಡನೆಯೆ, 'ಬಿಡಿ ಬಿಡಿ, ಮನಸ್ಸಿನಲ್ಲಿ ಏನೋ ಇಟ್ಟುಕೊಂಡು ಮಾತಾಡುತ್ತಿರುವಿರಿ. ನಿಮ್ಮ ಮಾತು ಕೇಳಲಾರೆ,' ಎಂದು ಶಕುಂತಳೆ ಸುಮ್ಮನಿದ್ದುಬಿಟ್ಟಳು. ಕಣ್ವನ ಜೀವಿತ ಸರ್ವಸ್ವವಾದ ಶಕುಂತಳೆಗೂ ಕೋಪವೆಂಬುದಿದ್ದಿತು.

ತನ್ನ ವಿಷಯವಾಗಿ ಸಖಿಯರು ಕೇಳಿಕೊಂಡಂತೆ ತಾನೂ ಸಖಿಯರ ವಿಷಯ ಕೇಳುವೆನೆಂದನು ಅರಸನು. ಸಖಿಯರು ಆತನಿಗೆ ಶಕುಂತಳೆಯ ಜನ್ಮವೃತ್ತಾಂತವನ್ನು ತಿಳಿಸಿದರು. ಆತನು ಅದನ್ನು ಬಹಳ ಕುತೂಹಲ ದಿಂದಲೂ ಗೌರವದಿಂದಲೂ ಶ್ರವಣ ಮಾಡಿದನು. ಶಕುಂತಳೆಯು ಭೂಮಿ ತಲದತ್ತಣಿಂದ ಹೊರಟ ಜ್ಯೋತಿಯಲ್ಲವೆಂದೂ ಆಕಾಶದೊಳುದಿಸಿದ ಮಿಂಚು ಎಂದೂ ತಿಳಿದು, ತನ್ನ ಮನೋರಥವು ಸಿದ್ಧಿಸಿತೆಂದೂ ಹಿಗ್ಗಿದನು. ಎಕ್ಕೆಯ ಗಿಡದಲ್ಲಿ ಮೇಲಿಂದ ಉರುಳಿ ಬಿದ್ದದ್ದು ಮಲ್ಲಿಗೆ ಹೂವೆಂದು ಆತನು ನೆನೆಸಿದನು. ಆದರೆ, ಸಖಿಗಳ ಮುಖದಿಂದ ಇನ್ನೊಂದು ವಿಷಯವನ್ನು ಆತನು ತಿಳಿಯ ಬಯಸಿದನು. 'ನಿಮ್ಮಾ ಸಖಿಯು ತಪೋವನ ನಿವಾಸವನ್ನು ಮದುವೆಯುನಕ ಮಾತ್ರ ಕೈಗೊಳ್ಳುವವಳೊ, ಅಥವಾ ಯಾವಜ್ಜೀವವೂ ತನ್ನಂತೆ ವಿಶಾಲನಯನ ಗಳುಳ್ಳ ಹೆಣ್ಣು ಜಿಂಕೆಗಳೊಡನೆ ಅಂತಹ ವ್ರತವನ್ನು ಸಾಧಿಸುವವಳೊ? ಇದನ್ನು ನಾನು ತಿಳಿಯಲಿಚ್ಛಿಸುವೆನು,' ಎಂದು ಅರಸನು ಮತ್ತೆ ಕೇಳಿದನು.

ಪ್ರಿಯಂವದೆಯು, 'ಆರ್ಯನೆ! ಈಕೆ ಪರಾಧೀನೆ. ಈಕೆಯ ತಂದೆಗೆ ಈಕೆಯನ್ನು ತಕ್ಕ ವರನಿಗೆ ಕೊಡಬೇಕೆಂಬ ಸಂಕಲ್ಪವಿದೆ,' ಎಂದು ಹೇಳಿ ಬಿಟ್ಟಳು. ಅರಸನ ಸಂದೇಹವೆಲ್ಲ ಮಾಯವಾಯಿತು. ಆತನ ಅಭಿಲಾಷೆಯು ಕೈಗೂಡಿದಂತಾಯಿತು; ಕೆಂಡವಾಗಿರಬಹುದೆಂದು ಊಹಿಸಿದುದು ಮಾಣಿಕ್ಯ ವೆಂದಾಯಿತು.

ಅರಸನು ಮೇಲಿಂದ ಮೇಲೆ ತನ್ನ ವಿಷಯವಾಗಿಯೇ ಪ್ರಸ್ತಾವವೆತ್ತು ವುದನ್ನು ಕಂಡು ಶಕುಂತಳೆಗೆ ಲಜ್ಜೆಯಾಗಿದ್ದಿತು. ಮತ್ತು ತನ್ನ ಚೇಷ್ಟಾ ವಿಕಾರಗಳನ್ನು ಬಿಗಿಯಾಗಿ ಹಿಡಿಯಲೂ ಆಕೆಗೆ ಅಶಕ್ಯವಾಗಿದ್ದಿತು. ತಾನಿಲ್ಲಿ ರುವುದು ತನ್ನ ಶಾಲೀನತೆಗೆ ಕುಂದೆಂದು ಆಕೆ ಎಣಿಸಿದಳು. ಆಗತಾನೆ ಅವಳಿಗೊಂದು ನೆವ ಸಿಕ್ಕಿತು. ಪರಪುರುಷರೆದುರಿಗೆ ತನ್ನ ವಿವಾಹ ವಿಷಯ ವಾಗಿ ಪ್ರಿಯಂವದೆ ಮಾತಾಡುವುದನ್ನು ಆಕೆ ಅಸಂಬದ್ಧವೆಂದು ತಿಳಿದಳು. ಕೋಪಗೊಂಡವಳಂತೆ ನಟಿಸಿ, ಪ್ರಿಯಂವದೆಯ ಮೇಲೆ ಹುಸಿ ಕೋಪದಿಂದ ಅನಸೂಯೆಯನ್ನು ಕುರಿತು, 'ಅನಸೂಯೆ! ನಾನು ಹೋಗುವೆನು. ಅಸಂಬದ್ಧ ವಾಗಿ ಪ್ರಿಯಂವದೆ ಮಾತಾಡುತ್ತಿರುವಳು. ಅವಳ ನಡತೆಯನ್ನು ಆರ್ಯೆಯಾದ ಗೌತಮಿಗೆ ತಿಳಿಸುತ್ತೇನೆ'ಎಂದು ಶಕುಂತಳೆಯು ಎದ್ದು ನಿಂತಳು. ಅನಸೂಯೆ ಯಾಗ ತನ್ನ ಸಖಿಗೆ, ಅತಿಥಿವಿಶೇಷವನ್ನು ಬಿಟ್ಟು ಹೋಗುವುದು ಶಿಷ್ಟಸಂಪ್ರ

ದಾಯುವಲ್ಲವೆಂಥು ಸೂಚಿಸಿದರೂ, ಶಕುಂತಳೆಯು ಯಾವುದನ್ನೂ ಆಡದೆ ನಡೆದುಬಿಟ್ಟಳು.

ಸಿಟ್ಟುಗೊಂಡ ಸಖಿಯನ್ನು ಅಷ್ಟೇ ಸಿಟ್ಟುಗೊಂಡ ಪ್ರಿಯಂವದೆ ತಡೆದು ಬಿಟ್ಟಳು. ಇಲ್ಲದಿದ್ದರೆ, ಮಕ್ಕಳಂತೆ ದೂರು ಹೇಳುವುದೆಂದರೇನು? 'ಸಖಿ! ಇದು ನಿನಗುಚಿತವಲ್ಲ!' ಎಂದು ಹುಬ್ಬನ್ನು ಗಂಟಿಕ್ಕಿ ಹೆದರಿಸಿಬಿಟ್ಟಳು ಪ್ರಿಯಂವದೆ.

'ಏತಕ್ಕೆ ಹೋಗಬಾರದು!' ಎಂದು ಶಕುಂತಳೆ ಹಿಂದಕ್ಕೆ ತಿರುಗಿದಳು.

'ಸಸಿಗಳಿಗೆ ಎರಡು ಸಾರಿ ನೀರೆರೆಯುವ ಸಾಲ ಹೊತ್ತಿರುವೆ. ಬಾ! ತೀರಿಸಿಕೊಂಡು ಹೋಗುವೆ,' ಎಂದು ಬಲಾತ್ಕಾರದಿಂದ ಶಕುಂತಳೆಯನ್ನು ಪ್ರಿಯಂವದೆ ಎಳೆದುಬಿಟ್ಟಳು.

ನಡೆದ ಶಕುಂತಳೆ ತಡೆಯಲ್ಪಟ್ಟು ನಿಂತಳು. ನಿಂತವಳೆ, ಪ್ರಿಯಂವದೆಯ ಕೈದಿಯಾದಳು. ಪ್ರಿಯಂವದೆಯು ಪ್ರಿಯವಾದುದನ್ನು ಮಾತ್ರ ಆಡುವುದಿಲ್ಲ; ಅಪ್ರಿಯವಾದುದನ್ನೂ ಮಾಡಲಾಪಳು. ಪ್ರಿಯವೋ ಅಪ್ರಿಯವೋ ಅದವಳಿಗೇ ಗೊತ್ತು. ಇರಲಿ. ಶಕುಂತಳೆಯು ಹಿಂತಿರುಗಿದುದು ಅತಿಥಿಯನ್ನು ಇನ್ನೊಮ್ಮೆ ಕಾಣಬಹುದೆಂದು. ಆದರೆ, ಇಚ್ಛೆಯು ಪ್ರಾಪ್ತವಾದರೂ, ಸಂದರ್ಭವು ಅಗ್ರಾಹ್ಯವಾಗಿತ್ತು. ಗೆದ್ದ ಪ್ರಿಯಂವದೆಯ ಎದುರು ಸೋತು ಹೋದ ಶಕುಂತಳೆಯ ಮುಗ್ಧ ಸ್ವಭಾವದ ಮೂರ್ತಿಯು ಚಿತ್ರಗತವಾದಂತೆ ಬಿಮ್ಮನೆ ನಿಂತಿತ್ತು. ಅರಸನಿಗೆ ಕನಿಕರವುಂಟಾಗಿ, ಮಾತಿನ ಸೆರೆಗೆ ಒಳಗಾದ ತನ್ನ ಪ್ರಿಯೆಯನ್ನು ಬಿಡಿಸಲು ಆತನು ಇಚ್ಛಿಸಿದನು. 'ಅಮ್ಮಾ ಪ್ರಿಯಂವದೆಯೆ! ಸಖಿಯಲ್ಲಿ ಕರುಣೆದೋರು. ನೀರೆರೆದು ಆಯಾಸಪಟ್ಟಿರುವಳು. ಅವಳ ಕೈಯೆಲ್ಲ ಪಾತ್ರೆ ಹಿಡಿದು ಕೆಂಪಾಗಿದೆ; ಎದೆಯಿಂದ ಇನ್ನೂ ನಿಡುಸುಯ್ಯು ಹೊರಡುತಿದೆ. ಕೂದಲು ಜೋಲುಬಿದ್ದಿದೆ. ಬೆವರು ಹನಿಯುತ್ತದೆ. ಈಕೆ ಆಶ್ರಮಕ್ಕೆ ಹೋಗಿ ವಿಶ್ರಮಿಸಲಿ. ನಾನು ಈಕೆಯ ಸಾಲವನ್ನು ತೀರಿಸುವೆನು,' ಎಂದು ತನ್ನ ಬೆರಳಲ್ಲಿ ಶೋಭಿಸುತ್ತಿದ್ದ ಉಂಗುರವನ್ನು ತೆಗೆದು ಪ್ರಿಯಂವದೆಗೆ ಕೊಡಲಿಚ್ಛಿಸಿದನು. ಆ ಉಂಗುರದಲ್ಲಿ 'ದುಷ್ಯಂತ ಮಹಾರಾಜ' ಎಂದಿದ್ದ ಏಳಕ್ಷರಗಳ ಪ್ರಭಾಪಂಕ್ತಿಯನ್ನು ಕಂಡು ಎಲ್ಲರೂ ಬೆರಗಾದರು. ಅರಸನು ಈ ಸಂಗತಿಯನ್ನು ಅಡಗಿಸಿಡಲಿಕ್ಕೆ ಪ್ರಯತ್ನಿಸಿದನು. ಆದರೆ, ಮನುಷ್ಯರನ್ನು ಬೇಗನೆ ಅಳೆಯಬಲ್ಲ ಪ್ರಿಯಂವದೆಗೆ ಅತಿಥಿಯ ಸ್ವರೂಪವು ತಿಳಿದಂತಾಯಿತು.

ಆಕೆಯು ಸಖಿಯನ್ನು ಕಂಡು, "ಸಖಿ! ಕರುಣಾಳುವಾದ ಆರ್ಯನಿಂದ ಅಥವಾ ಮಹಾರಾಜನಿಂದ ಬಿಡುಗಡೆಯಾದೆ; ಆರ್ಯನ ಮಾತಿನಿಂದಲೇ ಋಣಮುಕ್ತೆಯಾದೆ, ಹೋಗು," ಎಂದೆಂದು ಅರಸನ ಅಂಗುಲೀಯವನ್ನೂ ಸ್ವೀಕರಿಸಲಿಲ್ಲ; ಶಕುಂತಳೆಯನ್ನೂ ತಡೆದು ನಿಲ್ಲಿಸಲಿಲ್ಲ.

ಈ ಮೇಲಿನ ದೃಶ್ಯವು ಶ್ರೇಷ್ಠವಾದ ಕವಿತೆಯೆಂದು ಹೇಳಬಹುದು. ಸಖಿಯರ ಇಚ್ಛೆಗೆ ವಿರುದ್ಧವಾಗಿ, ಅತಿಥಿಯ ಮನೋಭಿಲಾಷೆಗೆ ಪ್ರತಿಕೂಲ ವಾಗಿ, ಸಖಿಯರ ಮಾತನ್ನು ಅಲ್ಲಗಳೆದು ಹೋಗಿಬಿಟ್ಟ ಶಕುಂತಳೆಯು ಪ್ರಿಯಂವದೆಯ ಮಾತಿಗೆ ಸೆರೆಯಾಳಾದಳು. ಏನು ಮಾಡಬೇಕೆಂದು ತೋಚದ ಸರಳೆಯು ಇಕ್ಕಟ್ಟಿನ ಪ್ರಸಂಗದಲ್ಲಿ ಸಿಲುಕಿದಾಗ, ವಸ್ತುವಿನೊಡನೆ ಸೌಂದರ್ಯ ಸೇರಿದಾಗ ಆನಂದವು ಪರಿಣಾಮವಾಗುವಂತಾಗಿ, ದುಷ್ಯಂತನಿಗೆ ಕನಿಕರದೊಡನೆ ನಸುನಗುವಂತಾಯಿತು. ಈ ಪುಟ್ಟ ಪ್ರಸಂಗದಲ್ಲಿ ಪ್ರಿಯಂ ವದೆಯು ಮಾಡಿದ ಸತ್ವಪರೀಕ್ಷೆಯಲ್ಲಿ ಅರಸನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ಆತನು ಸಖಿಯರ ಮೆಚ್ಚುಗೆಯನ್ನು ಪಡೆದನು. ಮತ್ತೆ ಪ್ರಿಯಂವದೆಯು ಶಕುಂತಳೆಗೆ ಇನ್ನು ತೆರಳಬಹುದೆಂದು ಸೂಚಿಸಿದರೂ ಶಕುಂತಳೆಯು ಅಲ್ಲಿಂದ ಕದಲಲಿಲ್ಲ. "ನನ್ನನ್ನು ತಡೆಯುವುದಕ್ಕೂ ಬಿಡುವು ದಕ್ಕೂ ನೀನಾವಳು?" ಎಂದು ಪರುಷವಾಗಿಯೇ ಅವಳು ಮಾತಾಡಿದಳು. ಕೈದಿಯು ಜೈಲು ತೆರೆದರೂ, ಹೊರ ಹೋಗಲು ಇಚ್ಛಿಸಳು. ಕಾರಣ, ಬಂಧನವು ನಿಜವಾದ ಮಾವನ ಮನೆಯಾಗಿತ್ತು.

ಹುಸಿಮುನಿಸಿನ ಶಕುಂತಳೆಗೆ ತನ್ನ ಪ್ರಿಯನಿಂದ ಅಗಲುವ ಇಷ್ಟವಿದ್ದಿಲ್ಲ. ಆದರೆ ಆಶ್ರಮದಲ್ಲಿ ಕೋಲಾಹಲವೆದ್ದಿತು. ದುಷ್ಯಂತ ಮಹಾರಾಜನು ಕಾಣು ವುದಿಲ್ಲವೆಂದು ಆತನನ್ನು ಹುಡುಕುತ್ತ ಬಂದ ಸೈನಿಕರು ತಪೋವನದನಕ ನಡೆದಿದ್ದರು. ಸೈನಿಕರ ರಥಗಳನ್ನು ಕಂಡು ಹೆದರಿದ ಆನೆಯೊಂದು ಹಿಂಡಿನಿಂದ ತಪ್ಪಿ ಧರ್ಮಾರಣ್ಯವನ್ನು ಹೊಕ್ಕಿತು. ಅದು ವೇಗವಾಗಿ ಓಡುತ್ತಿದ್ದಾಗ ಮರಗಳು ಅದರೊಡನೆ ಸಂಘರ್ಷವಾಗಿ ಉರುಳಿದುವು. ಬಳ್ಳಿಗಳ ಸಂಕುಲವು ತನ್ನ ಕಾಲುಗಳನ್ನು ಬಂಧಿಸಿದರೂ, ಮರವೊಂದಕ್ಕೆ ತನ್ನ ದಾಡೆಯು ಬಡೆದು ತುಂಡಾದರೂ ಅದು ಹುಲ್ಲೆಗಳ ಗುಂಪನ್ನು ಭೇದಿಸಿ ತಪೋವನಕ್ಕೆ ವಿಘ್ನವನ್ನು ತಂದೊಡ್ಡುವಂತೆ ವರ್ತಿಸಿತು. ಸೈನಿಕರ ಕುದುರೆಗಳ ಖುರಗಳಿಂದೆದ್ದ ಧೂಳು ಬಿಸಿಲಿಗೆ ಒಣಗುವ ಒದ್ದೆ ವಲ್ಕಲವನ್ನು ದೂಷಿಸಿತು. ತಪೋವನವಾಸಿಗಳೆಲ್ಲರೂ

ಹೆದರಿ, ತಪೋವನದ ಪ್ರಾಣಿಗಳ ರಕ್ಷಣೆಗೋಸ್ಕರ ಸನ್ನದ್ಧರಾದರು. ಮುನಿ ಕನ್ಯೆಗಳು ಅರಸನೊಡನೆ ಪರ್ಣಶಾಲೆಗೆ ಹೋಗಲು ಅನುಮತಿಯನ್ನು ಕೇಳಿ ಕೊಂಡರು. ಅರಸನು ತಾನು ಆಶ್ರಮಕ್ಕೆ ಬಾಧೆಯುಂಟಾಗದಂತೆ ಪ್ರಯತ್ನಿ ಸುವೆನೆಂದನು. ಶಕುಂತಳೆಯಿಂದೊಡಗೂಡಿದ ಸಖಿಯರು ಆಶ್ರಮದತ್ತ ನಡೆದರು. ಏಕಾಕಿಯಾದ ದುಷ್ಯಂತನು ವನದತ್ತ ತಿರುಗಿದನು. ಆದರೆ ಶಕುಂತಳೆ ಅರಸನಲ್ಲಿ ಮೋಹಗೊಂಡಿದ್ದಳು. ತನ್ನ ಪ್ರಿಯನನ್ನಗಲಿ ಪರ್ಣ ಶಾಲೆಗೆ ಹೋಗುವುದು ಆಕೆಗೆ ಸಾಧ್ಯವಾಗಿದ್ದಿಲ್ಲ. ಭೂಕಂಪದ ನಡುಕ, ಜಲಪ್ರಳಯದ ಆಕ್ರಮಣ, ಮಳೆಗಾಳಿ ಚಳಿಗಳ ಇರವು—ಇವೊಂದೂ ಪ್ರೇಮವನ್ನು ಕದಲಿಸಲಾರವು. ಸೂಜಿಯಂತಿರುವ ದರ್ಭೆಯು ತನ್ನ ಕಾಲಿಗೆ ಚುಚ್ಚಿತೆಂದು ತಡೆದು ಕುಡಿನೋಟವನ್ನು ಹಿಂದಕ್ಕೆ ತಿರುಗಿಸಿ ಪ್ರಿಯನನ್ನೊಮ್ಮೆಗೆ ಶಕುಂತಳೆ ಕಂಡಳು; ಗೋರಂಟಿಯ ಮರದ ಕೊನೆಗೆ ತನ್ನ ನಾರುಡೆ ಸಿಕ್ಕಿಲ್ಲ ದಿದ್ದರೂ ಅದನ್ನು ಬಿಡಿಸಿಕೊಳ್ಳುವ ನೆವದಿಂದ ನಿಂತು ತನ್ನನ್ನೆ ಹಿಂದಕ್ಕೆ ನೋಡುವ ಅತಿಥಿಯನ್ನು ನೋಡಿ ಲಜ್ಜಿತಳಾದಳು. ಹಾಗೆಯೇ ಅರಸನ ದೇಹವು ವನದತ್ತ ಹೋಗುತ್ತಿದ್ದರೂ ಆತನ ಮನಸ್ಸು ಆಶ್ರಮದತ್ತ ಹರಿಯು ತ್ತಿತ್ತು. ಅಂತೂ ಶೂನ್ಯಹೃದಯನಾದ ಅರಸನು ಸೈನಿಕರೆಡೆಗೆ ತೆರಳಿದನು; ಶೂನ್ಯಹೃದಯಳಾದ ಶಕುಂತಳೆಯು ಪರ್ಣಶಾಲೆಯತ್ತ ನಡೆದಳು.

---

೪. ಕಣ್ವಾಶ್ರಮದ ಅತಿಥಿ

ದುಷ್ಯಂತನು ತನ್ನ ಸೈನಿಕರೆಲ್ಲರನ್ನು ಕಂಡನು. ಅವರು ಸುತ್ತಾಡಿ ಬಹಳ ಬಳಲಿದ್ದರು. ಹಗಲೆನ್ನದೆ ಬಿಸಿಲೆನ್ನದೆ ಅಡವಿಗಳಲ್ಲಿ ಸುತ್ತಾಡಿ ಅವರಿಗೆ ಸಾಕಾಗಿದ್ದಿತು. ಹೊತ್ತಿಗೆ ಸರಿಯಾಗಿ ಹೊಟ್ಟೆಗಿಲ್ಲದೆ, ಬೆಟ್ಟದ ಜೋಗಿನ ನೀರನ್ನು ಕುಡಿದು, ಸುಟ್ಟ ಮಾಂಸವನ್ನು ಅವರು ತಿನ್ನಬೇಕಾಗಿದ್ದಿತು. ಅವರಿ ಗೆಲ್ಲ ಬೇಟೆಯಲ್ಲಿ ಉತ್ಸಾಹವು ತಗ್ಗಿತ್ತು. ಆದರೆ, ಅರಸನ ಮನಸ್ಸಿಗೆ ವಿರೋಧ ವಾಗಬಹುದೆಂದು ಯಾರೂ ಉಸಿರೆತ್ತುವಂತಿದ್ದಿಲ್ಲ. ಸ್ವತಃ ಕ್ಲಾಂತರಾದರೂ ಅವರು ಬೇಟೆಯ ಸಹಸ್ರ ಗುಣಗಳನ್ನು ಅರಸನ ಮುಂದೆ ಹಾಡುತ್ತಿದ್ದರು. ಬೇಟೆಯಿಂದ ಮೇದಸ್ಸು ಜೀರ್ಣವಾಗಿ, ಹೊಟ್ಟೆಯು ಕೃಷವಾಗಿ, ದೇಹವು ಉತ್ಸಾಹಭರಿತವಾಗುವುದೆಂದೊಬ್ಬನು ಅಭಿಪ್ರಾಯಪಟ್ಟನು. ಬೇಟೆಯ ಸಮ

ಯದಲ್ಲಿ ಮೃಗಗಳ ಭಯಕ್ರೋಧಗಳ ಪ್ರವೃತ್ತಿಯನ್ನು ಚೆನ್ನಾಗಿ ಪರಿಶೀಲಿಸ ಬಹುದೆಂದು ಇನ್ನೊಬ್ಬನು ಮಾತೆತ್ತಿದನು. ಬೇಟೆಯಲ್ಲಿ ಸ್ಥಿರವಲ್ಲದ ಗುರಿಗೆ ಹೊಡೆಯಬೇಕಾದುದರಿಂದ ಧನ್ವಿಗಳಿಗದೊಂದು ಹೆಚ್ಚಳಿಕೆಯೆಂದು ಮಗು ದೊಬ್ಬನೆಂದನು. ಬೇಟೆಯೆಂಬುದು ವ್ಯಸನವಲ್ಲವೆಂದೂ ಅದೊಂದು ವಿನೋದ ವೆಂದೂ ಇನ್ನೊಬ್ಬನು ಹೇಳಿಮುಗಿಸಿದನು. ಆದರೆ, ಅರಸನ ಪರಮಮಿತ್ರನಾದ ಮಾಢವ್ಯನೆಂಬ ಬ್ರಾಹ್ಮಣ ವಟುವು ಮಾತ್ರ ದುಷ್ಟ ಮೃಗಗಳಲ್ಲಿ ಹೆಚ್ಚಿನವು ಕೊಲ್ಲಲ್ಪಟ್ಟುದರಿಂದ, ಬೇಟೆಯನ್ನು ಮುಗಿಸಿ ರಾಜಧಾನಿಗೆ ಹಿಂತೆರಳು ವುದುತ್ತಮವೆಂದನು. ಹಾಗೆಯೇ ಅರಸನಿಗೂ ಬೇಟೆಯಲ್ಲಿ ಉತ್ಸಾಹವಿದ್ದಿಲ್ಲ. ಆಶ್ರಮದ ಬಳಿ ಕ್ರೂರ ಮೃಗಗಳಿದ್ದಿಲ್ಲ. ಅಲ್ಲಿದ್ದ ಜಿಂಕೆಗಳನ್ನು ಬೇಟೆಯಾಡು ವುದೆಂದರೆ, ಅವುಗಳ ಕಣ್ಣುಗಳು ಶಕುಂತಳೆಯ ಕಣ್ಣುಗಳಂತೆ ವಿಶಾಲವಾಗಿ ದ್ದುದರಿಂದ ಬಾಣಗಳನ್ನು ಬಿಡಲು ಆತನಿಗೆ ಕೈ ಬರುತ್ತಿದ್ದಿಲ್ಲ. ಆದುದರಿಂದ, "ಕಾಡುಕೋಣಗಳು ನೀರಿನಾಶ್ರಯದಲ್ಲಿ ಮುಳುಗುತ್ತಿರಲಿ; ಮೃಗಗಳು ಮರ ಗಳಡಿಯಲ್ಲಿ ಮೆಲುಕಾಡುತ್ತಿರಲಿ; ಹಂದಿಗಳು ಮುಸ್ತೆಯನ್ನು ಕಿತ್ತು ನೆಮ್ಮದಿ ಯಿಂದ ಪಲ್ವಲಗಳಲ್ಲಿ ಬಿದ್ದುಕೊಳ್ಳಲಿ; ನನ್ನೀ ಚಾಪದ ಹೆದೆಯು ಶಿಥಿಲವಾಗಿ ವಿಶ್ರಾಂತಿ ಹೊಂದಲಿ," ಎಂದು ತನ್ನ ಸೇನಾಪತಿಗೆ ಅರಸನು ಆಜ್ಞಾಪಿಸಿದನು. ಸೇನಾಪತಿಗೂ ಸೈನಿಕರಿಗೂ ಇದನ್ನು ಕೇಳಿ ಮಹದಾನಂದವಾಗಿರಬೇಕು. ಅರಸನಪ್ಪಣೆಯಂತೆ ಸೇನಾಪತಿಯು ತನ್ನ ಸೈನಿಕರೆಲ್ಲರಿಗೂ ತಪೋವನದ ಸಮಿಾ ಪಕ್ಕೆ ಬಾರದಂತೆ ಆಜ್ಞೆಯಿತ್ತನು.

ಅರಸನೇನೊ ಬೇಟೆಯನ್ನು ನಿಲ್ಲಿಸಿದ್ದನು. ಜಿಂಕೆಗಳನ್ನು ಕಂಡೊಡನೆಯೆ ಅವನಿಗೆ ಶಕುಂತಳೆಯ ನೆನಪಾಗುತ್ತಿತ್ತು. ಶಕುಂತಳೆಯು ಇವುಗಳ ಸಹವಾಸ ದಿಂದ ಕುಡಿನೋಟದ ಸೊಬಗನ್ನು ಕಲಿತಿದ್ದಳೊ, ಶಕುಂತಳೆಯಿಂದ ಈ ಹರಿಣ ಶಿಶುಗಳು ದೃಷ್ಟಿಕ್ಷೇಪದ ಪಾಠವನ್ನು ಕಲಿತವೊ ಎಂಬುದು ಸ್ವಲ್ಪ ಸಂಶಯ ವಾಗಿತ್ತು. ಶಕುಂತಳೆಯೆಂದರೆ, ವಿಶ್ವಾಮಿತ್ರನಿಗೆ ಮಗಳಾಗಿ ಹುಟ್ಟಿ, ಕಣ್ವನಾ ಶ್ರಮದಲ್ಲಿ ಕನ್ನಿಕೆಯಾಗಿ ಬೆಳೆದು, ಅಲ್ಲೇ ಬೆಳೆದಿದ್ದ ಎಕ್ಕೆಯ ಗಿಡದ ಮೇಲೆ ಉರುಳಿದ್ದ ದುಂಡುಮಲ್ಲಿಗೆಯ ಹೂವಿನಂತೆ ಇರುವವಳು. ಎಕ್ಕೆ ಹೂ ಮತ್ತು ದುಂಡುಮಲ್ಲಿಗೆಯ ಹೂ ಬಣ್ಣದಲ್ಲಿಯೂ ಆಕೃತಿಯಲ್ಲಿಯೂ ಸಮಾನ. ಆದರೆ, ಎಕ್ಕೆ ಹೂವಿಗೆ ಪರಿಮಳವಿಲ್ಲ. ಹಾಗಿದ್ದರೂ, ಎಕ್ಕೆಯ ಹೂಗಳೊಡನೆ ಈ ದುಂಡುಮಲ್ಲಿಗೆಯ ಹೂ ದೈವವಶಾತ್ ಸೇರಿತ್ತು. ಶಕುಂತಳೆಯ ಸೃಷ್ಟಿ

ಯೆಂಬುದು ಹೊಸ ಮಾದರಿಯಾಗಿತ್ತು. ಬ್ರಹ್ಮನು ಸೌಂದರ್ಯಸಾರಗಳನ್ನೆಲ್ಲ ಒಟ್ಟುಗೂಡಿಸಿ, ಚಿತ್ರದಲ್ಲಿ ಅವುಗಳನ್ನೆಲ್ಲ ಲಿಖಿಸಿ, ಅನಂತರ ಆ ಚಿತ್ರದಲ್ಲಿ ಪ್ರಾಣವನ್ನು ಹೊಯ್ದಿರಬಹುದು; ಅಥವಾ ಮನಸ್ಸಿನಿಂದಲೇ ಆಕೆಯನ್ನು ಸೃಷ್ಟಿಸಿರಲೂ ಬಹುದು. ಬ್ರಹ್ಮನ ಜಾಣತನವನ್ನೂ ಆಕೆಯ ಒಡಲನ್ನೂ ನೋಡಿದರೆ, ಇದೊಂದು ಹೊಸ ತರದ ಸ್ತ್ರೀರತ್ನ ಸೃಷ್ಟಿಯೆಂದು ತೋರುತ್ತಿದ್ದಿತು. ಇಂತಹ ರೂಪವತಿಯು ಚಿವುಟದ ಚಿಗುರೆಲೆಯಂತೆ, ಮೂಸದಿದ್ದ ಪುಷ್ಪದಂತೆ, ಸವಿನೋಡದ ಮಧುವಿನಂತೆ, ಅಖಂಡವಾದ ಪುಣ್ಯಗಳ ಮೊತ್ತದಂತೆ, ರೂಪದಲ್ಲಿ ಅನಘಳಾಗಿದ್ದಳು. ಇಂತಹವಳು ಇಂಗುದೀತೈಲದ ಲೇಪನದಿಂದ ಜಿಡ್ಡುಬೆಳೆದ ತಲೆಯುಳ್ಳ ಯಾವ ದರಿದ್ರ ಬ್ರಾಹ್ಮಣನ ಕೈಗೆ ಬೀಳುವಳೊ ಎಂದು ಆತನ ಮನಸ್ಸಿನ ಹೆದರಿಕೆಯಾಗಿತ್ತು.

ಆದರೆ, ಆಕೆಯು ತನ್ನಲ್ಲಿ ಅನುರಕ್ತಳಾಗಿರುವಳೆಂದು ಆಕೆಯ ಕಟಾಕ್ಷಾನುರಾಗದಿಂದಲೆ ದುಷ್ಯಂತನು ತಿಳಿದಿದ್ದನು. ಸ್ವಾಭಾವಿಕವಾಗಿ ಕಾಡುಹುಡುಗಿಯರು ಚದುರೆಯರಲ್ಲ; ಆದರೂ ತಾನಿದಿರು ಬಂದು, 'ತಪಸ್ಸು ವರ್ಧಿಸುತ್ತಿದೆಯೆ?' ಎಂದೊಡನೆ ಆಕೆ ತನ್ನ ಮೋರೆಯನ್ನು ತಿರುಗಿಸಿದ್ದಳು. ನಗು ಬಂದರೂ, ಬೇರೆಯೇ ನಿಮಿತ್ತವನ್ನು ಸೂಚಿಸಿದ್ದಳು. ಶಿಷ್ಟಾಚಾರದ ಕಾರಣವಾಗಿ ಆಕೆಯ ಪ್ರೇಮವು ಸಂಪೂರ್ಣವಾಗಿ ನಿವೃತ್ತವಾದುದೂ ಇಲ್ಲ; ಯೌವನದ ಕಾರಣದಿಂದ ಸಂವೃತವಾದುದೂ ಇಲ್ಲ. ಆದುದರಿಂದ ಆಶ್ರಮದಲ್ಲಿ ಕೆಲ ದಿವಸ ನಿಂತು, ಕಣ್ವನು ಹಿಂತಿರುಗಿದ ತರುವಾಯ ಆತನೊಡನೆ ಈ ವಿಷಯ ಪ್ರಸ್ತಾವವೆತ್ತಿ ನೋಡೋಣವೆಂದು ದುಷ್ಯಂತನು ಯೋಚಿಸಿದನು. ಪಿಂಡಖರ್ಜೂರದಲ್ಲಿ ಬೇಸರಪಟ್ಟು, ಹುಣಿಸೆ ಹಣ್ಣನ್ನು ತಿನ್ನಲು ಬಯಸಿದವನಂತೆ, ನಾಡಿನ ರಾಣಿವಾಸದ ಸುಖವನ್ನು ತಿರಸ್ಕರಿಸಿ ಮುನಿಪುತ್ರಿಯನ್ನು ಈತನು ಇಚ್ಛಿಸಿದನು.

ಅರಸನಿಗೆ ಆಶ್ರಮವನ್ನು ಬಿಟ್ಟುಹೋಗುವ ಮನಸ್ಸಾಗಲಿಲ್ಲ. ಆಶ್ರಮದಲ್ಲಿ ಕೆಲದಿವಸವಿದ್ದು ಬಳಿಕ ಹೋಗುವುದೆಂದು ಆತನು ಆಲೋಚಿಸಿದನು. ಆದರೆ ಮಹಾರಾಜನಾದವನು ಯಾವ ಕಾರಣವೂ ಇಲ್ಲದೆ ವನಾಂತರದಲ್ಲಿ ನಿಲ್ಲುವುದು ತಾನೆ ಹೇಗೆ? ಪೌರವರು ವೃದ್ಧಾಪ್ಯದಲ್ಲಿ ರಾಜ್ಯವನ್ನು ಮಕ್ಕಳಿಗರ್ಪಿಸಿ ವಾನಪ್ರಸ್ಥಕ್ಕೆ ಕಾಡಿಗೆ ತೆರಳುವುದಿತ್ತು. ಆದರೆ ಯುವಕನಾದ ತಾನು ಕಾಡಿನಲ್ಲಿ ನಿಂತರೆ ಯಾರು ಏನೆಂದಾರು? ಋಷಿಗಳಿಂದ ಕಂದಾಯವನ್ನು ಒಟ್ಟು

ಗೂಡಿಸುವುದಿದೆ ಎಂಬುದನ್ನೆ ನೆವವಾಗಿಟ್ಟು ಶಕುಂತಳೆಗಾಗಿ ನಿಂತವನಲ್ಲವೆಂದು ತೋರಿಸಬಹುದೆಂದು ಮಾಢವ್ಯನು ಸೂಚಿಸಿದನು. ಆದರೆ, ಋಷಿಗಳು ತಮ್ಮ ತಪಸ್ಸಿನ ಫಲದ ಆರನೆಯೊಂದಂಶವನ್ನು ಅರಸನಿಗೆ ಕೊಡುವವರು; ಅವರಿಂದ ತಿರಿಗೊಮ್ಮೆ ಕಂದಾಯವೆತ್ತುವುದು ಹೇಗೆ? ರಾಜನು ಉಪಾಯ ಕಾಣದಾದನು.

ಅಷ್ಟರಲ್ಲಿ ದುಷ್ಷಂತ ಮಹಾರಾಜನು ಕಾಡಿನ ಬಳಿ ಬೇಟೆಯಾಡುತ್ತ ಬಂದುದನ್ನು ತಿಳಿದು ಅವನನ್ನು ಹುಡುಕಿ ಋಷಿಗಳೆಲ್ಲರೂ ಆತನೊಡನೆ ಹೀಗೆಂದು ವಿಜ್ಞಾಪಿಸಿಕೊಂಡರು. "ಎಲೈ ಮಹಾರಾಜನೆ! ಕಣ್ವಮಹರ್ಷಿಯು ಆಶ್ರಮದಲ್ಲಿಲ್ಲದ ಕಾರಣ, ರಾಕ್ಷಸರು ನಮ್ಮ ಯಜ್ಞಯಾಗಗಳಿಗೆ ವಿಘ್ನ ವನ್ನುಂಟುಮಾಡುವರು. ಆದಕಾರಣ, ನೀನು ಆಶ್ರಮದಲ್ಲಿ ನಿಂತು ಉಪಕಾರ ಮಾಡಬೇಕು." ಅರಸನಿಗಿದು ವಿಜ್ಞಾಪನೆಗಿಂತ ಅನುಗ್ರಹವೆಂದು ತೋರಿತು. ತನಗೆಲ್ಲವೂ ಅನುಕೂಲವಾಗಿ ಕೂಡಿಬಂದುದಕ್ಕೆ ಬಹಳ ಸಂತೋಷಪಟ್ಟನು. ಕೂಡಲೆ, ಧನುರ್ಬಾಣಗಳನ್ನೂ ಸಜ್ಜಾದ ರಥವನ್ನೂ ತರಲು ಸಾರಥಿಗೆ ಆಜ್ಞಾಪಿಸಿದನು. ತಮ್ಮ ವಿಜ್ಞಾಪನೆಯನ್ನು ಅರಸನು ಮನ್ನಿಸಿದನೆಂದು ಋಷಿಗಳು ಹರ್ಷಿತರಾದರು.

ಆಶ್ರಮಕ್ಕೆ ತೆರಳಲು ರಥವು ಸನ್ನದ್ಧವಾಯಿತು. ಆಗ ತಾನೆ ರಾಜಧಾನಿ ಯಿಂದ ಕರಭಕನೆಂಬವನು ದುಷ್ಷಂತನ ತಾಯಿಯ ಸಂದೇಶದೊಡನೆ ಅಲ್ಲಿಗೆ ಬಂದು ಮುಟ್ಟಿದ್ದನು. ತಾನು ಪುತ್ರಪಿಂಡಪಾಲನವೆಂಬ ಉಪವಾಸವ್ರತವನ್ನು ಕೈಗೊಂಡಿರುವೆನೆಂದೂ ಅದರ ಪಾರಣೆಯ ದಿವಸ ದುಷ್ಷಂತನು ಬಳಿಸೇರ ಬೇಕೆಂದೂ ಆಕೆಯು ಕರೆಕಳುಹಿಸಿದ್ದಳು. ಅರಸನಿಗೆ ಒಂದು ಕಡೆ ಹಿರಿಯರಾಜ್ಞೆ; ಇನ್ನೊಂದು ಕಡೆ ತಪಸ್ವಿಗಳ ಕಾರ್ಯ. ತ್ರಿಶಂಕುವಿನಂತೆ ಅಂತರಾಳದಲ್ಲಿ ನಿಲ್ಲುವ ಗತಿ ಬಂದೊದಗಿತು. ಹೊಳೆಯು ಹರಿಯುವಾಗ ಎದುರಿನಲ್ಲಿ ಬೆಟ್ಟವು ನಿಂತರೆ, ಪ್ರವಾಹವು ಹೇಗೆ ಇಬ್ಭಾಗನಾಗಿ ಹರಿಯುವುದೋ, ಹಾಗೆಯೇ ಅವನ ಮನಸ್ಸು ಎರಡು ವಿಧವಾಯಿತು. ಕಡೆಗೆ ಅರಣ್ಯದಲ್ಲಿ ನಿಂತು ತಪಸ್ವಿಗಳ ಯೋಗಕ್ಷೇಮ ವನ್ನು ನೋಡಿಕೊಳ್ಳುವುದೇ ಉಚಿತವೆಂದು. ಶಕುಂತಳೆಯಲ್ಲಿ ನಟ್ಟ ಮನಸ್ಸುಳ್ಳ ಮಹಾರಾಜನು ನಿಶ್ಚಯಿಸಿದನು; ತನ್ನ ಮಿತ್ರನಾದ ಮಾಢವ್ಯನನ್ನು ಪ್ರತಿನಿಧಿ ಯಾಗಿ ಮಾಡಿ ರಾಜಧಾನಿಗೆ ವ್ರತದ ನಿಮಿತ್ತವಾಗಿ ಕಳುಹಿಸುವುದೆಂದೇ, ಕಾಡಿನ ತಾವರೆಗೆ ಸೋತು. ಮರುಳಾದ ತುಂಬಿಯು ನಿಶ್ಚಯಿಸಿತು. ಮಾಢವ್ಯನು ಸಮಸ್ತ ಸೇನಾಸಹಿತನಾಗಿ ಯುವರಾಜನಂತೆ ಮೆರೆದು ರಾಜಧಾನಿಗೆ ತೆರಳಿದನು.

ಆದರೆ ಅರಸನು, ಹೊರಟ ಮಾಢವ್ಯನನ್ನು ತಡೆದನು. "ಸಖನೆ, ನಾನೆಂದುದೆಲ್ಲವೂ ಪರಿಹಾಸಕ್ಕೆ. ಶಕುಂತಳೆಯ ವಿಷಯವಾಗಿ ಮಾತಾಡಿದುದೆಲ್ಲವೂ ಪರಮಾರ್ಥವೆಂದು ನಂಬಿ, ಇಲ್ಲದುದನ್ನು ಕಲ್ಪಿಸಿ ರಾಜಧಾನಿಯಲ್ಲಿ ವಾರ್ತೆ ಹಬ್ಬಿಸಬೇಡ. ಋಷಿಗೌರವದಿಂದ ನಾನಿಲ್ಲಿ ನಿಲ್ಲುವೆನೆ ಹೊರತು ಶಕುಂತಳೆಯಲ್ಲಿ ನನಗೆ ಎಳ್ಳಷ್ಟೂ ಗೌರವವಿಲ್ಲ. ಅವಳೆಲ್ಲಿ? ನಾನೆಲ್ಲಿ? ತಿಳಿಯಿತೆ?" ಎಂದು ಪಿಸುಗುಟ್ಟಿದನು.

ಯುವರಾಜನಂತೆ ಮೆರೆದು ರಾಜಧಾನಿಗೆ ಹೋಗಲಿದ್ದ ಬ್ರಾಹ್ಮಣ ವಟು ಮಾಢವ್ಯನು ನಕ್ಕನು. "ಗೆಳೆಯಾ, ನಾನೇನು ಹಾಗೆ ಗಾವಿಲನಲ್ಲ; ಮನುಷ್ಯರ ತಾರತಮ್ಯ ನನಗೆ ಗೊತ್ತು," ಎಂದು ರಾಜಧಾನಿಯತ್ತ ಆತನು ನಡೆದನು. ಸೈನಿಕರ ಕೋಲಾಹಲವಿಲ್ಲದೆ ಕಣ್ವಾಶ್ರಮದಲ್ಲಿ ತಿರಿಗೊಮ್ಮೆ ಶಾಂತಿಯು ನೆಲೆಗೊಂಡಿತು.

---

೫. ಪ್ರಥಮ ಸಮಾಗಮ

ತಪಸ್ವಿಗಳ ಯಾಗರಕ್ಷಣಕ್ಕಾಗಿ ದುಷ್ಯಂತ ಮಹಾರಾಜನು ಕಣ್ವಾಶ್ರಮದಲ್ಲಿ ಅನೇಕ ದಿವಸಗಳನ್ನು ಕಳೆದನು. ಆಶ್ರಮದಲ್ಲಿ ಕಣ್ವನಿಲ್ಲವೆಂದು ಧೈರ್ಯಗೊಂಡು ವೈಖಾನಸರ ಯಜ್ಞಯಾಗಾದಿಗಳಿಗೆ ವಿಘ್ನವನ್ನು ತಂದೊಡ್ಡುವ ರಾಕ್ಷಸರನ್ನೆಲ್ಲ ತನ್ನ ಧನುಷ್ಟಂಕಾರದಿಂದಲೇ ಹೆದರಿಸಿ ಆತನು ಓಡಿಸಿಬಿಟ್ಟನು. ಆತನ ಬಾಣಸಂಧಾನದ ಚಾತುರ್ಯವೇನು! ಮುನಿಪುತ್ರರೂ ಮುನಿಕನ್ಯೆಗಳೂ ದುಷ್ಯಂತ ಮಹಾರಾಜನ ಈ ಅಸಾಧಾರಣವಾದ ಶಕ್ತಿಪ್ರದರ್ಶನವನ್ನು ಕಂಡು ಆತನನ್ನು ಶ್ಲಾಘಿಸಿದರು. ಕಡೆಗೊಂದು ದಿವಸ ಆತನು ವೈಖಾನಸರೆಲ್ಲರಿಂದ ಅನುಜ್ಞೆಯನ್ನು ಪಡೆದು ಇನ್ನು ರಾಜಧಾನಿಗೆ ತೆರಳುವೆನೆಂದು ನಿಶ್ಚಯಿಸಿದನು.

ಆದರೆ, ಆತನಿಗೆ ಮುನಿಕನ್ಯೆಯಾದ ಶಕುಂತಳೆಯಲ್ಲಿ ಮೋಹವುಂಟಾಗಿತ್ತು. ಅವಳ ನಡೆನುಡಿಗಳೂ ಗುಣಶೀಲಗಳೂ ರೂಪಲಾವಣ್ಯಗಳೂ ಆತನ ಮನಸ್ಸನ್ನು ಸೆಳೆದುಕೊಂಡಿದ್ದುವು. ಕಾಡಿನಲ್ಲಿ ಬೆಳೆದ ಈ ಹುಡುಗಿಯಲ್ಲಿ ಅರಸನು ಮೋಹಿತನಾಗಲಿಕ್ಕಿಲ್ಲವೆಂದು ಬ್ರಾಹ್ಮಣ ವಟು ಮಾಢವ್ಯನು ಎಣಿಸಿದ್ದನು. ಅರಸನು ತನ್ನೊಡನೆ ಶಕುಂತಳೆಯ ವಿಷಯವೆಂದುದೆಲ್ಲವೂ ಪರಿಹಾಸವೆಂದೆ ಆತನು ನಂಬಿದ್ದನು. ಆದುದರಿಂದ ಆತನು ರಾಜಧಾನಿಗೆ ತೆರಳಿ,

ನಾಡಿನ ತುಂಬಿ ಕಾಡಿನ ಕಮಲದಲ್ಲಿ ಸೆರೆಯಾಳಾಗಿದೆಯೆಂದು ತಿಳಿಸಲೂ ಇಲ್ಲ; ಹಾಗೆಂದು ತಿಳಿಯಲೂ ಇಲ್ಲ.

ಮುನಿಗಳ ಯಾಗಕರ್ಮವೆಂದು ಕೈಯಲ್ಲಿ ಬಿಲ್ಲನ್ನಾಂತು ಬೆನ್ನಿನಲ್ಲಿ ಬತ್ತಳಿಕೆಯನ್ನು ಹೊತ್ತು ವೃಕ್ಷಚ್ಛಾಯೆಗಳಲ್ಲಿ ವಿಶ್ರಮಿಸುತಿದ್ದ ಮಹಾರಾಜನು ರಾಕ್ಷಸರ ಮೇಲೆ ಕೈಗೊಂಡ ಬಿಲ್ಲಿಗೆ ಹೂಬಾಣಗಳನ್ನು ತೊಟ್ಟು ಶಕುಂತಳೆಗೆ ಗುರಿಯಿಟ್ಟು ಹೊಡೆಯಬೇಕೆಂದು ಇಚ್ಛಿಸಿದ್ದನು. ತಪೋವನದ ವೃಕ್ಷಗಳ ನೆಳಲಲ್ಲಿ ಸಂಚಲಿಸುತ್ತಿದ್ದಾಗ, ಶಕುಂತಳೆಯೆಂಬ ಕಲ್ಪವೃಕ್ಷದಡಿಯಲ್ಲಿ ಕೆಲ ಹೊತ್ತು ವಿಶ್ರಮಿಸಿ ಜನ್ಮಸಾಫಲ್ಯವನ್ನು ಪಡೆಯಬೇಕೆಂದಿದ್ದನು. ಆದರೆ, ಆಶ್ರಮರೀತಿಗೆ ವಿರುದ್ಧವಾಗಿ ಆತನು ನಡೆಯಲಿಲ್ಲ. ಆತನಿಗೆ ಮುನಿಗಳ ತಪಸ್ಸಿನ ಶಕ್ತಿಯು ಚೆನ್ನಾಗಿ ಅರಿದಿತ್ತು. ಆದುದರಿಂದ ತನ್ನ ಮನಸ್ಸಿನ ವಾಘೆಗಳನ್ನು ಆತನು ಸಡಿಲು ಬಿಡಲಿಲ್ಲ.

ಶಕುಂತಳೆಯಾದರೊ ದಿನೇ ದಿನೇ ಕೃಶವಾಗುತ್ತ ಬರುತ್ತಿದ್ದಳು. ಕಣ್ವಾಶ್ರಮಕ್ಕೆ ಅತಿಥಿಯಾಗಿ ಬಂದು, ಅನಂತರ ರಕ್ಷಕನಾಗಿ ನಿಂತು ಸಮಸ್ತ ವೈಖಾನಸರ ಶ್ಲಾಘನೆಗೆ ಪಾತ್ರನಾದ ದುಷ್ಷಂತನನ್ನು ಕಂಡಂದಿನಿಂದ ಅವಳ ಜೀವನದಲ್ಲಿ ಮಾರ್ಪಾಟುಗಳು ಉಂಟಾಗಿದ್ದುವು. ಮುಖದಲ್ಲಿ ಅವಳ ಕಪೋಲವು ಕೃಶವಾಯಿತು. ದೇಹದಲ್ಲಿ ಮೊದಲೆ ಬಡವಾದ ನಡುವು ಇನ್ನೂ ಬಡವಾಯಿತು. ಸ್ವಭಾವದಿಂದಲೆ ಬಗ್ಗಿದ ತೋಳುಗಳು ಇನ್ನೂ ವಿನತವಾದುವು. ಎಲೆಗಳು ಬಾಡಿಹೋಗಿ ವಾಸಂತಿಯ ಬಳ್ಳಿಯು ಬಿಳಿಯೇರುವಂತೆ ಶಕುಂತಳೆಯ ದೇಹದ ಕಾಂತಿಯು ಬಿಳುಪೇರಿತು. ಗಾಳಿಯು ಬೀಸುವಾಗ ವಾಸಂತಿಯ ಬಳ್ಳಿಯು ಪೀಡಿತವಾಗಿ ನಡುಗುವಾಗ ಆ ದೃಶ್ಯವು ಶೋಚನೀಯವೂ ರಮಣೀಯವೂ ಆಗಿ ಕಂಡುಬರುತ್ತದೆ. ಅಂತೆಯೆ, ಕಾಮವಾಸನೆಯಿಂದ ಶಕುಂತಳೆಯು ಪೀಡಿತಳಾಗಿ ಅವಳ ಅವಸ್ಥೆಯು ದುಃಖಕರವಾಗಿದ್ದರೂ, ಅವಳು ಪ್ರಿಯದರ್ಶನೆಯಾಗಿಯೇ ಅಲ್ಲಲ್ಲಿ ಸುಳಿಯುವ ಮಹಾರಾಜನ ಕಣ್ಣುಗಳಿಗೆ ಹಬ್ಬವನ್ನು ಉಂಟುಮಾಡುತ್ತಿದ್ದಳು.

ಪ್ರಿಯಂವದಾನಸೂಯೆಯರಿಗೆ ಶಕುಂತಳೆ ಏಕೆ ದುಃಖಿಸುವಳೆಂಬುದು ಬೇರೆ ಗೊತ್ತಾಗಲಿಲ್ಲ. ಪ್ರಿಯಂವದಾನಸೂಯೆಯರೆಂದರೆ ಶಕುಂತಳೆಯ ಒಡಲಗೆಳತಿಯರು; ಸುಖದಲ್ಲಿಯೂ ದುಃಖದಲ್ಲಿಯೂ ಸಮಾನರಾದವರು; ಅವರಲ್ಲದೆ ಮತ್ತಾರು ಅವಳ ಆರೈಕೆಯನ್ನು ಮಾಡುವವರು? ಆದುದರಿಂದ

ಒಮ್ಮೆ ಶಕುಂತಳೆಯೊಡನೆ ಈಕೆಯ ಮನಸ್ಸಿನ ಪೀಡೆಯ ಕಾರಣವನ್ನು ಅವರು ಕೇಳಿದರು. ರೋಗಜ್ಞಾನವಿಲ್ಲದೆ ಔಷಧವನ್ನು ಕೊಡಲಾಗುವುದೆ? ಶಕುಂತಳೆಯು ಲಜ್ಜೆಯನ್ನು ತೊರೆದು ಸಖಿಯರೊಡನೆ ತನ್ನ ಮನೋಭಿಲಾಷೆಯನ್ನು ನಿವೇದಿಸಿಕೊಂಡಳು. ಆಪ್ತರಲ್ಲಿ ದುಃಖವನ್ನು ಹೇಳಿಕೊಂಡರೆ, ಅದರ ವೇದನೆಯನ್ನು ಸಹಿಸಬಹುದಂತೆ. ದುಃಖವೆಲ್ಲವೂ ಆಗ ಕರಗಿ ನೀರಾಗಿ ಕಣ್ಣುಗಳ ಮಾರ್ಗವಾಗಿ ಹರಿದುಹೋಗುವುದಂತೆ. "ಅನಸೂಯೆ, ಎಂದು ಆ ರಾಜರ್ಷಿಯು ಕೈಯಲ್ಲಿ ಬಿಲ್ಲುಬಾಣಗಳನ್ನು ಧರಿಸಿ ತಪೋವನದಲ್ಲಿ ಸಂಚರಿಸ ಹತ್ತಿದನೋ, ಅಂದೇ ಮದನನು ತನ್ನ ಬಿಲ್ಲಿಗೆ ಪುಷ್ಪಬಾಣಗಳನ್ನಿಟ್ಟು ನನ್ನ ಹೃದಯಕ್ಕೆ ಗುರಿಯಿಟ್ಟಿರುವನು. ರಾಜರ್ಷಿಯಲ್ಲಿ ಅಭಿಲಾಷೆಯುಂಟಾಗಿ ಈ ಅವಸ್ಥೆಯನ್ನು ಹೊಂದಿರುವೆನು. ನನ್ನೀ ಅಭಿಲಾಷೆ ನಿಮಗೆ ಸಮ್ಮತವೆಂದಾದರೆ, ಆ ರಾಜರ್ಷಿಗೆ ನನ್ನಲ್ಲಿ ಕರುಣೆಯುಂಟಾಗುವಂತೆ ಮಾಡಿರಿ. ಇಲ್ಲದಿದ್ದರೆ ಅವಶ್ಯವಾಗಿ ತಿಲೋದಕವನ್ನು ಬಿಡಿರಿ," ಎಂದು ಶಕುಂತಳೆಯು ಲಜ್ಜೆಯನ್ನು ತೊರೆದು ತನ್ನ ಮನೋಗತವನ್ನು ತಿಳಿಸಿದಳು.

ಈ ಮಾತುಗಳನ್ನು ಕೇಳಿ ಸಖಿಯರಿಗೆ ಪರಮಸಂತೋಷವಾಯಿತಲ್ಲದೆ ಆಶ್ಚರ್ಯವಾಗಲಿಲ್ಲ. ಹಿಂದೆ, ಮಹಾರಾಜನು ತಮ್ಮೊಡನೆ ಮಾತನಾಡುತ್ತಿದ್ದಾಗ ಶೃಂಗಾರಲಜ್ಜೆಯಿಂದ ತಲೆ ಬಗ್ಗಿಸಿದ ಶಕುಂತಳೆಯನ್ನು ಕಂಡು ಪ್ರಿಯಂವದೆಯು, "ತಾತ ಕಣ್ವನಿದ್ದಿದ್ದರೆ ತನ್ನ ಜೀವಿತ ಸರ್ವಸ್ವವನ್ನಿತ್ತು ಅತಿಥಿಯನ್ನು ಕೃತಾರ್ಥನನ್ನಾಗಿ ಮಾಡುತ್ತಿದ್ದನೆ"ಂದು ಪರಿಹಾಸ ಮಾಡಿದ್ದಳು. ಅನಂತರ, ಶಕುಂತಳೆಯನ್ನು ಮಾತಿನ ಸೆರೆಯಲ್ಲಿ ಬಂಧಿಸಿ, ಮಹಾರಾಜನ ಮನಸ್ಸನ್ನು ಅಳೆದು, ಆತನ ಶೀಲದ ಪರೀಕ್ಷೆಯನ್ನು ಆಕೆಯು ಮಾಡಿದ್ದಳು. ಶಕುಂತಳೆಯ ಅಭಿಲಾಷೆಯು ಸಖಿಯರಿಗೆ ಮಾನ್ಯವಾಗಿತ್ತು. ಏಕೆಂದರೆ, ಯಾವಾತನಲ್ಲಿ ಆಕೆಗೆ ಅನುರಾಗವು ಜನಿಸಿತ್ತೊ ಆತನು ಪೌರವರ ತಿಲಕಪ್ರಾಯನಾಗಿದ್ದನು. ದೈವವಶಾತ್, ತನಗೆ ತಕ್ಕ ವರನನ್ನು ಶಕುಂತಳೆ ಪಡೆದಳೆಂದು ಅವರು ಸಂತಸಪಟ್ಟರು. ಹೂವರಳಿದ ಮಲ್ಲಿಗೆಯು ಚಿಗುರಿದ ಮಾವಿನ ಮರವನ್ನಲ್ಲದೆ, ಮತ್ತಾರನ್ನು ಸೇರಬಲ್ಲುದು? ಮಹಾನದಿಯು ಸಮುದ್ರವನ್ನು ಬಿಟ್ಟು, ಮತ್ತೆಲ್ಲಿ ತಾನೆ ಸೇರುವಳು?

ಶಕುಂತಳೆಯೇನೋ ತನ್ನ ಮನಸ್ಸಿನ ಅಭಿಲಾಷೆಯನ್ನು ಸಖಿಯರೊಡನೆ ತಿಳಿಸಿದ್ದಳು. ಆದರೆ, ಸಮಸ್ತ ಭಾರತದ ಏಕಚ್ಛತ್ರಾಧಿಪತಿಯಾದ ಮಹಾ

ರಾಜನು ತನ್ನೀ ಅಭಿಲಾಷೆಯನ್ನು ತಿರಸ್ಕರಿಸುವನೇನೋ ಎಂದು ಅವಳ ಹೃದಯವು ನಡುಗಿತು. ಆದರೆ, ಯಾವ ಅರಸನಲ್ಲಿ ತನಗೆ ಅನುರಾಗವುಂಟಾಗಿತ್ತೋ ಆತನೂ ತನ್ನಲ್ಲಿ ಅನುರಕ್ತನಾಗಿದ್ದನೆಂದು ಅವಳಿಗೆ ಹೇಗೆ ತಾನೆ ಗೊತ್ತು? ಶಕುಂತಳೆಯ ಹಂಬಲಿನಿಂದ ದುಷ್ಷಂತನು ಹಗಲಿರುಳು ಕೈಯಲ್ಲಿ ಬಿಲ್ಲನ್ನು ಹೊತ್ತು, ಮುನಿಗಳ ಯಾಗರಕ್ಷಣವೆಂದು ತಿರುಗುತ್ತಿದ್ದನಲ್ಲದೆ, ಅವನಿಗೊಂದು ದಿನವೂ ಕಣ್ಣಿಗೆ ನಿದ್ದೆಯು ಹತ್ತುತ್ತಿದ್ದಿಲ್ಲ. ಅವನ ದೇಹವು ಕೃಶವಾಗಿತ್ತು. ಹಿಮದಂತೆ ಶೀತಲನಾದ ಚಂದ್ರನ ಕಿರಣಗಳು ಅವನ ದೇಹವನ್ನು ಸುಟ್ಟುಬಿಟ್ಟಿದ್ದವು. ಮದನನ ಕುಸುಮಕೋಮಲದ ಶರಗಳು ಅವನ ದೇಹವನ್ನು ಜರ್ಜರಗೊಳಿಸಿದ್ದವು. ಅವನ ಭುಜದ ಬಳೆಯು ಕಣ್ಣಿಂದ ಸುರಿದ ಅಶ್ರುಗಳಿಂದ ವಿವರ್ಣವಾಗಿ ದಿನೇ ದಿನೇ ಕೆಳಕೆಳಗೆ ಜಾರುತ್ತಿದ್ದಿತು. ಅಂತಹ ಅರಸನೇ ಶಕುಂತಳೆಯನ್ನು ಪ್ರಾರ್ಥಿಸುವನಾದರೆ ಶಕುಂತಳೆಗೆ ಮಹಾರಾಜನು ಹೇಗೆ ದುರ್ಲಭನಾದಾನು? "ಹುಚ್ಚಿ, ಯಾವ ಮನುಷ್ಯನಾದರೂ ಶರೀರಕ್ಕೆ ತಂಪನ್ನೀಯುವ ಶರತ್ಕಾಲದ ಬೆಳದಿಂಗಳನ್ನು ವಸ್ತ್ರದಿಂದ ನಿವಾರಿಸುವನೇ" ಎಂದು ಸಖಿಯರು ಶಕುಂತಳೆಯನ್ನು ಸಂತಯಿಸಿದರು.

ದುಷ್ಷಂತನನ್ನು ಇಚ್ಛಿಸಿದ ಶಕುಂತಳೆಯ ಅವಸ್ಥೆಯು ದಿನೇ ದಿನೇ ವಿಷಮವಾಗುತ್ತ ಬರುತ್ತಿದ್ದಿತು. ಸಖಿಯರು ಈ ವಿಷಯದಲ್ಲಿ ತಾವು ಆಕೆಗೆ ಕೈಲಾದಷ್ಟು ಸಹಾಯವನ್ನು ಮಾಡುವುದು ತಮ್ಮ ಕರ್ತವ್ಯವೆಂದು ಎಣಿಸಿಕೊಂಡರು. ಸೋಮತೀರ್ಥದಿಂದ ಕಣ್ವನು ಹಿಂತೆರಳಿದ್ದರೆ, ಆತನು ನಿಶ್ಚಯವಾಗಿಯೂ ಶಕುಂತಳೆಯ ಮನೋಭಿಲಾಷೆಯನ್ನು ಪೂರಯಿಸದೆ ಇರುತ್ತಿದ್ದಿಲ್ಲ. ಮಹಾರಾಜನೇನೊ ಕಣ್ವಾಶ್ರಮದಲ್ಲಿ ಹೆಚ್ಚು ಕಾಲ ಇರಲಾರನು; ಅವನು ಶೀಘ್ರದಲ್ಲಿಯೇ ಹೊರಟು ಹೋಗುವವನಿರುವನೆಂದು ಅವರು ಕೇಳಿ ತಿಳಿದಿದ್ದರು. ಬಳಿ ಬಂದ ಅಲೆಗೆ ತಲೆಗೊಡದಿದ್ದರೆ, ಮತ್ತೆ ಕಾದು ನಿಲ್ಲಲು ಸಮಯವಿದೆಯೆ? ವಿಷಯವಿದನ್ನು ರಹಸ್ಯವಾಗಿಯೂ ಶೀಘ್ರವಾಗಿಯೂ ಮಹಾರಾಜನಿಗೆ ಯಾವ ರೀತಿಯಿಂದ ತಿಳಿಸಬಹುದೆಂದು ಅವರಿಬ್ಬರೂ ಹಂಚಿಕೆಗಳ ಮೇಲೆ ಹಂಚಿಕೆಗಳನ್ನು ಹುಡುಕುತ್ತ ಶಕುಂತಳೆಯನ್ನು ಶೈತ್ಯೋಪಚಾರಗಳಿಂದ ಉಪಚರಿಸುತ್ತಿದ್ದರು. ಆಕೆಗೆ ತಾವರೆಯೆಲೆಯಲ್ಲಿ ಗಾಳಿಬೀಸಿ ದೇಹಕ್ಕೆ ಸ್ವಾಸ್ಥ್ಯವನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದರು. ಕಡೆಗೆ ಪ್ರಿಯಂವದೆಗೊಂದು ಉಪಾಯವು ಹೊಳೆಯಿತು. ಪ್ರಿಯನಿಗೆ ಪ್ರೇಮಪತ್ರವೊಂದನ್ನು ಬರೆಯಲು

ಆಕೆ ಶಕುಂತಳೆಗೆ ಸೂಚಿಸಿದಳು. ತಾನದನ್ನು ದೇವತಾಪ್ರಸಾದವೆಂದು ಹೂದಳಿರ ಮರೆಯಲ್ಲಿ ಮಡಗಿ, ಅರಸನಿಗೆ ಪ್ರಾಪಿಸುವೆನೆಂದು ಧೈರ್ಯದಿಂದ ಅವಳು ಹೇಳಿದಳು. ಅನುಸೂಯೆಯು ಪ್ರಿಯಂವದೆಯ ಸೂಚನೆಯನ್ನು ಅನುಮೋದಿಸಿದಳು. ಶಕುಂತಳೆಯೂ ಇದಕ್ಕೆ ಒಪ್ಪಿದಳು.

ಯಾಗಕರ್ಮವು ಮುಗಿದು, ವೈಖಾನಸರಿಂದ ಅಪ್ಪಣೆಯನ್ನು ಪಡೆದು ರಾಜಧಾನಿಗೆ ತೆರಳಲಿದ್ದ ದುಷ್ಯಂತಮಹಾರಾಜನು ಶಕುಂತಳೆಯನ್ನು ಹಂಬಲಿಸಿ ಕಳವಳಪಡುತ್ತಿದ್ದ ತನ್ನ ಮನಸ್ಸನ್ನು ವಿನೋದಗೊಳಿಸಲು ಮಾಲಿನೀತೀರದತ್ತ ನಡೆದಿದ್ದನು. ಮಾಲಿನಿಯ ಪುಳಿನದಲ್ಲಿ ಕಂಡುಬಂದ ಹೆಜ್ಜೆಗಳನ್ನು ಕಂಡು, ಶಕುಂತಳೆಯು ತನ್ನ ಸಖಿಯರೊಡನೆ ಅಲ್ಲಿಗೆ ಬಂದಿರಬೇಕೆಂದು ಊಹಿಸಿದನು. ಗಿಡಗಳ ಹೂಗಳನ್ನು ಕೊಯ್ಯುತ್ತ, ಬಳ್ಳಿಗಳ ತಳಿರನ್ನು ಕೀಳುತ್ತ ಸಖಿಯರು ಶಕುಂತಳೆಯೊಡನೆ ಅದಾಗಲೆ ಅಲ್ಲಿಗೆ ಹೋಗಿರಬೇಕೆಂದು ಆತನು ಮನಗಂಡನು. ಏಕೆಂದರೆ, ಗಿಡಗಳಲ್ಲಿ ಹೂಗಳ ತೊಟ್ಟು ಇನ್ನೂ ಬಾಡಿದ್ದಿಲ್ಲ. ತಳಿರ್ಗಳ ತೊಟ್ಟಿಂದ ಹೊರ ಸುರಿದ ಹಾಲು ಇನ್ನೂ ಗಟ್ಟಿಯಾಗಿದ್ದಿಲ್ಲ. ಅರಸನು ತನಗಲ್ಲಿಯೆ ತೋರುತಿದ್ದ ನೀರುಹಬ್ಬೆ ಬಳ್ಳಿಯಿಂದ ಹೊದಿಸಿರುವ ಲತಾಗೃಹ ದತ್ತ ನಡೆದನು. ಶಕುಂತಳೆಯು ಅಲ್ಲಿ ತನ್ನ ಸಖಿಯರೊಡಗೂಡಿ, ಹಿಡಿಗವಡೆ, ಸೆಡೆಗವಡೆ, ಕಣ್ಣುಮುಚ್ಚು, ಸೆಡೆಸೆಂಡು, ಪುಟಸೆಂಡು, ಗುತ್ತಿಸೆಂಡು, ಗುಡಿಗಟ್ಟು, ಕುಂಟಪಿಲಿ, ಜಡೆಗೋಲು ಮೊದಲಾದ ಆಟಗಳನ್ನಾಡಿ ಕಾಲವನ್ನು ಕಳೆಯುತ್ತಿರ ಬಹುದೆಂದು ಆತನು ಅತ್ತ ನಡೆದನು.

ಆದರೆ ಶಕುಂತಳೆ ಇಂದು ಎಂದಿನಂತೆ ಸಂತೋಷಚಿತ್ತಳಾಗಿ ಅರಸನಿಗೆ ಕಂಡುಬರಲಿಲ್ಲ. ಸಖಿಯರು ಆಕೆಗೆ ತಾವರೆಯೆಲೆಯಲ್ಲಿ ಗಾಳಿಯನ್ನು ಬೀಸು ತಿದ್ದರು; ಮೈಗೆ ಲಾಮಂಚವನ್ನಿಟ್ಟು ಶೈತ್ಯೋಪಚಾರಗಳನ್ನು ಮಾಡುತ್ತಿದ್ದರು. ಅರಸನು ಶಕುಂತಳೆಯು ಬಳಲಿದ್ದುದರ ಕಾರಣವನ್ನು ಆಲೋಚಿಸುತ್ತಿದ್ದಾಗ ತಾನೆ, ಆಕೆಯು ಎದ್ದು ಕೂತು ಸಮೀಪವೇ ಇದ್ದ ತಾವರೆಯೆಲೆಯೊಂದನ್ನು ತೊಡೆಯ ಮೇಲಿಟ್ಟು, ಅದರಲ್ಲಿ ತನ್ನ ಕೈಬೆರಳ ಉಗುರುಗಳಿಂದ ಏನನ್ನೊ ಬರೆಯುವುದನ್ನು ಕಂಡನು; ಕಂಡು ಬೆರಗಾದನು.

ಪ್ರಿಯಂವದೆಯ ಸೂಚನೆಯಂತೆ ಶಕುಂತಳೆಯು ತನ್ನ ಪ್ರಿಯನಿಗೆ ಪತ್ರ ವನ್ನು ಬರೆಯಲು ಉದ್ಯುಕ್ತಳಾಗಿದ್ದಳು. ಆದರೆ ಸಮೀಪದಲ್ಲಿ ಲೇಖನ ಸಾಮಗ್ರಿಗಳು ಇರಲಿಲ್ಲ; ಆಶ್ರಮಕ್ಕೆ ಹೋಗಿ ಅವುಗಳನ್ನು ತರುವುದೆಂದರೆ

ಹೂಡಲಿದ್ದ ಉಪಾಯವು ಅಪಾಯವಾಗಿ ಪರಿಣಮಿಸುವ ಸಂಭವವಿತ್ತು. ಆದುದರಿಂದ ಆಕೆಯು ಶುಕೋದರದಂತೆ ಕೋಮಲವಾದ, ಅಲ್ಲಿಯೆ ಬಿದ್ದು ಕೊಂಡಿದ್ದ ತಾವರೆಯೆಲೆಯೊಂದರಲ್ಲಿ ಪ್ರೇಮ ಪತ್ರಿಕೆಯನ್ನು ಬರೆಯುವು ದೆಂದು ನಿಶ್ಚಯಿಸಿದಳು. ಮೊದಲು ಆಕೆಗೆ ಏನು ಬರೆಯುವುದೆಂದು ತೋಚಲಿಲ್ಲ; ಮತ್ತೆ ಆಲೋಚಿಸಿ, ಆಕೆಯು ಮೃದುವಾಗಿಯೂ ಭಾವ ಗರ್ಭಿತವಾಗಿಯೂ ಸಂಕ್ಷೇಪವಾಗಿಯೂ ಪತ್ರವೊಂದನ್ನು ರಚಿಸಿದಳು. "ನಿರ್ದಯನೆ, ನಿನ್ನ ಮನಸ್ಸನ್ನು ನಾನರಿಯೆ; ಆದರೆ ಹಗಲಿರುಳು ನಿನ್ನೊಡನೆ ಸೇರಬೇಕೆಂದಿರುವ ನನ್ನ ದೇಹವನ್ನು ಮದನನು ಪೀಡಿಸಿರು ವನು," ಎಂಬುದೇ ಆಕೆಯು ಬರೆದ ಪತ್ರಿಕೆಯ ಭಾವವಾಗಿತ್ತು. ತಾನು ಬರೆದ ಪತ್ರವನ್ನು ಶಕುಂತಳೆಯು ಸಖಿಯರಿಗೆ ಓದಿ ಹೇಳಿದಳು. ಸಖಿ ಯರು ಶಕುಂತಳೆಯನ್ನು ಮುಂಚೆ ಮೂದಲಿಸಿರಬಹುದು; ವಕ್ರೋಕ್ತಿ ಗಳಿಂದ ಹಾಸ್ಯಮಾಡಿರಲೂಬಹುದು. ಆದರೆ, ಅದೆಲ್ಲವೂ "ನೂರೆ, ನೂರೆ, ನೂರೆಯಂತಿರ್ಕುಂ".

ಲತಾಗೃಹದ ಸಮೀಪವನ್ನಾಂತ ದುಷ್ಯಂತ ಮಹಾರಾಜನಿಗೆ ಶಕುಂತ ಳೆಯು ಓದಿದ ಪತ್ರವನ್ನು ಕೇಳಿ ಮೈ ರೋಮಾಂಚವಾಯಿತು. ಹಿಂದೊಮ್ಮೆ ಈ ತಪಸ್ವಿಕನ್ಯೆಗಳೊಡನೆ ಮಾತಾಡುತ್ತಿದ್ದಾಗ ಆಶ್ರಮದಲ್ಲಿ ಕೋಲಾಹಲವೆದ್ದ ಕಾರಣ, ಅತಿಥಿಗೆ ತಕ್ಕ ಸನ್ಮಾನವನ್ನು ಮಾಡಲು ಮುನಿಕನ್ಯೆಗಳಿಗೆ ಅವಕಾಶ ಸಿಗದೆ, ಮುಂದೊಮ್ಮೆ ಬಂದು ತಮ್ಮಿಂದ ಅತಿಥಿ ಸತ್ಕಾರವನ್ನು ಅವಶ್ಯವಾಗಿ ಪಡೆಯಬೇಕೆಂದು ಅವರು ವಿನಂತಿಸಿದ್ದರು. ಆದರೆ, ಆಶ್ರಮದಲ್ಲಿ ತಾನಿಷ್ಟು ದಿವಸ ತಂಗಿದ್ದರೂ, ಮುನಿಕನ್ಯೆಗಳ ಅಪೇಕ್ಷೆಯಂತೆ ತಾನು ನಡೆಯದೆ ಅಪರಾಧಿ ಯಾಗಿರುವೆನೆಂದು ತನ್ನನ್ನೆ ಹಳಿದುಕೊಂಡನು. ಆದುದರಿಂದಲೆ, ಶಕುಂತಳೆಯು ಆತನಿಗೆ 'ನಿರ್ದಯನೆ' ಎಂದು ಪರುಷವಾಗಿಯೆ ಸಂಬೋಧಿಸಿರಬೇಕು. ಶಕುಂತಳೆಯು ತನ್ನನ್ನೆ ಕುರಿತು ಬರೆದ ಪತ್ರವನ್ನು ಕೇಳಿ, ಮಹಾರಾಜನು ಬೇಗನೆ ಅವಳ ಸಮೀಪವನ್ನೈದಿದನು. "ತನುಗಾತ್ರಿ! ಚಂದ್ರನನ್ನು ಕಂದಿಸು ವಂತೆ ಸೂರ್ಯನು ನೈದಿಲೆಯನ್ನು ಪೀಡಿಸುವುದಿಲ್ಲ. ನಿನ್ನನ್ನು ಇಷ್ಟು ದಿವಸವೂ ಮದನನು ತಪಿಸಿರುವುದಾದರೆ, ನನ್ನನ್ನಾತನು ಸುಟ್ಟಿರುವನು," ಎಂದೇ ಆತನು ಸಂಬೋಧಿಸಿದನು.

ಶಕುಂತಳೆಯ ಮನೋಭಿಲಾಷೆಯು ಮೂರ್ತಿಗೊಂಡಂತೆ ಸಮ್ಮುಖದಲ್ಲಿ

ಬಂದು ನಿಂತ ದುಷ್ಷಂತ ಮಹಾರಾಜನನ್ನು ಸಖಿಯರು ಕಂಡು ಆತನಿಗೆ ಸ್ವಾಗತವನ್ನು ಬಯಸಿದರು. ಶಕುಂತಳೆಯು ತನ್ನ ಪ್ರಿಯನು ಬಂದುದನ್ನು ಕಂಡು ಲಜ್ಜೆಯಿಂದ ಮುಖವನ್ನು ತಗ್ಗಿಸಿದಳು. ಅನಂತರ ಎದ್ದುನಿಂತು ಅಲ್ಲಿಂದ ಹೋಗಲಿಚ್ಛಿಸಿದಳು. ಅರಸನು, “ಶಕುಂತಳೆಯೆ! ಉಪಚಾರ ಲಜ್ಜೆಗಳಿಗಾಗಿ ನಿನ್ನೀ ಕೋಮಲವಾದ ದೇಹವನ್ನು ಶ್ರಮಿಸಬೇಡ. ಕುಸುಮ ಶಯನದಲ್ಲೆ ಕೂತುಕೊಂಡಿರು,” ಎಂದು ತನ್ನ ಪ್ರಿಯೆಗೆಂದನು.

“ನಿಮ್ಮಿಬ್ಬರಲ್ಲಿ ಅನುರಾಗವು ಪ್ರತ್ಯಕ್ಷವಾಗಿ ಕಂಡುಬರುತ್ತಿದೆ; ಅಂತಿದ್ದರೂ ಸಖೀಸ್ನೇಹದ ಕಾರಣದಿಂದ ಇನ್ನೊಮ್ಮೆ ಆ ವಿಷಯವನ್ನೇ ಹೇಳಬೇಕೆಂದಿರುವೆನು,” ಎಂದು ಪ್ರಿಯಂವದೆಯು ಮಾತಿಗೆ ಮೊದಲುಮಾಡಿದಳೇ.

“ಹೌದು. ಹೇಳಬೇಕಾದುದನ್ನು ಹೇಳಲೇಬೇಕು. ಇಲ್ಲದಿದ್ದರೆ ಬೇಸರಕ್ಕೆ ಕಾರಣವಾಗುತ್ತದಲ್ಲವೆ?” ಎಂದು ಅರಸನು ಒಪ್ಪಿಕೊಂಡನು.

“ತನ್ನ ದೇಶದಲ್ಲಿರುವ ಜನರ ಆಪತ್ತನ್ನು ಪರಿಹರಿಸುವುದು ಅರಸನ ಧರ್ಮವಲ್ಲವೇ? ನಮ್ಮ ಪ್ರಿಯಸಖಿಯು ನಿನ್ನನ್ನುದ್ದೇಶಿಸಿ ಬಹಳ ಪೀಡಿತಳಾಗಿರುವಳು. ಅವಳ ಜೀವಿತವನ್ನು ಕಾಪಾಡುವುದು ನಿನ್ನ ಧರ್ಮವಾಗಿದೆ,” ಎಂದು ಪ್ರಿಯಂವದೆಯು ತನ್ನ ಹೆಸರಿಗೆ ತಕ್ಕಂತೆ, ತನ್ನ ಜವಾಬುದಾರಿಕೆಯ ಗೂಢಕರ್ತವ್ಯಕ್ಕೆ ಸರಿಯಾದ ಮಾತನ್ನು ಹೇಳಿ, ಕಣ್ವನಿಲ್ಲದ ವೇಳೆಯಲ್ಲಿ ಕಣ್ವನ ಪಾತ್ರವನ್ನು ವಹಿಸಿದಳು.

“ನಮ್ಮ ಪ್ರಣಯವು ಸಮಾನವಾಗಿದೆ; ಅನ್ಯೋನ್ಯ ಪ್ರೇಮವು ನಮ್ಮಲ್ಲಿ ನೆಲಸಿದೆಯೆಂಬುದು ನಿಜವು. ನಾನು ಅನುಗೃಹೀತನಾದೆನು,” ಎಂದು ಅರಸನು ಹೇಳಿದನು.

ಇಷ್ಟು ಹೊತ್ತು ಶಕುಂತಳೆಯು ಸುಮ್ಮಗಿದ್ದಳು. “ಮಹಾರಾಜನು ರಾಣಿವಾಸವನ್ನು ಬಿಟ್ಟು, ಹಲವು ಕಾಲವು ಸಂದಿತು. ಅವನನ್ನೇಕೆ ತಡೆಯಬೇಕು?” ಎಂದು ಮೆಲ್ಲನೆ ಶಕುಂತಳೆಯು ತನ್ನ ಪರವಾಗಿ ಮಾತಾಡುವ ಸಖಿಯ ಕಿವಿಯಲ್ಲಿ ನುಡಿದಳು. ಅದು ಅರಸನಿಗೂ ಕೇಳಿಸಿತು. ಆ ಮಾತನ್ನು ಕೇಳಿದೊಡನೆಯೆ, ತಾನಿಷ್ಟು ಶಕುಂತಳೆಯಲ್ಲಿ ಅನನ್ಯಪರಾಯಣನಾದರೂ, ಆಕೆಯು ಅನ್ಯಥಾ ಭಾವಿಸುವಳೆಂದು ಆತನು ನೊಂದನು. ಮೊದಲೆ ಮದನಬಾಣಹತನಾದವನು ಪುನಃ ಶಕುಂತಳೆಯ ವಾಗ್ಬಾಣಗಳಿಂದ ಆಹತನಾದನು. ಅನಸೂಯೆ

ಯಾಗ ಅರಸನನ್ನು ಕುರಿತು "ಮಿತ್ರನೆ, ಶಕುಂತಳೆಯು ನಿನ್ನಲ್ಲಿ ಮೋಹಿತಳಾಗಿರುವಳು; ಆದರೆ 'ರಾಜಾನೋ ಬಹುವಲ್ಲಭಾಃ' ಎಂದಿರುವುದಷ್ಟೆ? ಬಂಧುಜನಗಳು ಮತ್ತೆ ಚಿಂತೆಗೊಳಗಾಗದಂತೆ ಈಕೆಯ ವಿಷಯದಲ್ಲಿ ವರ್ತಿಸುವೆಯಲ್ಲವೆ?" ಎಂದು ಸೌಮ್ಯವಾದ ನುಡಿಗಳಿಂದ ಅರಸನ ಹೃದಯವನ್ನು ಉಪಚರಿಸಿದಳು. "ಎಲೆ ಸಖಿ, ಹಾಗೆ ಎಣಿಸದಿರು. ಅನೇಕ ಹೆಂಡಂದಿರು ನನಗಿದ್ದರೂ ನನ್ನ ಪುರುವಂಶದ ಪ್ರತಿಷ್ಠೆಗೆ ಇವರಿಬ್ಬರೇ ಸರಿ-ಸಾಗರವೇಷ್ಟಿತೆಯಾದ ಧರಿತ್ರಿಯೂ ಪ್ರೀತಿಪಾತ್ರಳಾದ ನಿಮ್ಮ ಸಖಿಯೂ," ಎಂದು ಅರಸನು ಅನಸೂಯೆಗೆ ಆಶ್ವಾಸನೆಯನ್ನು ಕೊಟ್ಟೊಡನೆಯೆ, ಸಖಿಯರ ಮನಸ್ಸು ನೆಮ್ಮದಿ ಹೊಂದಿತು. ಅರಸನ ಮಾತಿನಲ್ಲಿ ಅವರಿಗೆ ವಿಶ್ವಾಸವು ತುಂಬಿತು. ಅವರು ಇದೆಲ್ಲದರ ಹಾನಿವೃದ್ಧಿಗಳನ್ನು ಹೆಗಲೇರಿಸಿಕೊಂಡರು.

ಅಲ್ಲಿಯೆ ಸಮೀಪದಲ್ಲಿ ಒಂದು ಜಿಂಕೆಮರಿಯು ಸುಳಿಯುತ್ತಿತ್ತು. ಅದು ತನ್ನ ತಾಯಿಯನ್ನು ಕಾಣದೆ ಕಳವಳಗೊಂಡು, ಅತ್ತಿತ್ತ ಹುಡುಕುತ್ತಿದೆಯೆಂದು ಪ್ರಿಯಂವದೆಯು ಅನಸೂಯೆಗೆ ಕಣ್ಣಸನ್ನೆ ಮಾಡಿ ಸೂಚಿಸಿದಳು. ಅನಂತರ "ಬಾ, ಇದನ್ನು ಸೇರಿಸೋಣ," ಎಂದು ಅವಳು ಅನಸೂಯೆಯೊಡನೆ ಹೊರಟು ದುಷ್ಷಂತಶಕುಂತಳೆಯರಿಬ್ಬರನ್ನು ಒತ್ತಟ್ಟಿಗೆ ಬಿಟ್ಟಳು. ಶಕುಂತಳೆಯು ಶಾಲೀನತೆಯಿಂದ ತನ್ನನ್ನು ಬಿಟ್ಟು ಹೊರಟು ಹೋಗುವ ಸಖಿಯರೊಡನೆ "ಎಲೌ ಸಖಿಯರೆ, ಇಬ್ಬರಲ್ಲಿ ಯಾರಾದರೂ ಒಬ್ಬರು ಬನ್ನಿ. ನಾನು ಅಶರಣೆಯಾದೆ," ಎಂದು ವಿಜ್ಞಾಪಿಸಿದಳು. ಸಖಿಯರಾಗ ಜಿಂಕೆಮರಿಯನ್ನು ಕೈಯಲ್ಲಿ ಹೊತ್ತು, "ಭೂಮಂಡಲಕ್ಕೆ ಅಧಿಪತಿಯಾದವನು ಸಮೀಪದಲ್ಲಿರುವನಲ್ಲವೆ? ತಾಳಿ ಬರುವೆವು. ಹೆದರಿಕೆಯೇನು?" ಎಂದು ನಸುನಗುತ್ತ ಹೊರಟೇಬಿಟ್ಟರು. ಸಖಿಯರು ಹೊರಟುಹೋದರೆಂದು ಶಕುಂತಳೆ ಬಿಸುಸುಯ್ದಳು. ಅರಸನಾಗ, "ಸಾಕು, ಸಾಕು, ಏತಕ್ಕೆ ಭಯಪಡುವೆ? ನಾನು ನಿನ್ನ ಸಮೀಪದಲ್ಲಿಯೇ ಇರುವೆನಲ್ಲವೆ?" ಎಂದು ತನ್ನ ಪ್ರಿಯೆಯನ್ನು ಸಂತಯಿಸಿದನು.

ಶಕುಂತಳೆ ಎದ್ದು ಹೋಗಲಿಚ್ಛಿಸಿದಳು. ತಾನಿಂತು ಸ್ವಾತಂತ್ರ್ಯವನ್ನು ವಹಿಸಿ, ಉಚ್ಛೃಂಖಲೆಯಂತೆ ನಡೆಯುತ್ತಿರುವುದು ಆಶ್ರಮದ ಗೌರವಕ್ಕೆ ಕುಂದೆಂದು ಅವಳು ಎಣಿಸಿದಳು. "ಸ್ವಾತಂತ್ರ್ಯದಿಂದ ನಡೆದು ನಾನು ಹಿರಿಯರೆದುರು ಅಪರಾಧಿಯಾಗುವವಳಲ್ಲ," ಎಂದವಳು ಎದ್ದು ನಡೆದುಬಿಟ್ಟಳು. ಬಿಸಿಲು ಕಾಯುತಿದ್ದಿತು. ಶಕುಂತಳೆಯ ದೇಹವು ಕೋಮಲವಾಗಿತ್ತು.

ಆದುದರಿಂದ ಅರಸನು ತನ್ನ ಸಮೀಪದಿಂದ ನೀತಿಗೆ ಹೆದರಿ ನಡೆಯುತ್ತಿರುವ ಶಕುಂತಳೆಯನ್ನು ಬಲಾತ್ಕಾರದಿಂದ ತಡೆದು ನಿಲ್ಲಿಸಿದನು.

"ಪೌರವನೆ, ನೀತಿಬಾಹಿರನಾಗದಿರು. ಶೀಲವನ್ನು ರಕ್ಷಿಸು. ಮದನ ಪೀಡಿತಳಾದರೂ ಸ್ವಾತಂತ್ರ್ಯವನ್ನು ನಾನವಲಂಬಿಸುವವಳಲ್ಲ," ಎಂದು ಕೋಪದಿಂದ ತನ್ನ ಮೈಯನ್ನು ಮುಟ್ಟಿದ ಪ್ರಿಯನಿಗೆ ಆಕೆ ನುಡಿದುಬಿಟ್ಟಳು.

ಅರಸನು ನಕ್ಕನು. "ಎಲೇ ಭೀರು! ಏತಕ್ಕಂಜುವೆ? ಗುರುಜನಗಳಿ ಗೇತಕ್ಕೆ ಹೆದರುವೆ? ಪೂಜ್ಯರಾದ ಗುರುಗಳು ಇದನ್ನು ದೋಷವೆಂದು ಗ್ರಹಿಸಲಿಕ್ಕಿಲ್ಲ. ಹಿಂದೆ ರಾಜರ್ಷಿಕನ್ಯೆಗಳನೇಕರು ಗಾಂಧರ್ವ ರೀತಿಯಿಂದ ವಿವಾಹವಾಗಿ ಹಿರಿಯರ ಒಪ್ಪಿಗೆಯನ್ನು ಪಡೆದಿರುವರು,' ಎಂದು ಸಮಾಧಾನ ಪಡಿಸಿದನು.

"ಹಾಗಿದ್ದರೂ ನನ್ನನ್ನು ಬಿಡು; ಸಖೀಜನರ ಅನುಮತಿಯನ್ನು ಇನ್ನೊಮ್ಮೆ ಕೇಳುವೆನು," ಎಂದು ಅಸಹಾಯಳಾಗಿ ಆಕೆ ತಿರಿಗಿ ಹೇಳಿದಳು.

ಅರಸನು ನಗುತ್ತ, "ಆಗಲಿ, ಬಿಡುವೆನು," ಎಂದನು.

ಅಷ್ಟರೊಳಗೆ ಶಕುಂತಳೆಯ ಶರೀರವು ಸ್ವಸ್ಥವಿಲ್ಲವೆಂದು ಯಾರಿಂದಲೋ ಕೇಳಿ ದಿಗಿಲುಗೊಂಡ ಗೌತಮಿಯು ಮಂತ್ರೋದಕದೊಡನೆ ಮಾಲಿನೀತೀರದತ್ತ ಧಾವಿಸಿದ್ದಳು. ಅವಳಿತ್ತ ಬರುತ್ತಿದ್ದಾಗ, ಹುಲ್ಲೆಮರಿಯನ್ನು ಅದರ ತಾಯಿ ಯೊಡನೆ ಸೇರಿಸುವ ನೆವದಿಂದ ದುಷ್ಯಂತ ಶಕುಂತಳೆಯರಿಬ್ಬರನ್ನು ಲತಾಗೃಹದಲ್ಲಿ ಬಿಟ್ಟು ಬಂದ ಪ್ರಿಯಂವದಾನುಸೂಯೆಯರು ಆಶ್ರಮದತ್ತ ನಡೆಯುತ್ತಿದ್ದರು. ಪ್ರಿಯಂವದಾನಸೂಯೆಯರನ್ನು ಕಂಡು ಶಕುಂತಳೆಯ ಅವಸ್ಥೆ ಏನಾಗಿದೆಯೋ ಎಂದು ಮುದುಕಿಗೆ ಜೀವವೇ ಹಾರಿಹೋಗಿರಬೇಕು; ಮುದುಕಿಯನ್ನು ಕಂಡು ಹುಡುಗಿಯರ ನರನಾಡಿಗಳಲ್ಲಿ ರಕ್ತದ ಚಲನವು ವಿವೃದ್ಧವಾಗಿ ಹೃದಯವು ಕಂಪಿಸಿರಬೇಕು.

"ಶಕುಂತಳೆಗೆ ಸುಖವೇ" ಎಂದು ಮುದುಕಿಯೆಂದಳು. "ಅದಕ್ಕಾಗಿಯೇ ನಿಮ್ಮನ್ನು ಕರೆತರುವೆವೆಂದು ಆಶ್ರಮದತ್ತ ಬರುತ್ತಿದ್ದೆವೆ"ಂದು ಮುದುಕಿಯೊಡನೆ ಸಖಿಯರು ಮಾಲಿನೀತೀರದತ್ತ ಹಿಂತಿರುಗಿದರು. ಮುದುಕಿಗೆ ಗುಟ್ಟೆಲ್ಲ ತಿಳಿದು ಅನರ್ಥವಾಗಬಹುದೆಂದು ಪ್ರಿಯಂವದೆಯು ಶಂಕಿಸಿದಳು. ಆದರೆ, ಅವಳು ಪ್ರತ್ಯುತ್ಪನ್ನಮತಿಯು. ದೂರದ ಕೊಳದಲ್ಲಿ ತನ್ನ ಸಹಚರನೊಡನೆ ವಿಹರಿಸು ತ್ತಿದ್ದ ಚಕ್ರವಾಕವಧುವೊಂದನ್ನು ಅವಳು ಕಂಡಳು. ಆ ದಂಪತಿಗಳಿಗೆ

ಸಾಯಂಕಾಲವಾದೊಡನೆಯೆ ವಿಯೋಗವು ಪ್ರಸಿದ್ಧವು. "ಎಲೇ ಚಕ್ರವಾಕ ವಧುವೆ, ರಾತ್ರೆ ಸಮೀಪಿಸಿತು; ಸಹಚರನನ್ನು ಬೀಳ್ಕೊಡು" ಎಂದು ಲತಾ ಗೃಹವು ಸಮೀಪಿಸಿದೊಡನೆಯೆ ಅವಳು ಹೇಳಿಬಿಟ್ಟಳು.

ದುಷ್ಷಂತನೊಡನಿದ್ದ ಶಕುಂತಳೆಗಿದರ ಅರ್ಥವು ಹೊಳೆಯಿತು. ಗೌತಮಿಯು ಬರುತ್ತಿರುವಳೆಂದು ತಿಳಿದು ತನ್ನ ವಲ್ಲಭನನ್ನು ಗಿಡಪೊದರುಗಳಲ್ಲಿ ಅವಳು ಅಡಗಿಸಿಬಿಟ್ಟಳು. ಸಮಸ್ತ ಭಾರತದ ಏಕಚ್ಛತ್ರಾಧಿಪತಿಯು ಮರಗಳ ತಳಿರೆಡೆಯಲ್ಲಿ ಅಡಗಿಕೊಂಡನು. ಗೌತಮಿಯು ಬಂದಳು; ಶಕುಂತಳೆಯೊಡನೆ ಆರೋಗ್ಯವನ್ನು ವಿಚಾರಿಸಿದಳು. ಮಂತ್ರೋದಕವನ್ನು ಕುಡಿಯಕೊಟ್ಟು, ಸ್ವಲ್ಪ ಸಮಾಧಾನವಾಯ್ತೆಂದನಂತರ ಶಕುಂತಳೆಯೊಡನೆ ಆಶ್ರಮಕ್ಕೆ ತೆರಳಿದಳು. ಸಂದರ್ಭಕ್ಕೆ ಮಣಿಯಬೇಕಾದುದರಿಂದ ಶಕುಂತಳೆಯು ತನ್ನ ಪ್ರಿಯನನ್ನು ಅಲ್ಲಿಯೆ ಬಿಟ್ಟು, ಗೌತಮಿಯನ್ನು ಅನುಸರಿಸಿದಳು. ಆದರೆ, "ಲತಾವಲಯನೆ, ಸಂತಾಪಹಾರಕನೆ, ಇನ್ನೊಮ್ಮೆಗೆ ಬರುವೆನು," ಎಂದು ಮರಬಳ್ಳಿಗಳಿಗೆ ಸಂಬೋಧಿಸಿ ಮರೆಯಲ್ಲಿದ್ದ ಪ್ರಿಯನನ್ನು ಬೀಳ್ಕೊಟ್ಟು ಮೆಲ್ಲನೆ ಶಕುಂತಳೆಯು ನಡೆದಿದ್ದಳು. ಪ್ರಿಯಂವದಾನಸೂಯೆಯರು ಈ ಮಾತನ್ನು ಕೇಳಿ ನಸುನಕ್ಕಿರಬಹುದು; ಗೌತಮಿಯು ಶಕುಂತಳೆಗೆ ಗಿಡಬಳ್ಳಿಗಳಲ್ಲಿದ್ದ ಪ್ರೇಮವನ್ನು ಹೊಗಳಿರಬಹುದು. ಹಾಗೆಯೆ ಕುಂಜಗಳ ಮರೆಯಲ್ಲಿ ಅಡಗಿದ್ದ ಪೌರವನು ಒಳಗೊಳಗೆ ಚಟಪಟಿಸಿರಬಹುದು.

ದುಷ್ಷಂತನಿಗೆ ಹಲವು ಕಾಲಗಳನಂತರ ಶಕುಂತಳೆಯೊಡನೆ ದೈವವಶಾತ್ ಸೇರುವಂತಾಗಿತ್ತು. ಆದರೆ ಆಕೆಯೊಡನೆ ತುಸು ಹೊತ್ತು ಇರುವಂತಾಗಲಿಲ್ಲ. ಮನುಷ್ಯನ ಆಶೆಗೆ ನೂರೆಂಟು ವಿಘ್ನಗಳು. ದುಷ್ಷಂತನು ಬಹಳ ದುಃಖಪಟ್ಟನು. ಆತನಿಗೆ ಲತಾಗೃಹವು ಶಕುಂತಳೆಯಿಲ್ಲದೆ ಶೂನ್ಯವಾಗಿದ್ದಿತು. ಹಾಗಿದ್ದರೂ ಅಲ್ಲಿಂದ ಹೊರಹೊರಡಲು ಆತನಿಗೆ ಕಾಲೇ ಬರಲಿಲ್ಲ. ಒಂದು ಕಡೆ ಆಕೆಯು ಹೊರಳಾಡಿ ಪುಡಿಯಾದ ಹೂದಳಿರ ಹಾಸು, ಇನ್ನೊಂದೆಡೆ ಪ್ರಿಯನಿಗೆಂದು ಬರೆದ ಬಾಡಿಹೋದ ಪ್ರೇಮಪತ್ರ; ಮತ್ತೊಂದೆಡೆ ಅವಳ ಕೈಯಿಂದ ಕೆಳಬಿದ್ದ ಹೂಮಾಲೆಯ ಆಭರಣ – ಇದನ್ನೆಲ್ಲ ಕಂಡು, ಆತನಿಗೆ ಲತಾಗೃಹವನ್ನು ಬಿಟ್ಟು ಹೊರಡುವ ಮನಸ್ಸಾಗಲಿಲ್ಲ. ಶಕುಂತಳೆಯ ಯಾವ ಯಾವ ವಾಗ್ವ್ಯಾಪಾರವೂ ಅಂಗವಿನ್ಯಾಸವೂ ತನ್ನನ್ನು ಮುಗ್ಧಗೊಳಿಸಿದ್ದವೋ, ಅವುಗಳೆಲ್ಲ ತನಗಿನ್ನೊಮ್ಮೆ ಕೇಳಿಸಿದಂತಾಯಿತು; ಇನ್ನೊಮ್ಮೆ ಕಂಡಂತಾಯಿತು.

ಆತನ ಮನಸ್ಸು ಶಕುಂತಳೆಯಲ್ಲಿ ನಟ್ಟುಹೋಯಿತು. ತಾನು ಮರುದಿವಸಕ್ಕೆ ರಾಜಧಾನಿಗೆ ಮರಳುವುದೆಂದು ಋಷಿಗಳಿಂದ ಅನುಜ್ಞೆಯನ್ನು ಪಡೆದಿದ್ದನು; ಇನ್ನುಮುಂದೆ ಯಾವ ನೆವವಿಟ್ಟು ಆಶ್ರಮದಲ್ಲಿರಬಹುದೆಂದು ಬಹಳವಾಗಿ ಆಲೋಚಿಸಿದನು. ಆದರೆ ಯಾವ ಕಾರಣವೂ ಆತನಿಗೆ ಹೊಳೆಯಲಿಲ್ಲ.

ಇಷ್ಟು ಹೊತ್ತಿಗೆ ಆತನಿಗೆ ಋಷಿಗಳ ಕೂಗು ಕೇಳಬಂದಿತು. ಆಗ ಸಾಯಂಕಾಲದ ಹೋಮದ ಸಮಯವಾಗಿತ್ತು. ಹೋಮಕ್ಕೆ ವಿಘ್ನಗಳನ್ನು ತಂದೊಡ್ಡುತ್ತಿದ್ದ ರಾಕ್ಷಸರನ್ನೆಲ್ಲ ದುಷ್ಯಂತ ಮಹಾರಾಜನು ತನ್ನ ಧನುಷ್ಟಂಕಾರದಿಂದಲೇ ಓಡಿಸಿ ಬಿಟ್ಟಿದ್ದನು. ಆದರೆ, ತಿರಿಗೊಮ್ಮೆ ಮುನಿಗಳ ಕೂಗು! ತಿರಿಗೊಮ್ಮೆ ಕಣ್ವಾಶ್ರಮದ ವೈಖಾನಸರಿಗೆ ರಾಕ್ಷಸರ ಉಪಟಳ!! ಋಷಿಗಳ ಮೊರೆಯನ್ನು ಕೇಳಿ, ಅರಸನು ಬೆಚ್ಚಿಬಿದ್ದನು; ಹಗಲು ಕನಸಿನಿಂದ ಎದ್ದುಬಿಟ್ಟನು. ತನಗಿನ್ನು ಕೊಂಚ ಕಾಲ ಆಶ್ರಮದಲ್ಲಿ ಉಳಿಯುವಂತಾಯಿತೆಂದು ಮನಗಂಡನು. ಕೂಡಲೇ ಆತನು ಕೈಯಲ್ಲಿದ್ದ ಧನುರ್ಬಾಣಗಳನ್ನು ಹಿಡಿದು ಆಶ್ರಮದತ್ತ ಯಜ್ಞರಕ್ಷಕನಾಗಿ ತೆರಳಿಬಿಟ್ಟನು.

---

೬. ಗಾಂಧರ್ವ ವಿವಾಹ

ದೈವವು ಶಕುಂತಳೆಗೆ ಪ್ರತಿಕೂಲವೆಂದು, ಅದಕ್ಕೆ ತಕ್ಕ ಪರಿಹಾರಮಾಡಲು ಸೋಮತೀರ್ಥಕ್ಕೆ ತೆರಳಿದ ಕಣ್ವನಿನ್ನೂ ಹಿಂತಿರುಗಿದ್ದಿಲ್ಲ; ಆತನಿಲ್ಲದುದರಿಂದ ಆಶ್ರಮದ ವೈಖಾನಸರ ಸಂಕಷ್ಟಗಳನ್ನು ಹೇಳಬರುತ್ತಿದ್ದಿಲ್ಲ. ಹೋಮಕ್ಕೆಂದು ಸಿದ್ಧರಾದೊಡನೆಯೆ, ಛಾಯಾರೂಪಿಗಳಾದ ರಾಕ್ಷಸರು ಯಾಗಗಳಿಗೆ ವಿಘ್ನಗಳನ್ನು ತಂದೊಡ್ಡುತ್ತಿದ್ದರು. ಆಶ್ರಮದಲ್ಲಿ ಕಣ್ವನಿದ್ದಾಗ ಅದರ ಬಳಿ ರಾಕ್ಷಸರ ಸಂಚಾರವೂ ಕೂಡ ಇರಲಿಲ್ಲ. ವೈಖಾನಸರು ದುಷ್ಯಂತ ಮಹಾರಾಜನಿಗೆ ಮೊರೆಯಿಟ್ಟು, ಅವನನ್ನು ಆಶ್ರಮದಲ್ಲಿ ಕೆಲದಿನ ತಡೆದು, ಕುಲಪತಿಯ ಬರುವಿಕೆಯನ್ನು ಇದಿರುನೋಡಿದರು. ದುಷ್ಯಂತನೆಂದರೆ ಮಹಾ ಪರಾಕ್ರಮಶಾಲಿಯು. ಆತನ ಧನುಷ್ಟಂಕಾರಕ್ಕೆ ಹೆದರಿ, ರಾಕ್ಷಸರು ಪಲಾಯನಮಾಡಿದ್ದರು. ಆದರೆ, ತಿರಿಗೊಮ್ಮೆ ಅವರು ದ್ವಿಗುಣೋತ್ಸಾಹದಿಂದ ಮುನಿಗಳ ಯಾಗಗಳನ್ನು ಹಾಳುಮಾಡಬೇಕೆಂಬ ಇಚ್ಛೆಯಿಂದ ಆಶ್ರಮದ ಬಳಿ ತಿರುಗಾಡಲು ಅನುವಾದರು. ದುಷ್ಯಂತನು ಊರಿಗೆ ತೆರಳಿರಬೇಕೆಂದು ಅವರು

ಊಹಿಸಿರಬೇಕು. ಏಕೆಂದರೆ, ನಾಡಿನ ರಾಜನು ಆಶ್ರಮದಲ್ಲಿ ಹೆಚ್ಚು ಹೊತ್ತು ಇರಲಾಗದು. ಆದರೆ, ನಾಡಿನ ಪ್ರಜೆಗಳನ್ನು ಈತಿಭೀತಿಗಳಿಂದ ರಕ್ಷಿಸಿದಂತೆ ಕಾಡಿನ ಪ್ರಜೆಗಳನ್ನೂ ಅರಸನು ಕೈಲಾದಷ್ಟು ಸಾಕುವುದು ಧರ್ಮವಲ್ಲವೆ? ನಾಡಿನ ಪ್ರಜೆಗಳು ತಮ್ಮ ಉತ್ಪತ್ತಿಯಿಂದ ಸ್ವಲ್ಪಾಂಶವನ್ನು ಅರಸನಿಗೆ ಕಂದಾಯ ರೂಪವಾಗಿ ತೆರುವರಾದರೆ, ಕಾಡಿನ ಋಷಿಗಳು ಜಪತಪೋನುಷ್ಠಾನಗಳಿಂದ ಗಳಿಸಿದ ಪುಣ್ಯದಲ್ಲಿ ಆರನೆಯೊಂದಂಶವನ್ನು ಅರಸನಿಗೆ ಬಿಟ್ಟುಕೊಡುವರೆಂದಾದ ಮೇಲೆ, ಅವರ ಆರೈಕೆಗೂ ಅರಸನು ಬಾಧ್ಯನಾಗಿದ್ದನು. ಕಾಡಿಗೆ ಬೇಟೆಗೆಂದು ಬಂದವನಿಗೆ ವೈಖಾನಸರು ಆಶ್ರಮಕ್ಕೆ ಬಂದು ರಕ್ಷಾಶಿಕ್ಷೆಗಳ ಪ್ರಭಾವವನ್ನು ನೋಡೆಂದಿದ್ದರು. ಪ್ರಾಯಶಃ ಪೂರ್ವಕಾಲಗಳಲ್ಲಿ ರಾಜ್ಯಗಳ ಗಡಿಪ್ರಾಂತಗಳಲ್ಲಿರುವ ಜನರು ಈಗಿನಂತೆ ಬಹಳ ಉಪದ್ರವಕಾರಿಗಳಾಗಿದ್ದರು. ಅವರು ಅರಸನ ಅಸ್ತ್ರಬಲಕ್ಕೂ ಸೈನ್ಯಬಲಕ್ಕೂ ಬೆದರುತಿದ್ದಿಲ್ಲ. ಆದರೆ, ಕಣ್ವನಂತಹ ಮಹಾಮಹಿಮರ ಆತ್ಮಬಲಕ್ಕೂ ತಪೋಬಲಕ್ಕೂ ಹೆದರುತ್ತಿದ್ದರು.

ದುಷ್ಯಂತ ಮಹಾರಾಜನು ಆಶ್ರಮದಲ್ಲಿ ಇನ್ನೂ ಕೆಲ ದಿನ ನಿಂತನು; ಇನ್ನೊಮ್ಮೆ ತನ್ನ ಧನುಸ್ಸನ್ನು ಜಗ್ಗಿ ಹಿಡಿದು, ರಾಕ್ಷಸರನ್ನೆಲ್ಲ ಓಡಿಸಿದನು. ಇನ್ನೊಮ್ಮೆ ಮುನಿಗಳ ಯಾಗನಿಮಿತ್ತವಾಗಿ ಛಾಯಾ ರೂಪಿಗಳಾದ ರಾಕ್ಷಸರ ಬೆಂಬತ್ತಿ, ಆತನು ಅವರಿಗೆ ತನ್ನ ಪ್ರಭಾವದ ಪರಿಚಯವನ್ನು ಮಾಡಿಸಿದನು.

ಸಾಯಂಕಾಲದಲ್ಲಿ ವಿಶ್ರಾಂತಿ ಸಿಕ್ಕಿದಾಗಲೆಲ್ಲ ಮಾಲಿನೀತೀರಕ್ಕೆ ತೆರಳಿ ದುಷ್ಯಂತನು ಹೂಬಿಸಿಲಲ್ಲಿ ವಿಹರಿಸುತಿದ್ದನು. ಅನಸೂಯಾ ಪ್ರಿಯಂವದೆಯುವರಿಂದ ಯುಕ್ತಳಾದ ಶಕುಂತಳೆಯೊಡನೆ ಮಾತನಾಡುತ್ತಿದ್ದನು. ಅವರ ಪ್ರೀತಿಯು ದಿನೇ ದಿನೇ ಪ್ರವರ್ಧಮಾನವಾಗಿತ್ತು. ಕಡೆಗೊಂದು ದಿನ ಅರಸನು ಶಕುಂತಳೆಯನ್ನು ಗಾಂಧರ್ವವಿವಾಹ ಮಾಡಿಕೊಂಡನು. ಆ ವಿವಾಹಕ್ಕೆ ಅಗ್ನಿದೇವತೆಯ ಸಾಕ್ಷ್ಯವು ಅಗತ್ಯವಿಲ್ಲ; ಬ್ರಾಹ್ಮವಿವಾಹದಲ್ಲಿ ಕನ್ಯೆಯನ್ನು ದೇವಾಗ್ನಿದ್ವಿಜಸನ್ನಿಧಿಯಲ್ಲಿ ದಾನಮಾಡಿಕೊಡುವ ಪದ್ಧತಿಯಿದೆ. ಆದರೆ, ಗಾಂಧರ್ವದಲ್ಲಿ ಸಾಕ್ಷಿಯೆಂದರೆ, ಹೊತ್ತಾರೆಯಿಂದ ಬೈಗಿಂಗೆ ನಭೋಮಂಡಲದಲ್ಲಿ ವಿರಾಜಿಸುವ ಸಾಕ್ಷಾತ್ ಸವಿತೃನಾಮಕ ಆದಿತ್ಯದೇವತೆ, ಮತ್ತು ಬೈಗಿಂದ ಹೊತ್ತಾರೆಗೆ ಅದೇ ನಭೋಮಂಡಲದಲ್ಲಿ ಮೂಡಿ ಬೆಳಗುವ ಸುಧಾಮಂಡಲಚಕ್ರವರ್ತಿಯಾದ ಚಂದ್ರದೇವತೆ. ಆದರೆ ಶಕುಂತಳಾದುಷ್ಯಂತರ ವಿವಾಹದಲ್ಲಿ ಒಂದು ವಿಶೇಷವಿದ್ದಿತು. ಇಷ್ಟರ ತನಕ ಶಕುಂತಳೆಯೆಂಬ ಹೊಸ ಸೃಷ್ಟಿಯು ಪರಿಚಯವನ್ನು

ಚೆನ್ನಾಗಿ ಅರಸನಿಗೆ ಮಾಡ್ತಿ ಕೊಟ್ಟವರೆಂದರೆ ಪ್ರಿಯಂವದಾನಸೂಯೆಯರು ಸೂರ್ಯಚಂದ್ರರಿಲ್ಲದಿದ್ದರೆ, ಸೃಷ್ಟಿಯೆಂತು ಕತ್ತಲೆಯ ಗುಹೆಯಲ್ಲಿ ಹುದುಗಿ ಬೇಕಾಗಿತ್ತು? ಹಾಗೆಯೇ ಸಖಿಯರಿಲ್ಲದಿದ್ದರೆ ಶಕುಂತಳೆಯ ಸೌಂದರ್ಯ ಅರಸನ ಕಣ್ಣಿಗೆ ಗೋಚರವಾಗುತ್ತಿದ್ದಿಲ್ಲ. ಆದುದರಿಂದಲೆ ಶಕುಂತಳೆಯು ಹೊಸಸೃಷ್ಟಿಯೆಂದು ಹೇಳುವಾಗ ಪ್ರಿಯಂವದಾನಸೂಯೆಯರು ಕಾಲನಿಯಾ ಮಕರಾದ ಸೂರ್ಯಾಚಂದ್ರಮಸರೆಂದು ಕಾಳಿದಾಸನೇ ಹೇಳಿರುವನು. ಅಂತಹ ರನ್ನು ಸಾಕ್ಷ್ಯವಾಗಿಟ್ಟು, ಅರಸನು ಶಕುಂತಳೆಯನ್ನು ಮದುವೆಗೈದನು. ತಂದೆ ತಾಯ್ಗಳಿಲ್ಲದ ಕೂಸು ಋಷ್ಯಾಶ್ರಮದಲ್ಲಿ ಬಳೆದು, ಭಾರತದ ಮಹಾರಾಜ್ಞಿ ಯಾದಳು. ಆಶ್ರಮದ ಯಾವನೊಬ್ಬ ವೈಖಾನಸನಿಗಾಗಲಿ ಇನ್ನೊಬ್ಬನಿಗಾಗಲಿ ಕಾಡಿನ ಮರಿಗಿಳಿಯು ಅರಗಿಳಿಯಾಗಿತ್ತೆಂದು ಗೊತ್ತಾಗಲಿಲ್ಲ. ರೆಕ್ಕೆ ಬಲಿತ ಹಕ್ಕಿಯು ಗೂಡಿನಿಂದ ಹೊರನೆಗೆದು ಆಕಾಶಕ್ಕೆ ಹಾರಿ ಹೋಗುವಂತೆ, ಶಕುಂತ ಳೆಯು ಆಶ್ರಮವನ್ನು ಬಿಟ್ಟುತೆರಳುವುದರಲ್ಲಿರುವಳೆಂದು ಅವರಾರಿಗೂ ತಿಳಿಯಲಿಲ್ಲ.

ಸಖಿಯರು ವಧೂವರರಿಗೆ ಮೃದುಹಾಸದ ಶೋಭನಗಳನ್ನು ಹಾಡಿದರು. ವನದೇವತೆಗಳು ದಂಪತಿಗಳಿಗೆ ಸುಖವಾಗಲೆಂದು ಹರಸಿದರು. “ನಾಡಿನ ರಾಣಿಯೇ! ಕಾಡನ್ನು ಬಿಡುವೆಯ?” ಎಂದು ಪ್ರಿಯಂವದೆಯೆಂದಳು. “ಇಲ್ಲದಿದ್ದರೆ, ಕಾಡು ನಾಡಾದೀತು,” ಎಂದು ಪ್ರಿಯನನ್ನು ಅಪಾಂಗದಿಂದ ಈಕ್ಷಿಸುತ್ತ ಶಕುಂತಳೆ ನಕ್ಕುಬಿಟ್ಟಳು. “ಗೆಳೆಯ! ಗುರುಜನವು ಅಪಮಾನಿತ ವಾಗದಂತೆ ವರ್ತಿಸುವೆಯಲ್ಲವೆ?” ಎಂದು ಅನಸೂಯೆಯು ಅರಸನೊಡನೆ ಕೇಳಿದಳು. ಶಕುಂತಳಾದುಷ್ಯಂತರ ಪ್ರೇಮವೆಂದರೆ ಒಂದಕ್ಕೊಂದು ಹಾಸು ಹೊಕ್ಕಾಗಿತ್ತು. ಆದರೆ ಅನಸೂಯೆಯ ಮನಸ್ಸು ಗೆಳತಿಯ ಮನಸ್ಸು ಅದು ಅನಿಷ್ಟವನ್ನು ಬಯಸುವುದಿಲ್ಲ; ಆದರೆ, ಅನಿಷ್ಟವಾಗದಂತೆ ಪ್ರಯತ್ನಿಸುತ್ತಿದ್ದಿತು.

ಶಕುಂತಳೆಯನ್ನು ರಹಸ್ಯವಾಗಿ ವಿವಾಹಮಾಡಿ ಅರಸನು ಕಣ್ವಾಶ್ರಮ ದಲ್ಲಿ ಕೆಲದಿನಗಳ ತನಕ ನಿಂತನು. ಶಕುಂತಳೆಗೆ ತನ್ನ ಪತಿಯಲ್ಲಿ ಅವಿಚಲಿತ ಪ್ರೇಮವಿದ್ದಿತು; ದುಷ್ಯಂತನಿಗೆ ತನ್ನ ಮಡದಿಯಲ್ಲಿ ಅನನ್ಯವಾದ ಪ್ರೀತಿಯಿದ್ದಿತು. ಅವರಿಬ್ಬರೂ ಮಾಲಿನೀತೀರದ ವೃಕ್ಷಗಳ ಅಡಿಯಲ್ಲಿ ವಿಶ್ರಮಿಸಿ, ಅಲ್ಲಲ್ಲಿಯ ಲತಾಗೃಹಗಳಲ್ಲಿ ವಿಹರಿಸಿ, ತಮ್ಮನ್ನು ಪ್ರೇಮದಿಂದ ಬಂಧಿಸಿಕೊಂಡರು. ಆದರೆ, ಆತನಿಗೆ ರಾಜ್ಯದ ಭಾರವನ್ನು ಹೆಚ್ಚು ಹೊತ್ತು ಮಂತ್ರಿಗಳ ಭುಜಗಳ ಮೇಲಿರಿಸಿ

ಕಣ್ವಾಶ್ರಮದಲ್ಲಿ ಉಳಿಯಲಾಗಲಿಲ್ಲ. ತಾಯಿಯು ಕೈಗೊಂಡ ವ್ರತದ ಪಾರಣೆಗೆ ಮಾಢವ್ಯನನ್ನು ತನ್ನ ಪ್ರತಿನಿಧಿಯನ್ನಾಗಿ ಕಳುಹಿಸಿದ್ದನು. ಅಲ್ಲಿಂದ ಪದೇ ಪದೇ ಕರೆಗಳು ಬರುತಿದ್ದುದರಿಂದ ಆತನಿಗೆ ನಿರ್ವಾಹವಿಲ್ಲದೆ ಹೊರಡಲೇ ಬೇಕಾಯಿತು. ಕಣ್ವನು ಸೋಮತೀರ್ಥದಿಂದ ಮರಳಿಲ್ಲವಾದರೂ ಆತನಿಂದ ತಾನು ಆಶೀರ್ವಾದವನ್ನು ಪಡೆದಿಲ್ಲವಾದರೂ ರಾಜಧಾನಿಗೆ ತೆರಳುವುದೆಂದು ಆತನು ನಿಶ್ಚಯಮಾಡಿದನು.

ತನ್ನ ಪ್ರಿಯನು ರಾಜಧಾನಿಗೆ ತೆರಳುವನೆಂದು ಕೇಳಿ ಶಕುಂತಳೆಯು ಕಣ್ಣೀರಿಟ್ಟಳು; ತಾನೂ ಸಂಗಡ ಬರುವೆನೆಂದಳು. ತಾನು ವಿವಾಹವಾದವಳನ್ನು ಮಹಾರಾಜ್ಞಿಗೆ ಒಪ್ಪುವ ವೈಭವದಿಂದ ಅರಮನೆಗೆ ಕರೆದೊಯ್ಯಬೇಕೆಂದು ದುಷ್ಯಂತನು ಇಚ್ಛಿಸಿದ್ದನು. ಯಾವ ವೈಭವವೂ ಇಲ್ಲದೆ, ಯಾವ ಆಟ್ಟಹಾಸವೂ ಇಲ್ಲದೆ ಶಕುಂತಳೆಯನ್ನು ರಾಜಧಾನಿಗೆ ಕರತರುವುದು ಆತನಿಗೆ ರುಚಿಸಲಿಲ್ಲ. ಆತನು ಶಕುಂತಳೆಯನ್ನು ಸಂತಯಿಸುತ್ತ, ಆಕೆಯ ಜೋಲು ಬಿದ್ದ ಮುಂಗುರುಳನ್ನು ಮೇಲಕ್ಕೆ ಸವರಿ, ಆಕೆಯ ಬಿಡುಮುಡಿಗೆ ಹೂವಿಟ್ಟು, ಆಕೆಯ ಬೆರಳಿಗೆ ತನ್ನ ನಾಮಾಂಕಿತವುಳ್ಳ ವಜ್ರದುಂಗುರವನ್ನು ತೊಡಿಸಿ, "ಪ್ರಿಯೆ, ಇಂದು ನನ್ನನ್ನು ಹೋಗಗೊಡು. ಈ ಉಂಗುರದ ನಾಮಾಕ್ಷರಗಳಲ್ಲಿ ಒಂದೊಂದನ್ನೆ ದಿನಕ್ಕೊಮ್ಮೆ ಗಣಿಸು; ಹಾಗೆ ಗಣಿಸಿ ಮುಗಿಯುವುದರೊಳಗೆ ನಿನ್ನನ್ನು ಕರೆದೊಯ್ಯಲು ನನ್ನ ದೂತನು ಸಮಸ್ತ ಸೇನಾಯುಕ್ತನಾಗಿ ಬಂದು ಮುಟ್ಟುವನು," ಎಂದು ಅಭಯವಿತ್ತನು.

ದುಷ್ಯಂತ ಮಹಾರಾಜನು ಆಶ್ರಮದಿಂದ ರಾಜಧಾನಿಗೆ ಹೊರಡುವಾಗ, ಆಶ್ರಮವಾಸಿಗಳೆಲ್ಲರೂ ಬಂದು ಅವನನ್ನು ಬೀಳ್ಕೊಟ್ಟರು. ವೈಖಾನಸರೆಲ್ಲರೂ ಆತನನ್ನು ಹರಸಿದರು. ಮುನಿಶಿಷ್ಯರೆಲ್ಲರೂ ಭಾರತದ ಮಹಾರಾಜನಿಗೆ ಜಯಗೀತವನ್ನು ಹಾಡಿದರು. ಋಷಿಕನ್ಯೆಯರೆಲ್ಲರೂ ಅರಸನ ಮಸ್ತಕದ ಮೇಲೆ ಅರಳಮಳೆಗೈದು ಜಯಘೋಷವನ್ನು ಮಾಡಿದರು. ಪ್ರಿಯಂವದಾನಸೂಯೆಯರು ತಮ್ಮ ಗೆಳೆಯನನ್ನು ಬೀಳ್ಕೊಡುವುದಕ್ಕೆ ಮರೆಯಲಿಲ್ಲ. ಅವರ ಮುಖವು ಬಾಡಿದ್ದರೂ, ಮುಖದಲ್ಲಿ ಮೃದುಹಾಸವು ಚಿಂತೆಗೆ ಗ್ರಾಸವಾಗಿದ್ದಿಲ್ಲ. ದುಷ್ಯಂತನು ಪ್ರಿಯಂವದಾನಸೂಯೆಯರನ್ನು ಕಂಡು, ನಡೆಸಿದ ರಥದ ಕುದುರೆಗಳನ್ನು ನಿಲ್ಲಿಸಿ, "ಹೋಗಿ ಬರುವೆನೆ"ಂದನು. ಅವರು ನಸುನಕ್ಕರು; ರಥವು ಮೆಲ್ಲನೆ ಮುಂದಕ್ಕೆ ನಡೆಯಿತು. ವೈಖಾನಸರು ತನಗಿತ್ತ ಆಶೀರ್ವಾದದ ಭಾರ

ವನ್ನು ಹೊರಲಾರದವನಾದನೋ ಎಂಬಂತೆ ಅರಸನು ಚಿಂತಾಕ್ರಾಂತನಾಗಿ ಮುಖ ಬಗ್ಗಿಸಿದನು. ಶಕುಂತಳೆಯ ವಿವಾಹಗೈದು, ಹಿರಿಯರಿಗೆ ಆ ವಿಚಾರ ವನ್ನು ತಿಳಿಸದೆ ತಾನಿಂದು ಕಳ್ಳನಂತೆ ಓಡುತ್ತಿರುವೆನೆಂದು ಆತನು ಚಿಂತಿಸು ತ್ತಿದ್ದಿರಬಹುದು; ಇಷ್ಟು ದಿವಸ ಮಾಲಿನಿಯ ತೀರದಲ್ಲಿ ಶಕುಂತಳೆಯೊಡನೆ ಕಳೆದ ದಿನಗಳನ್ನು ನೆನೆದು, ಆತನು ವ್ಯಥೆಗೀಡಾಗಿದ್ದಿರಬಹುದು. ಕಣ್ವಾಶ್ರಮದ ಸೃಷ್ಟಿಸೌಂದರ್ಯವು ಆತನ ಮನಸ್ಸಿಗೆ ಉಲ್ಲಾಸವನ್ನುಂಟು ಮಾಡಲಿಲ್ಲ. ಕಣ್ವಾಶ್ರಮದ ಮೃಗಪಕ್ಷಿಗಳು ಆತನ ಹೃದಯಕ್ಕೆ ಸಂತೋಷವನ್ನುಂಟು ಮಾಡಲಿಲ್ಲ.

---

೭. ದುರ್ವಾಸನ ಆಗಮನ

ದುಷ್ಯಂತ ಮಹಾರಾಜನಿಂದ ವಿಯುಕ್ತಳಾದ ಶಕುಂತಳೆ ಆಧಾರ ತಪ್ಪಿದ ಬಳ್ಳಿಯಂತೆ ನೆಲಕ್ಕುರುಳಿದಳು; ಸಾಯಂಕಾಲವಾದೊಡನೆಯೆ ಸಹಚರನನ್ನು ಕಾಣದ ಚಕ್ರವಾಕಿನಿಯಂತೆ ಬಿಸುಸುಯ್ದಳು; ಸುರಿಯುವ ಮಂಜಿನಿಂದ ತುಂಬಿ ಬಳುಕುವ ಕುಮುದಿನಿಯಂತೆ ದುಃಖಿಸಿದಳು; ಮೃತ್ಯುವಿನ ಬಾಯಿ ಯಲ್ಲಿ ಸಿಲುಕಿಬಿಟ್ಟ ಚಿಗರಿಯ ಮರಿಯಂತೆ ಎಲ್ಲವನ್ನೂ ಮರೆತುಬಿಟ್ಟಳು.

ದುಷ್ಯಂತನು ರಥಾರೋಹಿಯಾಗಿ ರಾಜಧಾನಿಗೆ ನಡೆದೊಡನೆಯೆ ಶಕುಂತ ಳೆಗೆ ದುಷ್ಯಂತನಿಲ್ಲದ ಆಶ್ರಮವೆಲ್ಲ ಶೂನ್ಯವಾಯಿತು. ದುಷ್ಯಂತನನ್ನು ಕಾಣದೆ ಅವಳ ಕಣ್ಣು ಕುರುಡಾಯಿತು; ಆತನ ಮೋಹನಗಂಭೀರ ಮಾತುಗಳನ್ನು ಕೇಳದೆ ಕಿವಿ ಕಿವುಡಾಯಿತು. ಪಂಚೇಂದ್ರಿಯಗಳೆಲ್ಲ ನಿಸ್ತೇಜವಾಗಿ, ಅವಳು ಬಾಹ್ಯಪರಿಜ್ಞಾನಶೂನ್ಯಳಾಗಿ ದುಷ್ಯಂತನಲ್ಲಿ ತದೇಕಚಿತ್ತಳಾಗಿ ಮರವೆಯ ಗಬ್ಬ ದಲ್ಲಿ ಅಡಗಿಹೋದಳು; ಶೂನ್ಯತೆಯ ವಿಸ್ತಾರದಲ್ಲಿ ಲೀನವಾದಳು. ಆಶ್ರಮ ದ್ವಾರದ ಬಳಿಯಿದ್ದ ಮರದ ಛಾಯೆಯಲ್ಲಿ ತಳಿರ ಹಾಸಿಗೆಯ ಮೇಲೆ ತಲೆಗೆ ತೋಳನ್ನು ಇಂಬಿಟ್ಟು, ಮಲಗಿದಳು.

ಪ್ರಿಯಂವದಾನಸೂಯೆಯರು ಬಂದು, ವಿರಹದಿಂದ ದುಃಖಿಸುವ ತಮ್ಮ ಸಖಿಯನ್ನು ಸಮಾಧಾನಪಡಿಸಿದರು. ತಮ್ಮೊಡನೆ ಹೂದೋಟಕ್ಕೆ ಬಂದು ಹೂಗಳನ್ನು ಕೊಯ್ಯಬೇಕೆಂದು ಅವರು ಕೇಳಿಕೊಂಡರು. ಆದರೆ ಶಕುಂತ ಳೆಯು ತಡೆದು ಬರುವೆನೆಂದಳು. ಸಖಿಯರು ಆಕೆಗೆ ಮತ್ತೆ ಒತ್ತಾಯ

ಮಾಡಲಿಲ್ಲ. ಆಕೆಯನ್ನು ಅವರು ಮತ್ತೊಮ್ಮೆ ಸಂತಯಿಸಿ ಹೂ ಕೊಯ್ಯಲು ಹೂದೋಟಕ್ಕೆ ನಡೆದರು. ಶಕುಂತಳೆಯನ್ನು ಬಿಟ್ಟು ಹೊರನಡೆದವರಲ್ಲ, ಶಕುಂತಳೆಯನ್ನು ತೊರೆದು ಜೀವಿಸಿದವರಲ್ಲ. ಆದರೆ ಸಖಿಯರು ಇಂದು ಶಕುಂತಳೆಯನ್ನು ಆಶ್ರಮದಲ್ಲೆ ಬಿಟ್ಟು ತೋಟಕ್ಕೆ ನಡೆದರು.

ಪ್ರಿಯಂವದಾನಸೂಯೆಯರು ಹೂಕೊಯ್ಯುತ್ತಿದ್ದಾಗ, ಅವರಲ್ಲಿ ಎಂದಿನಂತೆ ಪರಿಹಾಸವು ಕಾಣುತ್ತಿದ್ದಿಲ್ಲ. ಉತ್ತರವಾದಿತ್ವದ ಹೆದರಿಕೆಯು ಅವರ ಮನಸ್ಸಿನ ಮೇಲೆ ಕೂತುದರಿಂದ ಆ ಮನಸ್ಸು ಹತ್ತಿಯ ರೆಕ್ಕೆಯನ್ನು ಬಿಡಿಸಿ, ವಿನೋದ ಪ್ರಪಂಚದಲ್ಲಿ ತೇಲಿಹೋಗಲಿಲ್ಲ. ಶಕುಂತಳೆಯು ಸಮೀಪದಲ್ಲಿಲ್ಲದಿದ್ದರೂ ಅವಳ ಧ್ಯಾನವೇ ಅವರ ಚಿಂತೆಯಾಗಿತ್ತು. ಸೋಮತೀರ್ಥದಿಂದ ತಂದೆಯು (ಕಣ್ವನನ್ನು ಅವರು ತಂದೆಯೆನ್ನುತ್ತಿದ್ದರು.) ಹಿಂತಿರುಗಿದಾಗ ಈ ವೃತ್ತಾಂತವನ್ನು ಕೇಳಿ ಏನನ್ನುವನೋ ಎಂದು ಅವರು ಹೆದರಿದರು. ಅನುರೂಪನಾದವನಿಗೆ ಶಕುಂತಳೆಯನ್ನು ಮದುವೆಮಾಡಿ ಕೊಡಬೇಕೆಂದು ಆತನ ಸಂಕಲ್ಪವಿತ್ತು. ಈಗ ದೈವವೇ ಅದನ್ನು ಸಾಧಿಸಿ ತನ್ನನ್ನು ಕೃತಾರ್ಥನನ್ನಾಗಿ ಮಾಡಿದ್ದರಿಂದ ತಂದೆ ಕೋಪಿಸಲಿಕ್ಕಿಲ್ಲವೆಂದು ಅವರು ಊಹಿಸಿದರು. ತಮ್ಮನ್ನೆಲ್ಲರನ್ನು ನಂಬಿಸಿ, ಗಾಂಧರ್ವರೀತಿಯಿಂದ ಮದುವೆಯಾದ ಅರಸನಿಗೆ ಅಂತಃಪುರವನ್ನು ಹೊಕ್ಕನಂತರ ಕಾಡಗುಡಿಸಲ ನೆನಪುಳಿದೀತೇ ಎಂಬುದೂ ಅವರ ಮನಸ್ಸಿನ ಇನ್ನೊಂದು ಚಿಂತೆಯಿದ್ದಿತು. ಆದರೆ, ಮಹಾತ್ಮರು ತಮ್ಮ ಆಕೃತಿಗುಣಗಳಿಗೆ ವಿರುದ್ಧವಾಗಿ ನಡೆಯಲಾರರೆಂಬುದೇ ಅವರ ಮನಸ್ಸಿನ ವಿಶ್ವಾಸವಾಗಿತ್ತು. ಅಂತೂ ಯಾರೊಡನೆಯೂ ಕೇಳದೆ, ಸಖಿಗೆ ಅರಸನ ಕೈಹಿಡಿಯಲು ಅವರು ಉತ್ತೇಜನವನ್ನು ಕೊಟ್ಟಿದ್ದರು. ಅರಸನನ್ನು ಚೆನ್ನಾಗಿ ತಿಳಿದವರೂ ಅಲ್ಲ; ತಂದೆಯೆದುರು ನಿಲ್ಲಲು ಸಮರ್ಥರಾದವರೂ ಅಲ್ಲ.

ಪ್ರಿಯಂವದೆಯು ಹೀಗೆ ವಿಚಾರಿಸುತ್ತ ಹೂ ಕೊಯ್ಯುತ್ತಿದ್ದಳು. ಅನಸೂಯೆಯು ಹೂಮಾಲೆಯೊಂದನ್ನು ಕಟ್ಟುತ್ತಿದ್ದಳು. ಫಕ್ಕನೆ ಪ್ರಿಯಂವದೆಯ ಕೈಯಲ್ಲಿದ್ದ ಪುಷ್ಪಪಾತ್ರವು ಭೂಮಿಗೆ ಬಿದ್ದು ಹೂವೆಲ್ಲ ಚೆಲ್ಲಿಹೋಯಿತು; ಪುಷ್ಪಪಾತ್ರವು ಬಿದ್ದಿತೆಂದು ಅನಸೂಯೆ ಮುಖವೆತ್ತಿದಾಗ ಆಕೆಯ ಹೂಮಾಲೆಯು ಕೈಯಿಂದ ಜಾರಿಹೋಯಿತು. ಆಗ ತಾನೆ ಶಕುಂತಳೆಯ ದುರ್ವಿಪಾಕದ ಮೂರ್ತಿಯು ಕಣ್ವಾಶ್ರಮವನ್ನು ಹೊಕ್ಕಿತು. ಶಕುಂತಳೆಯ ಪ್ರತಿಕೂಲ ದೈವಕ್ಕೆ ಪರಿಹಾರ ಮಾಡಬೇಕೆಂಬ ಉದ್ದೇಶದಿಂದ ಸಾವಿರಾರು

ವೈಲುಗಳ ಭೂಮಿಯನ್ನು ಕ್ರಮಿಸಿ ಕಷ್ಟಪಟ್ಟ ಮುನಿವರ್ಯನ ಪ್ರಯತ್ನಗಳನ್ನು ನಿಷ್ಫಲವನ್ನಾಗಿ ಮಾಡುವಂತಹ ದುರ್ವಾಸನ ಆಗಮನವು ಕಣ್ವಾಶ್ರಮಕ್ಕುಂಟಾಯಿತು. ದುರ್ವಾಸನೆಂಬ ಧೂಮಕೇತು ಶಕುಂತಳೆಯ ಭವಿಷ್ಯದಾಕಾಲದಲ್ಲಿ ಮೂಡಿಬಿಟ್ಟಾಗ ಅಪಶಕುನಗಳು ತೋರಿಬಂದವು. ಪ್ರಿಯಂವದಾನಸೂಯೆಯರು, ಒಬ್ಬಳು ಇನ್ನೊಬ್ಬಳ ಮುಖವನ್ನು ದಿಟ್ಟಿಸಿ ಸುಮ್ಮನಾದರು.

ಕಣ್ವಾಶ್ರಮವೆಂದರೆ, ಅತಿಥಿಗಳಿಗೊಂದು ಛತ್ರ. ದುರ್ವಾಸ ಮಹರ್ಷಿಯು ಆ ಮಾರ್ಗವಾಗಿ ದಾಟುವವನು ಕಣ್ವಮುನಿಗೆ ಸಂದರ್ಶನವನ್ನು ಕೊಟ್ಟು ತೆರಳುವೆನೆಂದು ಬಂದೇಬಿಟ್ಟನು. ದುರ್ವಾಸನು ಸುಲಭಕೋಪಿಯು; ಪ್ರಳಯಕಾಲದ ಸಿಡಿಲಿನೊಡನೆ ಹುಟ್ಟಿ, ಮಹಾರುದ್ರನ ತಾಂಡವದ ನೃತ್ಯಶಾಲೆಯಲ್ಲಿ ಬೆಳೆದು, ಮೂಗಿನ ಮೇಲೆ ಮುನಿಸಿಟ್ಟು, ಹೋದಲ್ಲಿ ಬಂದಲ್ಲಿ, ಕುಳಿತಲ್ಲಿ ನಿಂತಲ್ಲಿ ಆರ್ಭಟಿಸಿ, ಮೂರು ಲೋಕಗಳನ್ನು ಗಡಗಡನೆ ನಡುಗಿಸಿದ ಪರಾಕ್ರಮಶಾಲಿಯು! ಸಮಯವೊದಗಿ ಬಂದರೆ, ಜಗತ್ತೆಲ್ಲವನ್ನೂ ಪುಡಿಗೈದು, ಪಿಂಡಮಾಡಿ ಶ್ವಾನಸೂಕರಗಳಿಗೆ, ಮೀನಮಕರಗಳಿಗೆ ತಿನ್ನಿಸಬೇಕೆಂದಿರುವ ಮಹಾಮಹಿಮನು! ಸರ್ವ ತಪಸ್ವಿಗಳಿಗೂ ಕ್ಷಮೆಯೆ ಮೂಲವಾದರೂ, ಪರರ ದೋಷಗಳನ್ನು ಕಂಡು, ಕೋಪಿಸಿ, ಕಣ್ಣಿದ್ದೂ ಕುರುಡನಾದವನೆಂದರೆ ತಾರಾಪತಿಯಾದ ಚಂದ್ರನ ಬೆನ್ನೊಳುದಿಸಿ, ಅತ್ರಿಗೆ ಮಗನಾಗಿ ಹುಟ್ಟಿದ ದುರ್ವಾಸನು. ವಿಷವೃಕ್ಷವು ಜಟಾವಲ್ಕಲಗಳನ್ನು ಧರಿಸಿ ಲೋಕವಿನಾಶಕ್ಕೆ ನಿಂತಂತೆ, ದುರ್ವಾಸನು ಸನ್ಯಾಸಿಯಾಗಿಬಿಟ್ಟನು. ಹಾಗಿದ್ದರೂ ಈತನು ಪರಮ ಧಾರ್ಮಿಕನಾಗಿದ್ದನು. ಈತನಲ್ಲಿ ಧರ್ಮವೂ ಕ್ರೋಧವೂ ನೈಸರ್ಗಿಕ ವಿರೋಧವಿದ್ದ ನೀರೂ ಬೆಂಕಿಯೂ ಎಂಬಂತೆ ನೆಲೆ ಮಾಡಿದ್ದುವು.

ಇಂತಹ ಅಪೂರ್ವ ಮೂರ್ತಿಯು ಕಣ್ವಾಶ್ರಮಕ್ಕೆ ದಯಪಾಲಿಸಿದಾಗ, ಈ ಮಹಾಮಹಿಮನಿಗೆ ಸ್ವಾಗತವನ್ನೀಯಲು ಕಣ್ವನು ಇರಲಿಲ್ಲ; ವೈಖಾನಸರೂ ತೋರಲಿಲ್ಲ. ಕಣ್ವನ ಭಗಿನಿ, ಆ ಗೌತಮಿಯು ಇಂದು ಅಲ್ಲಿರಲಿಲ್ಲ. ಶಕುಂತಳೆಯಲ್ಲದೆ ಮತ್ತಾರೂ ಕಾಣಲಿಲ್ಲ. ದುರ್ವಾಸನು ಹೊರಬಾಗಿಲಲ್ಲಿ ನಿಂತು, "ಜಯ ಮಹಾದೇವ ಶಂಕರ ಶಂಭೋ!" ಎಂದು ಉದ್ಘೋಷಿಸಿದನು. ಆತನಿಗಾರೂ ಸ್ವಾಗತವನ್ನೀಯಲಿಲ್ಲ. ಆತನಿನ್ನೊಮ್ಮೆ, "ಅತ್ರಿಯ ಮಗನು

ಅತಿಥಿಯಾಗಿ ಬಂದಿರುವನು," ಎಂದು ನಿವೇದಿಸಿದನು. ತನಗೆದುರು ಕಾಣುತ್ತಿದ್ದ ಲಲನೆಯೊಬ್ಬಳು ತನ್ನೆಡೆಗೆ ಚಿತ್ತವನ್ನು ಕೊಡದೆ ಇರುವುದನ್ನು ನೋಡಿ ದುರ್ವಾಸನು ಸಹಿಸಲಾರದಾದನು. ಪಾಪ! ವಿರಹವೇದನೆಯಿಂದ ಬಾಹ್ಯಜಗತ್ತನ್ನೇ ಮರೆತ ಶಕುಂತಳೆಯೇನು ತಿಳಿದಾಳು? ದುರ್ವಾಸನಿಗೆ ಸಿಟ್ಟೇರಿತು. ಆತ್ಮವಿದ್ಯೆಯೊಡನೆ ಆತನ ಭ್ರುಕುಟಿಯು ಕಪ್ಪಾಯಿತು; ಪಂಚೇಂದ್ರಿಯಗಳೊಡನೆ ಆತನ ಕಣ್ಣು ಕೆಂಪೇರಿತು, ಬೆವರ ಹನಿಗಳೊಡನೆ ಆತನ ತಪಸ್ಸು ಸಿಡಿಯಿತು; ಯಶಸ್ಸಿನೊಡನೆ ಆತನ ತುಟಿಗಳು ನಡುಗಿದುವು. ಶಕುಂತಳೆಯ ಮನಸ್ಸನ್ನು ಕೊರೆಯುವ ಕೀಟವನ್ನು ದುರ್ವಾಸನು ತಿಳಿದು ರೋಷದಿಂದ ಶಾಪ ಜಲವನ್ನು ಕೈಯಲ್ಲಾಂತು, "ಅಹಾ! ಅತಿಥಿಪರಿಭಾವಿನಿ! ಯಾರ ಮೇಲಿನ ಮೋಹದಿಂದ ಆಶ್ರಮದ ಹೊರಬಾಗಿಲಲ್ಲಿ ನಿಂತ ಈ ತಪೋ ಧನನನ್ನು ಗಣಿಸಲಾರದೆ ಹೋದಿಯೋ ಆತನು ನಿನ್ನನ್ನು ಮರೆತೇ ಹೋಗಲಿ," ಎಂದು ಶಾಪವಿತ್ತು ನಡೆದುಬಿಟ್ಟನು.

ಹೂದೋಟದಲ್ಲಿದ್ದ ಸಖಿಯರಿಗೆ ಅತಿಥಿಯ ಗುಡುಗು ಕೇಳಿಸಿತು. ಗುಡುಗಿತೆನ್ನುವುದರಲ್ಲಿ ಮಿಂಚೂ ಹೊಳೆದಿದ್ದಿತು. ಹೊಳೆದ ಮಿಂಚು ಬಡಿಯಿ ತೆಂದೂ ಹೆದರಿದರು. ಅನಸೂಯೆಯು, ತಾನು ಸರಿಪಡಿಸುತ್ತಿದ್ದ ಹೂಮಾಲೆ ಯನ್ನು ಅಲ್ಲೇ ಬಿಸುಟು, ಪ್ರಿಯಂವದೆಗೆ ಅರ್ಘ್ಯಮಿಶ್ರವನ್ನು ತಯಾರಿಸೆಂದು ತಿಳಿಸಿ, ಆಶ್ರಮದ್ವಾರದತ್ತ ಓಡಿದಳು. ದುರ್ವಾಸನಾಗ ಬೇಗಬೇಗನೆ ಆಶ್ರಮಕ್ಕೆ ಬೆನ್ನಿಕ್ಕಿ ನಡೆಯುತ್ತಿದ್ದನು. ಅನಸೂಯೆಯು ಚಿಗರಿಯ ಮರಿಯಂತೆ ಹಾರಿ ಆತನ ಬೆಂಬತ್ತಿದಳು. ಮಹರ್ಷಿಯ ಕಾಲ್ಗೆರಗಿ ಸಖಿಯ ಅಪರಾಧವನ್ನು ಕ್ಷಮಿಸಬೇಕೆಂದು ಸೆರಗೊಡ್ಡಿ ಆತನೊಡನೆ ಬಿನ್ನವಿಸಿದಳು. ತಾನು ಕೊಟ್ಟ ಪ್ರಸಾದವನ್ನು ಧಿಕ್ಕರಿಸಿದನೆಂಬ ಕೋಪದಿಂದ ಈತನು ಹಿಂದೊಮ್ಮೆ ಸ್ವರ್ಗ ದೊಡೆಯನಾದ ಮಹೇಂದ್ರನ ಧನಕನಕ ವಸ್ತುವಾಹನಗಳೆಲ್ಲವೂ ಸಾಗರದ ಪಾಲಾಗುವಂತೆ ಶಪಿಸಿದ್ದನು. ಅನಂತರ ತಾನು ವೇದಪಾಠ ಮಾಡುತ್ತಿದ್ದಾಗ ತನ್ನ ಕಂಠವು ವಿಸ್ವರವಾದೊಡನೆ ನಕ್ಕುಬಿಟ್ಟ ಸರಸ್ವತೀ ದೇವಿಯನ್ನು ಭೂಮಿ ಯಲ್ಲಿ ಹುಟ್ಟುವಂತೆ ಶಪಿಸಿದ್ದನು. ಆತನು ಶಪಿಸಿದ ಸಂದರ್ಭಗಳು ಒಂದೆರ ಡಲ್ಲ; ನೂರಾರು. ದೋಷಕ್ಕೊಂದು ಕೋಪ; ಕೋಪಕ್ಕೊಂದು ಶಾಪ. ತಾನಾಡಿದ ಮಾತು ಸಟೆಯಾಗದೆಂದು ಮುನಿ ನಡೆದೇ ಬಿಟ್ಟನು. ಮೊದಲ ತಪ್ಪನ್ನು ಕ್ಷಮಿಸಬೇಕೆಂದು ಮುನಿಯ ಹಿಂದೆಯೇ ಅನಸೂಯೆ ಬಂದಳು.

ಕಡೆಗೆ, ಬಿರುಮಳೆ ನಿಂತು ಶಾಂತಿಯುಂಟಾಗುವಂತೆ, ದುರ್ವಾಸನ ಪಾಷಾಣ ಹೃದಯವು ಕರಗಿತು. ಅನಸೂಯೆಯ ಮಾತು ಆತನಿಗೆ ಉಚಿತವೆಂದ ತೋಚಿತು. ಅಭಿಜ್ಞಾನದರ್ಶನದಿಂದ ತಾನು ಕೊಟ್ಟ ಶಾಪವು ವಿಮೋಚನ ಯಾಗುವುದೆಂದು ನುಡಿದು ಆತನು ಮುನ್ನಡೆದನು. ಅನಸೂಯೆಯು, ಆಶ್ರ ಮಕ್ಕೆ ಬಂದು ತಮ್ಮಿಂದ ಸತ್ಕಾರವನ್ನು ಪಡೆಯಬೇಕೆಂದು ಮುನಿಯನ್ನು ಬೇಡಿ ಕೊಂಡಳು. ಆದರೆ, ಆಶ್ರಮಕ್ಕೊಮ್ಮೆ ಬೆನ್ನುತೋರಿಸಿ, ತಿರಿಗೊಮ್ಮೆ ಮುಖ ವನ್ನು ತೋರಿಸಲಾರೆನೆಂದು ದುರ್ವಾಸನು ತನ್ನ ಹಾದಿಹಿಡಿದನು. ಹೇಗಿದ್ದರೂ ಅನಸೂಯೆಗೆ ಜೀವ ಬಂದಂತಾಯಿತು. ಅರಸನು ಶಕುಂತಳೆಯ ಬೆರಳಿಗಿಟ್ಟ ಉಂಗುರದ ನೆನಪು ಅವಳಿಗುಂಟಾಯಿತು. ನಡೆದುದೆಲ್ಲವನ್ನು ಆಕೆಯು ಪ್ರಿಯಂವದೆಗೆ ಅರುಹಿದಳು. ಕಠೋರವಾದ ಈ ವರ್ತಮಾನವನ್ನು ಶಕುಂತ ಳೆಗೆ ತಿಳುಹಿಕೊಟ್ಟು ಬಿಸಿನೀರಿನಿಂದ ಮಲ್ಲಿಗೆಯ ಬಳ್ಳಿಯನ್ನು ಪೀಡಿಸಬಾರ ದೆಂದು ಪ್ರಿಯಂವದೆಯೆಂದಳು. ಅನಸೂಯೆಯದಕ್ಕೆ ಒಪ್ಪಿಕೊಂಡಳು. ತದ ನಂತರ ಅವರಿಬ್ಬರೂ ಶೂನ್ಯಹೃದಯಳಾದ ತಮ್ಮ ಸಖಿಯನ್ನು ಕಂಡರು. ಅವಳು ಆಗಲೂ ಬಾಹ್ಯಜಗತ್ತನ್ನೇ ಮರೆತಿದ್ದಳು. ಸಖಿಯರು ಶಕುಂತಳೆಯ ದುರದೃಷ್ಟಕ್ಕಾಗಿ ಬಹಳ ದುಃಖಿಸಿದರು; ಮನಸ್ಸಿನಲ್ಲೆ ಕೊರಗಿದರು.

---

೮. ಸಂದೇಶ

ಲೋಕವು ಸುಖದುಃಖಗಳೆರಡರಲ್ಲಿ ಇಡಲ್ಪಟ್ಟು ತೂಕವಾಗುತ್ತದೆಂದೂ ತಿರುಗಾಲಿಯಂತೆ ಸುಖದುಃಖಗಳೆರಡೂ ಕ್ರಮವಾಗಿ ಮೇಲ್ಕೆಳಗಾಗುವುವೆಂದೂ ಜನರು ಹೇಳುವುದುಂಟು. ಇಲ್ಲದಿದ್ದರೆ, ಸರಸಿಗಳ ತೀರದಲ್ಲಿ, ಮರಗಳ ಬುಡ ದಲ್ಲಿ, ಬೆಳ್ದಿಂಗಳ ತಂಪಿನಲ್ಲಿ ಶಕುಂತಳೆಯೊಡನೆ ವಿಹರಿಸಿ, ಒಂದು ವಾರದೊಳಗೆ ಅವಳನ್ನು ರಾಜಧಾನಿಗೆ ಕರೆದೊಯ್ಯುವೆನೆಂದು ನಂಬಿಸಿದ ಮಹಾರಾಜನು ಅಂತಃಪುರವನ್ನು ಸೇರಿದ ಮಾತ್ರಕ್ಕೆ ವನಾಂತರದಲ್ಲಿ ನಡೆದುದೆಲ್ಲವನ್ನು ಏಕೆ ಮರೆತುಬಿಡಬೇಕು? ಅಥವಾ ದುರ್ವಾಸ ಮಹರ್ಷಿಯ ಶಾಪದಿಂದಾಗಿಯೇ ದುಷ್ಯಂತ ಮಹಾರಾಜನು ತನ್ನ ಪ್ರಿಯೆಯನ್ನು ಮರೆಯುವಂತಾಯಿತೆ? ಹೇಗಿ ದ್ದರೂ ಕಣ್ವಾಶ್ರಮದ ಬಾಲೆ ಮೋಸದ ಬಲೆಯಲ್ಲಿ ಸಿಕ್ಕಿಬಿದ್ದಳು. ಮಿಡಿ ಮಿಡಿದ ಕಂಬನಿಯು ಅವಳ ತುಟಿಗಳ ಬಣ್ಣವನ್ನು ಕುಂದಿಸಿತು. ಸಂಸ್ಕಾರ

ಲೋಪದಿಂದ ಅವಳ ಕುಡಿಗುರುಳು ಜೋಲುಬಿದ್ದು, ಮೋಡದ ಮರೆಯಲ್ಲಿದ್ದ ಕ್ಷೀಣ ಪ್ರಭೆಯ ಚಂದ್ರನಂತೆ ಅವಳ ಮುಖವು ದೀನವಾಯಿತು. ತನ್ನನ್ನು ಕರೆದೊಯ್ಯುವ ದೂತನನ್ನು ಪ್ರಿಯನು ಬೇಗನೇ ಕೊಟ್ಟುಕಳುಹಿಸುವಂತಾಗ ಲೆಂದು ಕುಲದೇವತೆಗೆ ಅವಳು ಬಲಿಹರಕೆ ಹೊತ್ತಳು. ಆದರೆ, ದಿವಸಗಳ ಮೇಲೆ ದಿವಸಗಳು ಉರುಳಿದುವು. ಹಸ್ತಿನಾವತಿಯ ದೊರೆಯ ಸಮಾಚಾರವು ವನಾಂತರದ ಗಿಡಪೊದರುಗಳ ನಡುವೆ ಹುಲಿಕರಡಿಗಳ ಮಧ್ಯವಿದ್ದ ಕಣ್ವಾಶ್ರಮಕ್ಕೆ ಮುಟ್ಟಲಿಲ್ಲ.

ಶಕುಂತಳೆಯು ವಿರಹವ್ಯಥೆಯನ್ನು ಕಳೆಯಲೆಂದು ಒಮ್ಮೊಮ್ಮೆ ಕೈಯಲ್ಲಿ ವೀಣೆಯನ್ನು ಹಿಡಿದು ತೊಡೆಯ ಮೇಲಿರಿಸಿ, ತಂತಿಗಳನ್ನು ಮಿಾಟಿ ದುಷ್ಯಂತ ಮಹಾರಾಜನ ಕೀರ್ತಿಯನ್ನು ಹಾಡುತ್ತಿದ್ದಳು. ಆದರೆ, ಕಣ್ಣಿಂದ ಸುರಿದ ನೀರು ವೀಣೆಯ ತಂತಿಗಳನ್ನು ಒದ್ದೆ ಮಾಡುತ್ತಿದ್ದುದರಿಂದ ವೀಣೆಯಲ್ಲಿ ಸ್ವರ ವುಂಟಾಗದೆ ಇರುತ್ತಿದ್ದು ಶಕುಂತಳೆಯು ತನ್ನ ದುಃಸ್ಥಿತಿಯನ್ನು ಚಿಂತಿಸಿ ಮೂರ್ಛಿತಳಾಗುತ್ತಿದ್ದಳು. ಕಳೆದ ದಿನಗಳನ್ನು ನೆನೆಸಿ, ದೇಹಲಿಯಲ್ಲಿಟ್ಟ ಪುಷ್ಪಗಳಿಂದ ಅವುಗಳನ್ನು ಗಣಿಸಿ, ಇನ್ನೂ ಹಸ್ತಿನಾವತಿಗೆ ತೆರಳಲು ತನಗೆ ವಿಧಿ ಬಗೆದಿಲ್ಲವೆಂದು ಶಕುಂತಳೆಯು ಹಲುಬುತ್ತಿದ್ದಳು. ಗೌತಮಿಯೇ ಮೊದಲಾದ ಹಿರಿಯರಿಗೆ ಶಕುಂತಳೆಯೇಕಿಂತು ಬಡವಾಗುತ್ತಿದ್ದಳೆಂದು ತಿಳಿಯ ಲಿಲ್ಲ; ಅವಳೇಕೆ ಕೇಶಗಳನ್ನು ಬಾಚಿ ಬೈತಲೆಯನ್ನೇಕೆ ಬಿಡಿಸುತ್ತಿದ್ದಿಲ್ಲವೆಂದು ಗೊತ್ತಾಗಲಿಲ್ಲ. ತನ್ನ ಉಡಿಗೆಯು–ಮಲಿನವಾದರೂ ಈಕೆ ಅದರ ವಿಷಯ್ಕು ಗಮನವನ್ನೇಕೆ ಕೊಡುವುದಿಲ್ಲವೆಂದು ಅವರಿಗೆ ಇನ್ನೊಂದು ಜಿಜ್ಞಾಸೆ ಇದ್ದಿತು. ಶಕುಂತಳೆಯ ಅವಸ್ಥೆಯು ಹೀಗಿರುತ್ತಿದ್ದಾಗ, ಕಣ್ವನಿನ್ನೂ ಆಶ್ರಮಕ್ಕೆ ಮರ ಳಿಲ್ಲವೇಕೆಂದು ಅವರು ಹಂಬಲಿಸುತ್ತಿದ್ದರು. ಶಕುಂತಳೆಯಾದರೊ, ಹಿಮ ದಿಂದ ಕೂಡಿದ ಕೌಮುದಿಯಂತೆ ಮ್ಲಾನಳಾಗಿದ್ದಳು.

ಸೋಮತೀರ್ಥಕ್ಕೆ ತೆರಳಿದ ಕಣ್ವ ಮಹರ್ಷಿಯು ಶಕುಂತಳೆಯ ಪ್ರತಿ ಕೂಲದೈವಕ್ಕೆ ಪರಿಹಾರವಮಾಡಿ ಹಿಂತೆರಳಿದನು. ಕಣ್ವ ಮಹರ್ಷಿಯೆಂದರೆ, ತ್ರಿಕಾಲಜ್ಞಾನಿಯು. ಆತನು ತನ್ನ ಆಶ್ರಮವನ್ನು ಪ್ರವೇಶಿಸುತ್ತಿದ್ದಾಗ ತಾನೆ ಅಶರೀರವಾಣಿಯೊಂದು ಆತನಿಗೆ ಕೇಳಿಸಿತು. "ಎಲೈ ಮಹರ್ಷಿಯೆ, ಯಾವಾಕೆ ಯನ್ನು ನೀನು ಮುದ್ದಾಡಿ ಸಲಹಿದೆಯೊ, ಆಕೆ ದುಷ್ಯಂತ ಮಹಾರಾಜನಿಂದ ಗರ್ಭ ತಳೆದು ಅಗ್ನಿಯೆ ಗರ್ಭದಲ್ಲಿದ್ದ ಶಮಿಾವೃಕ್ಷದಂತೆ ಪವಿತ್ರಳಾಗಿರುವಳು!"

ಈ ಮಾತನ್ನು ಕೇಳಿದೊಡನೆಯೆ ಕಣ್ವನಿಗೆ ಪರಮ ಸಂತೋಷವಾಯಿತು. ನಾನಿಷ್ಟು ದಿವಸಗಳೂ ಜಪತಪೋನುಷ್ಠಾನಗಳನ್ನು ಬಿಟ್ಟು, ಸುಡುವ ಭೂಮಿಯಲ್ಲಿ ನಡೆದು, ಸೋಮತೀರ್ಥವನ್ನು ಸೇರಿ ಮಾಡಿದ ಕಾರ್ಯವು ಇಂದು ಫಲಿಸಿತೆಂದು ಹಿಗ್ಗಿದನು. ಯಜ್ಞದಲ್ಲಿ ಆಹುತಿಯನ್ನು ಸುರಿಯುವಾಗ ಹೊಗೆಯೆದ್ದು ಕಣ್ಣು ಕಟ್ಟಿದರೂ, ಆ ಆಹುತಿಯು ಯಜ್ಞಕುಂಡದ ಮಧ್ಯದಲ್ಲಿಯೆ ಬಿದ್ದಿತೆಂದು ನಲಿದನು. ಲಜ್ಜೆಯಿಂದ ಮುಖತೋರಿಸದ ಮಗಳನ್ನು ಕಂಡು ಬಿಗಿದಪ್ಪಿ, ಕಣ್ಣೀರ ಧಾರೆಯಿಂದ ಕನ್ಯಾದಾನ ಮಾಡುವವನಂತೆ ಸಂತೋಷಾಶ್ರುಗಳನ್ನು ತಳೆದು, ಅವಳು ಮಾಡಿಕೊಂಡ ಗಾಂಧರ್ವವಿವಾಹಕ್ಕೆ ತನ್ನ ಸಮ್ಮತಿಯನ್ನು ಕೊಟ್ಟನು. ಶೀಘ್ರದಲ್ಲೆ ಪತಿಗೃಹಕ್ಕೆ ಕೊಟ್ಟು ಕಳುಹಿಸುವೆನೆಂದೂ ದುಃಖಿಸಬಾರದೆಂದೂ ಅವಳನ್ನು ಸಂತಯಿಸಿದನು. ಶಕುಂತಳೆಯಿನ್ನು ಆಶ್ರಮದ ಹುಡುಗಿಯಲ್ಲವೆಂದೂ ಭಾರತದ ಮಹಾರಾಜ್ಞಿಯೆಂದೂ ತಿಳಿದೊಡನೆಯೆ ಆಶ್ರಮವಾಸಿಗಳೆಲ್ಲರೂ ಬಂದು ಶಕುಂತಳೆಯನ್ನು ಕಂಡು ಮಾತನಾಡಿಸಿದರು; ಅವಳನ್ನು ಅಭಿನಂದಿಸಿದರು.

ಹಸ್ತಿನಾವತಿಗೆ ತೆರಳುತ್ತಿದ್ದ ಕೆಲವು ಋಷಿಗಳನ್ನು ನಿಲ್ಲಿಸಿ, ಅವರೊಡನೆ ಶಕುಂತಳೆಯನ್ನು ದುಷ್ಯಂತ ಮಹಾರಾಜನಲ್ಲಿಗೆ ಕೊಟ್ಟು ಕಳುಹಿಸುವುದೆಂದು ಕಣ್ವನು ನಿಶ್ಚಯಮಾಡಿದನು. ದಿನೇ ದಿನೇ ಅವಳು ವಿರಹವ್ಯಥೆಯಿಂದ ಬಡವಾಗುತ್ತ ಬರುತ್ತಿದ್ದಳು. ಆದುದರಿಂದ ಸಿಕ್ಕಿದ ಸಂದರ್ಭವನ್ನು ಬಿಡದೆ, ಶಕುಂತಳೆಯನ್ನು ಭಗಿನಿಯಾದ ಗೌತಮಿಯೊಡನೆಯೂ ತನ್ನ ಕೆಲವು ಶಿಷ್ಯರೊಂದಿಗೂ ಋಷಿಗಳ ಕೂಡೆ ಕಳುಹಿಸುವಂತೆ ಏರ್ಪಡಿಸಿದನು. ತಾನು ಸೋಮತೀರ್ಥದಿಂದ ಆಗತಾನೆ ಬಂದಿದ್ದುದರಿಂದ ಮತ್ತು ತಾನಿಲ್ಲದಿದ್ದರೆ ಆಶ್ರಮವು ಸುಸೂತ್ರವಾಗಿ ನಡೆಯಲಾರದುದರಿಂದ ಹಸ್ತಿನಾವತಿಗೆ ಹೋಗಲು ಆತನಿಗೆ ಮನಸ್ಸುಂಟಾಗಲಿಲ್ಲ. ಶಕುಂತಳೆಯು ಪತಿಗೃಹಕ್ಕೆ ಹೋಗುವಳೆಂದು, ಆಶ್ರಮದ ವಟುಗಳೆಲ್ಲ ಹೂದೋಟಕ್ಕೆ ಹೂದಳಿರನ್ನು ಕೊಯ್ಯಲು ನಡೆದರು. ಋಷಿಕನ್ಯೆಗಳಿಗೆ ಮೈತುಂಬ ಆಭರಣವೆಂದರೆ ನಿರ್ಗಂಧವಾದ ಲೋಹದ ವಿಕಾರಗಳಾಗಿದ್ದಿಲ್ಲ. ಕಣ್ಣಿಗೆ ಸುಂದರವಾಗಿಯೂ ಮೂಗಿಗೆ ಪರಿಮಳಯುಕ್ತವಾಗಿಯೂ ಮೈಗೆ ಮೆತ್ತಗಾಗಿಯೂ ಮನಸ್ಸಿಗೆ ಆಹ್ಲಾದಕರವಾಗಿಯೂ ಇರುವ ಹೂದಳಿರೇ ಅವರ ಆಭರಣಗಳಾಗಿದ್ದುವು. ವಟುಗಳು ಶಕುಂತಳೆಗೆಂದು ಹೂದಳಿರುಗಳನ್ನು ಸಂಗ್ರಹಿಸುತ್ತಿದ್ದಾಗ ವೃಕ್ಷವೊಂದು ಶುಭ್ರವಾದ ವಸ್ತ್ರ,

ವೊಂದನ್ನು ವಟುಗಳೆದುರು ಚೆಲ್ಲಿಬಿಟ್ಟಿತು; ವಿಸ್ಮಿತರಾದ ವಟುಗಳು ಅದನ್ನು ಹೆಕ್ಕುತ್ತಿದ್ದಾಗ ಮಗುದೊಂದು ವೃಕ್ಷವು ವಸ್ತ್ರವಿನ್ನೊಂದನ್ನು ದಾನಮಾಡಿತು. ಮತ್ತೊಂದು ವೃಕ್ಷವು ಶಕುಂತಳೆಯ ಕೋಮಲ ಚರಣಗಳಿಗೆಂದು ಲಾಕ್ಷಾರಸವನ್ನು ಸುರಿಸಿತು. ಇನ್ನೊಂದು ವೃಕ್ಷವು ತನ್ನ ತಳಿರಿಗೆ ಸಾಟಿಯಾದ ಮತ್ತು ತನ್ನ ಹೂವುಗಳಿಗೆ ಸಮಾನವಾದ ಆಭರಣಗಳನ್ನು ಕೊಟ್ಟುಬಿಟ್ಟಿತು. ಇವುಗಳೆಲ್ಲವನ್ನು ಸಂಗ್ರಹಿಸಿ ವಟುಗಳು ಕಣ್ವನ ತಾಪಸಶಕ್ತಿಯ ಸಿದ್ಧಿಗೆ ಬೆರಗಾಗಿ ಗೌತಮಿಗೆ ಅವುಗಳನ್ನು ತಂದು ಒಪ್ಪಿಸಿದರು. ಇದೆಲ್ಲವೂ ಶಕುಂತಳೆಗೆ ರಾಜ್ಯಲಕ್ಷ್ಮಿಯು ತೋರಿಸಿದ ಪ್ರಸಾದವೆಂದು ಸಖಿಯನ್ನು ಅನಸೂಯಾ ಪ್ರಿಯಂವದೆಯರು ಉತ್ಸಾಹಗೊಳಿಸಿದರು. ಮತ್ತು ಅವರು ಅವಳಿಗೆ ಹೂ ಮುಡಿಸಲು ಕೂತುಕೊಂಡರು. ಇನ್ನು ಮುಂದೆ ಸಖಿಗಳಿಂದಿಂತಹ ಪ್ರೇಮದ ಸೇವೆಯು ತನಗೆ ದುರ್ಲಭವೆಂದು ಶಕುಂತಳೆಯು ತಿಳಿದಿದ್ದಳು. ಸಖಿಗಳು ಆಕೆಗೆ ಆಭರಣಗಳನ್ನು ತೊಡುತ್ತಿದ್ದಾಗ ಆಶ್ರಮವಾಸಿ ಸ್ತ್ರೀಯರು ಒಬ್ಬೊಬ್ಬರಾಗಿಯೆ ಬಂದು, ಅವಳಿಗೆ ಕುಂಕುಮದ ಬೊಟ್ಟನ್ನಿಟ್ಟು, ಸಿಂಧೂರದ ಲೇಪವನ್ನು ಹಚ್ಚಿ, ಕಜ್ಜಲದ ರೇಖೆಯನ್ನೆಳೆದು, ಹೂವನ್ನು ಮುಡಿಸಿ ಹರಸಿದರು. ವೀರಪ್ರಸವಿನಿಯಾಗುವೆಯೆಂದು ಮುದಿ ತಾಪಸಿಯೊಬ್ಬಳು ಹರಸಿದಳು. ಗಂಡನಿಗೆ ಬಹುಮತಳಾಗುವೆಯೆಂದು ಇನ್ನೊಬ್ಬಳು ಆಶೀರ್ವದಿಸಿದಳು. ಅನಂತರ ಎಲ್ಲರೂ ಪ್ರಸ್ಥಾನ ಮಂಗಲವನ್ನು ಬಯಸಿ, ಶಕುಂತಳೆಯ ಗುಣಗಳನ್ನು ನೆನೆನೆನೆದು ತಂತಮ್ಮ ಕುಟೀರಗಳತ್ತ ನಡೆದರು.

ಶಕುಂತಳೆಗೆ ಪತಿಯನ್ನು ಸದ್ಯದಲ್ಲಿಯೇ ಕಾಣುವೆನೆಂಬ ಸಂತೋಷವು ಮನಸ್ಸನ್ನು ಹುರಿದುಂಬಿಸುತ್ತಿದ್ದರೂ ತಾನಿಷ್ಟು ಕಾಲವೂ ಬಳೆದು ಬಂದ ಆಶ್ರಮವನ್ನು ಬಿಡಬೇಕಾಯಿತೆಂದು ಅವಳು ಕೊರಗಿದಳು. ತನ್ನನ್ನು ಪ್ರೀತಿಯಿಂದ ಲಾಲಿಸಿ ಪಾಲಿಸಿ ಸಲಹಿದ ತಂದೆಯನ್ನು ಬಿಟ್ಟು ನಡೆಯಬೇಕು. ಆಶ್ರಮದ ಸುತ್ತಲೂ ನೀರೆರೆದು ಬೆಳೆಯಿಸಿ, ಗಂಡನೆಂದು ಹೆಂಡತಿಯೆಂದು, ಅಕ್ಕನೆಂದು ತಮ್ಮನೆಂದು, ಅಜ್ಜನೆಂದು, ಅಜ್ಜಿಯೆಂದು, ಸಂತಸಗೊಂಡು ಬೆಳೆಸಿದ ಹೂಬಳ್ಳಿಗಳನ್ನು ಹಿಂದಕ್ಕೆ ಬಿಟ್ಟು ನಡೆಯಬೇಕು. ವಿಸ್ತಾರವಾದ ತಮ್ಮ ನಯನಗಳಿಂದ ಮನಸ್ಸನ್ನು ಮೋಹಿಸಿ, ವಿಸ್ತಾರವಾದ ತಮ್ಮ ಹೃದಯದಲ್ಲಿ ನೆಲೆಗೊಟ್ಟು, ಎಂತಹವರನ್ನೂ ಮುಗ್ಧಗೊಳಿಸಿ, ಆಶ್ರಮಕ್ಕೆ ಅತಿಥಿಗಳು ಆವಾಗಲೂ ಬಂದು ನಿಲ್ಲುವಂತೆ ಮಾಡಿ ಆಶ್ರಮದ ಅಯಸ್ಕಾಂತಗಳಂತಿದ್ದ ಹುಲ್ಲೆ

ಗಳನ್ನು ಬಿಟ್ಟಗಲಬೇಕು. ಮಾತು ಕಲಿಸಿದ ಹಕ್ಕಿಗಳನ್ನು ಮಾತಾಡಿಸಿ ಅಂತಹ ಪುಣ್ಯವಿರದಿದ್ದರೂ, "ತಿರಿಗೊಮ್ಮೆ ಮಾತಾಡಲು ಬರುವೆನು," ಎಂದು ಉಪಚಾರಕ್ಕೆ ಹುಸಿಯಾಡಿ ಬಿಟ್ಟಗಲಬೇಕು. ಆಶ್ರಮದ ಸಮಸ್ತ ತರುಲತೆಗಳ, ಮೃಗಪಕ್ಷಿಕೀಟಗಳ ನರನಾಡಿಗಳಲ್ಲಿ ಹರಿಯುತ್ತಿದ್ದ ತನ್ನ ಸ್ನೇಹಮಯವಾದ ಹೃದಯವನ್ನು ಆಶ್ರಮದಲ್ಲಿ ಬಿಟ್ಟು ಹಸ್ತಿನಾವತಿಯ ರಾಜನ ಮನೆಗೆ ತಾನು ಮಾರಿದ ಪ್ರೇಮವನ್ನು ಒದಗಿಸುವುದಕ್ಕೆ ಹೊರಟಾಗ ಅವಳ ಕಣ್ಣಲ್ಲಿ ನೀರು ತುಂಬಿತು. ಕಾಲು ಮುನ್ನಡೆಯಲಿಲ್ಲ.

ಕಣ್ವನೇನೋ ವಿರಕ್ತನು; ಮಹಾತ್ಯಾಗಶಾಲಿಯು. ಆದರೆ ತಂದೆ ತಾಯಿಗಳು ತಮಗೆ ಬೇಡವೆಂದು ತೊರೆಯ ದಡದಲ್ಲಿ ತೊರೆದ ಮಗುವನ್ನು ಹಕ್ಕಿಗಳಿಂದ ಬಿಡಿಸಿತಂದು ಇಷ್ಟು ವರ್ಷವೂ ಲಾಲಿಸಿ ಪಾಲಿಸಿ ಈಗ ಬೀಳ್ಕೊಡುವಾಗ ಆತನ ಕೊರಳು ಬಿಗಿಯಿತು, ಕಣ್ಣಲ್ಲಿ ನೀರು ತುಂಬಿತು. ಹಾಗೆಂದು ಮಂಗಲಕಾಲದಲ್ಲಿ ಕಣ್ಣೀರಿಡುವುದು ಅಶುಭವೆಂದು ಕಣ್ಣೀರನ್ನು ತಡೆದುದರಿಂದ ಆತನ ಕಂಠವು ಉಮ್ಮಳಿಸಿತು. ಮಾತು ಗದ್ಗದವಾಯಿತು. ಇಂದ್ರಿಯಗಳೆಲ್ಲ ಹೃದಯದ ಅನಿರ್ವಚನೀಯವಾದ ಕಳವಳದಿಂದ ಜಡವಾಗಿ ವಿಷಯಗ್ರಹಣದಲ್ಲಿ ಮೂಕವಾಗಿ ಬಿಟ್ಟುವು. ಕಾಡಿನಲ್ಲಿ ವಾಸಮಾಡುವ ಯತಿಯೊಬ್ಬನಿಗೆ ಇಂತು ದುಃಖವಾಗುವುದಾದರೆ ಮನೆಮಾರು ಕಟ್ಟಿ, ಸಂಸಾರಬಂಧದಲ್ಲಿ ಬಿದ್ದ ಗೃಹಸ್ಥರು ತಮ್ಮ ಮಕ್ಕಳಗಲುವಾಗ ಹೇಗೆ ದುಃಖಿಸುವರೋ ಹೇಳಬರುವುದಿಲ್ಲ.

ತಂದೆಯು ಬಂದನೆಂದು ಶಕುಂತಳೆಯೆದ್ದು ಆತನನ್ನು ನಮಸ್ಕರಿಸಿದಳು. "ವತ್ಸೆ, ಶರ್ಮಿಷ್ಠೆಯಂತೆ ಗಂಡನ ಪ್ರೀತಿಗೆ ಪಾತ್ರಳಾಗಿ ಚಕ್ರವರ್ತಿಯಾಗಲುಳ್ಳ ಮಗನನ್ನು ಪಡೆಯು," ಎಂದು ಮಗಳನ್ನು ಕಣ್ವನು ಹರಸಿದನು. ಸಮೀಪದಲ್ಲಿಯೆ ನಿಂತ ಗೌತಮಿಯು ಇದು ಕೇವಲ ಆಶೀರ್ವಾದವಲ್ಲವೆಂದೂ ಮಹಾವರಪ್ರಸಾದವೆಂದೂ ಶಕುಂತಳೆಗೆ ಸೂಚಿಸಿದಳು. ಏಕೆಂದರೆ, ಮಹಾತ್ಮರಾದವರು ಆಡಿದ ಮಾತುಗಳ ಹಿಂದೆಯೆ ಅರ್ಥವು ಅನುಸರಿಸುವುದು. ಆದರೆ ಉಳಿದವರು ಅರ್ಥಕ್ಕನುಸಾರವಾಗಿ ಹರಸುವರು.

ಹೋಮಾಗ್ನಿಯು ಸದ್ಯೋಹುತವಾದುದರಿಂದ ದಳ್ಳುರಿಯುತ್ತಿತ್ತು. ಶಕುಂತಳೆಯು ಹೋಮಾಗ್ನಿಗೆ ಪ್ರದಕ್ಷಿಣೆ ಬಂದಳು. ಕಣ್ವನು ಅವಳ ಹಿಂದಕ್ಕೆಯೆ ನಡೆದು, ಋಗ್ವೇದದ ಪವಿತ್ರವಾದ ಮಂತ್ರಗಳನ್ನುಚ್ಚರಿಸಿ, ವಧುವಿನ ಸಮಸ್ತ ದುರಿತವು ಶಾಂತವಾಗಿ ವೈತಾನಾಗ್ನಿಯು ಅವಳನ್ನು ಪಾವನ

ಗೊಳಿಸಲೆಂದು ಪ್ರಾರ್ಥಿಸಿದನು. ಅನಂತರ, ಶಾರ್ಙ್ಗರವನನ್ನು ಕರೆದು ಋಷಿಗಳೊಡನೆ ಹಸ್ತಿನಾವತಿಗೆ ತೆರಳೆಂದು ಆಜ್ಞಾಪಿಸಿದನು. ಶಾರ್ಙ್ಗರವನು ಕಣ್ವನ ಶಿಷ್ಯರಿಗೆ ಹಿರಿಯನಾಗಿದ್ದು, ವಿಶ್ವಾಸಪಾತ್ರನಾಗಿದ್ದನು. ಆತನು ಗುರುವಿನಾಜ್ಞೆಯನ್ನು ಶಿರಸಾವಹಿಸಿ, ತಂಗಿಗೆ ಮಾರ್ಗದರ್ಶಕನಾಗಿ ನಡೆದನು. ಎಲ್ಲರೂ ಶಕುಂತಳೆಯನ್ನು ಬಿಟ್ಟುಬರಲು ಹೊರಟರು.

"ಅಪ್ಪಾ, ನೀರೆರೆದು ಬೆಳೆಸಿದ ಹೂಗಿಡಗಳನ್ನು ಬಿಡಬೇಕಾಯಿತಲ್ಲ?" ಎಂದು ಶಕುಂತಳೆಯು ತಂದೆಯೊಡನೆ ಬಿಕ್ಕಿಬಿಕ್ಕಿ ಅತ್ತಳು. "ಮಗೂ, ಗಂಡನ ಮನೆಗೆ ಹೋಗುತ್ತಿರುವಿಯೆಂದು ವನದೇವತೆಗಳು ಕೋಪಿಸುವುದಿಲ್ಲ," ಎಂದು ಮಗಳನ್ನು ಕಣ್ವನು ಸಂತಯಿಸಿದನು. ಆತನು ಮತ್ತೆ ಒಂದು ಹಜ್ಜೆ ಮುಂದಕ್ಕಿಟ್ಟು, ದಿಗಂತದ ವರೆಗೂ ವಿಸ್ತರಿಸಿದ ಆಶ್ರಮದ ವೃಕ್ಷಗಳನ್ನು ಕಂಡು, ಶಕುಂತಳೆಯ ಬೆನ್ನಿನ ಮೇಲೆ ಕೈಯಿಟ್ಟು, "ಎಲೈ ಆಶ್ರಮದ ತರುಲತೆಗಳಿರ! ಯಾವಾಕೆ ನಿಮಗೆ ನೀರೆರೆಯದೆ ತಾನು ನೀರ್ಕುಡಿಯುತ್ತಿದ್ದಿಲ್ಲವೊ, ಯಾವಾಕೆ ಸಿಂಗರದಲ್ಲಿ ಆಶೆಯುಳ್ಳವಳಾದರೂ ಸ್ನೇಹವಶಳಾಗಿ ನಿಮ್ಮ ಚಿಗುರೆಲೆಗಳನ್ನು ಕೊಯ್ಯುತ್ತಿದ್ದಿಲ್ಲವೊ, ಯಾವಾಕೆ ನಿಮ್ಮಲ್ಲಿ ಹೂ ಕಂಡೊಡನೆ ನರ್ತಿಸುತ್ತಿದ್ದಳೊ, ಆ ಶಕುಂತಳೆಯಿಂದು ಪತಿಗೃಹಕ್ಕೆ ಹೊರಟಿರುವಳು. ನೀವೆಲ್ಲರೂ ಅನುಜ್ಞೆಯನ್ನು ದಯಪಾಲಿಸುವಿರಲ್ಲವೆ?" ಎಂದು ಗಂಭೀರವಾಗಿ ನಿವೇದಿಸಿದನು. ಅವನ ಮಾತು ವನಗುಹೆಗಳಲ್ಲಿ ಪ್ರತಿಧ್ವನಿಯನ್ನಿತ್ತು, ವನದೇವತೆಗಳಿಗುಂಟಾದ ಮರುಕದೊಡನೆ ಸೇರಿ ದೀರ್ಘವಾಗಿ, ಬೆಟ್ಟದಿಂದ ಬೆಟ್ಟಕ್ಕೆ ಹರಿದೋಡಿತು. ಮರಗಿಡಗಳು ಕಂಬನಿಯಿಡುವಂತೆ ತಮ್ಮ ಮುದಿಯೆಲೆಗಳನ್ನು ದುರಿಸಿ ಗೋಳಿಟ್ಟುವು. ಬಳ್ಳಿಗಳು ಶಕುಂತಳೆಯನ್ನು ಅಪ್ಪಿಕೊಳ್ಳುವಂತೆ ಕುಡಿಗೈಗಳನ್ನು ಚಾಚಿದುವು. ಹೂಗಳನ್ನರಳಿಸಿ, ಶಕುಂತಳೆಯ ಮಸ್ತಕದ ಮೇಲೆ ಅಲರ ಮಳೆಯನ್ನು ಸುರಿದುವು. ಹಣ್ಣುಗಳನ್ನು ಬೀಳಿಸಿ, ಶಕುಂತಳೆಗೆ ಅರ್ಘ್ಯವನ್ನಿತ್ತುವು. ಮರದ ತಳಿರೆಡೆಯಲ್ಲಿ ಅವಿತು, ಶಕುಂತಳೆಯನ್ನು ನೂರಾರು ಬಾರಿ ಮರದಿಂದ ಮರಕ್ಕೆ ತನ್ನನ್ನು ಹುಡುಕಾಡಿಸಿದ ಕಿನ್ನರಕಂಠದ ಕೋಗಿಲೆಯು ಸಮಸ್ತ ಬಂಧುವೃಕ್ಷಗಳ ಪರವಾಗಿ, ಅಖಿಲಪಕ್ಷಿಬಂಧುಗಳ ಕಡೆಯಾಗಿ, ಶಕುಂತಳೆಗೆ ಗಂಡನ ಮನೆಗೆ ತೆರಳಲು ಅನುಜ್ಞೆಯನ್ನೀಯುತ್ತ ಪ್ರಸ್ಥಾನಕಾಲದಲ್ಲಿ ಹಾಡಿ ಮುದಗೊಳಿಸಿತು. "ಶಕುಂತಳೆ! ತಾವರೆಯ ಕೊಳಗಳಿಂದ ರಮ್ಯವಾಗಿ, ಛಾಯಾದ್ರುಮಗಳಿಂದ ತಂಪಾಗಿ, ನೀನು ನಡೆ

ಯುವ ಮಾರ್ಗವು ಕ್ಷೇಮಕರವಿರಲಿ! ಕಮಲಪರಾಗಯುಕ್ತನಾದ ಮಂ ಮಾರುತನು ನಿನಗನುಕೂಲನಾಗಿ ಬೀಸುತ್ತಿರಲಿ." ಕೋಗಿಲೆಯು ಹಾಡಿ ಈ ಹಾಡನ್ನು ಕೇಳಿ, ಸರ್ವರೂ ವಿಸ್ಮಿತರಾದರು. ಶಕುಂತಳೆಯು ತಲೆಬಾಗಿ ತನಗೆ ಅನುಮತಿಯನ್ನಿತ್ತ ವನದೇವತೆಗಳನ್ನು ವಂದಿಸಿದಳು. ಸಮೀಪದಲ್ಲಿಯೆ ತಾನು ಬೆಳೆಸಿ ಮಾವಿನಮರಕ್ಕೆ ಮದುವೆ ಮಾಡಿಕೊಟ್ಟ ವನಜ್ಯೋತ್ಸ್ನೆಯನ್ನು ಕಂಡು, "ಮಗಳೆ, ಹೋಗಿ ಬರುವೆನು. ಗಂಡನೊಡನೆ ಕೂಡಿದ್ದರೂ ನನ್ನನ್ನು ಆಲಿಂಗಿಸು," ಎಂದು ವನಜ್ಯೋತ್ಸ್ನೆಯೆಡೆಗೆ ನಡೆದು ಅಲ್ಲೆ ನಿಂತುಬಿಟ್ಟಳು. ಚೂತನೊಡನೆ ಸೇರಿದ ಲತೆಯನ್ನು ಕಂಡು, ದುಷ್ಯಂತನೊಡನೆ ವಿವಾಹವಾದ ತನ್ನ ಮಗಳನ್ನು ಕುರಿತು ಕಣ್ವನು, "ವತ್ಸೆ, ನನ್ನೆಣಿಕೆಯಂತೆ, ನೀನು ಆತ್ಮ ಸದೃಶನಾದ ಗಂಡನನ್ನು ಹೊಂದಿದೆ. ಈ ವನಜ್ಯೋತ್ಸ್ನೆಯೂ ನಿನ್ನಂತೆಯೆ ಅನುರೂಪನಾದ ವರನನ್ನು ಪಡೆದಿರುವಳು. ನಿಮ್ಮಿಬ್ಬರ ವಿಷಯದಲ್ಲಿ ನಾನು ನಿಶ್ಚಿಂತನು," ಎಂದು ಹೊಗಳಿದನು. ಕಣ್ವನು ಸೋಮತೀರ್ಥಕ್ಕೆ ಹೋಗಿದ್ದಾಗಲಷ್ಟೆ ಶಕುಂತಳೆಯು ದುಷ್ಯಂತನೊಡನೆ ಗಾಂಧರ್ವ ವಿವಾಹವಾದಳು; ವನಜ್ಯೋತ್ಸ್ನೆಯೂ ಚೂತನೊಡನೆ ಸ್ವಯಂವರ ಮಾಡಿಕೊಂಡಳು. ಕಣ್ವನು ಹೆಗ್ಗಳಿಕೆಯಿಂದ ತಮ್ಮಿಬ್ಬರನ್ನು ಪ್ರಶಂಸಿಸುವಾಗ ಶಕುಂತಳೆಯು ತನ್ನ ಲತಾಭಗಿನಿಯ ಶಾಖೆಗಳನ್ನು ಮುಟ್ಟಿ, ತಳಿರಿಗೆ ಮುದ್ದಿಟ್ಟು, ಅವಳಾರೈಕೆಯನ್ನು ಮಾಡಬೇಕೆಂದು ತನ್ನ ಸಖಿಯರಾದ ಅನಸೂಯಾಪ್ರಿಯಂವದೆಯರನ್ನು ಪ್ರಾರ್ಥಿಸಿದಳು. ಆಗ ಸಖಿಯರು ಕಣ್ಣಲ್ಲಿ ನೀರು ತಂದು, "ನಮ್ಮ ಆರೈಕೆಯನ್ನು ಯಾರು ನೋಡುವರು?" ಎಂದು ಅತ್ತುಬಿಟ್ಟರು. ಶಕುಂತಳೆಯನ್ನು ಸಂತಯಿಸಬೇಕಾದವರೀ ಸಖಿಯರೇ ಹೀಗೆ ಅಳುವುದೇ ಎಂದು ಕಣ್ವನು ಸೂಚನೆಯನ್ನು ಕೊಟ್ಟನು.

ತಡವಾಗುತ್ತಿದ್ದುದರಿಂದ ಶಕುಂತಳೆಯು ಮುನ್ನಡೆದಳು. ತಾನು ಮೈಮುಟ್ಟಿ ಬೆಳೆಸಿ ರಕ್ಷಿಸಿದ ಹೆಣ್ಣು ಜಿಂಕೆಯು ಮೆಲ್ಲನೆ ಸಂಚರಿಸುವುದು ಆಕೆಗೆ ಗೋಚರವಾಯಿತು. ಆ ಜಿಂಕೆಯು ಕಣ್ವಾಶ್ರಮದ ಪರ್ಯಂತವನ್ನು ಬಿಟ್ಟು ಹೊರಗೆ ನಡೆದುದಲ್ಲ. ಅದು ಗರ್ಭಿಣಿಯಾದುದರಿಂದ ಮೆಲ್ಲಮೆಲ್ಲನೆ ಅಲ್ಲಿಯೆ ಸುಳಿಯುತ್ತಿದ್ದಿತು. ಅದು ಸುಖದಿಂದ ಹೆತ್ತೊಡನೆ ತನಗೊಬ್ಬ ದೂತನನ್ನು ಅವಶ್ಯವಾಗಿ ಕೊಟ್ಟು ಕಳುಹಿಸಬೇಕೆಂದು ಶಕುಂತಳೆಯು ತನ್ನ ತಂದೆಯೊಡನೆ ವಿಜ್ಞಾಪಿಸಿದಳು. ಕಣ್ವನು ಮರೆಯುವುದಿಲ್ಲವೆಂದು ಸಂತ

ಯಿಸಿದನು. ಆಶ್ರಮದ ಜಿಂಕೆಗಳೆಲ್ಲ ತಾನು ಹೋಗುವುದನ್ನು ತಿಳಿದು, ಆಹಾರವನ್ನು ಜಗಿಯುವುದನ್ನು ಮರೆತು, ಕಣ್ಣುಗಳನ್ನರಳಿಸಿ ತನ್ನನ್ನೇ ಸ್ನೇಹದಿಂದ ನೋಡುವಾಗ ಶಕುಂತಳೆಯ ಕೋಮಲವಾದ ಕಣ್ಣುಗಳಲ್ಲಿ ನೀರು ತುಂಬಿ ಆಕೆಗೆ ಕಣ್ಣು ಕಾಣದಂತಾಗಿ ಕವಿತಾಮಯವಾದ ತನ್ನ ಬಳಗದ ದರ್ಶನವನ್ನು ಪಡೆಯದಂತಾಯಿತು. "ಶಕುಂತಳೆಯೆ, ಅಳಬೇಡ. ಮಾರ್ಗವಿಲ್ಲಿ ವಿಷಮವಾಗಿದೆ. ಕಾಲು ಜಾರೀತು! ಕಣ್ಣೀರನ್ನು ತಡೆದಿಡು," ಎಂದು ಕಣ್ವನು ಸಂತಯಿಸುವಾಗ ಶಕುಂತಳೆಯ ಸೆರಗನ್ನು ಹಿಂದಿನಿಂದ ಎಳೆದಂತಾಯಿತು. "ಯಾರಿದು ನನ್ನ ಗಮನವನ್ನು ತಡೆಯುವುದು?" ಎಂದವಳು ಹಿಂದಕ್ಕೆ ತಿರುಗಿದಾಗ, "ನಿನ್ನ ಸಾಕು ಮಗುವು" ಎಂದು ಕಣ್ವನು ಎಂದೊಡನೆಯೆ, ಶಕುಂತಳೆ ತಟ್ಟನೆ ನಿಂತುಬಿಟ್ಟಳು. ಯಾವ ಜಿಂಕೆಮರಿಯನ್ನು ಅದರ ತಾಯಿ ಸತ್ತಂದಿನಿಂದ ಸಾಕಿದ್ದಳೋ ಆ ಕೂಸು ಇಂದು ತನ್ನ ತಾಯಿಗೆ ಸರಿಯಾದ ಶಕುಂತಳೆಯನ್ನು ಅವಳು ಆಶ್ರಮವನ್ನು ಬಿಟ್ಟು ತೆರಳುವಾಗ ಸೆರಗನ್ನು ಹಿಡಿದೆಳೆದು ನಿಲ್ಲಿಸಿಬಿಟ್ಟಿತು. ವನಾಂತರಕ್ಕೆ ತೆರಳಿ, ದುಷ್ಷಂತ ಮಹಾರಾಜನನ್ನು ಸೆಳೆದು ತಂದು ಶಕುಂತಳೆಯೊಡನೆ ಕೂಡಿಸಿತ್ತು. ಶಕುಂತಳೆಯ ಕೈಯಿಂದಲ್ಲದೆ ಮತ್ತಾರ ಕೈಯಿಂದಲೂ ನೀರನ್ನು ಕುಡಿದುದಲ್ಲ. ಬಾಲ್ಯದಲ್ಲಿ ಹುಲ್ಲು ತಿನ್ನಲು ಕಲಿಯುತ್ತಿರಲು ದರ್ಭೆಯ ಹರಿತವಾದ ತುದಿಯಿಂದ ಗಾಯವಾಗಿ ಮುಖಕ್ಕೆ ವ್ರಣಗಳೆದ್ದಾಗ ಇಂಗುದೀ ತೈಲವನ್ನು ಬಿಟ್ಟು ವಾಸಿಮಾಡಿದ ಮರಿಯನ್ನು, ತನ್ನ ಕೈಯ ಮುಷ್ಟಿಯಲ್ಲಿ ನೀವಾರಗಳನ್ನು ಹಿಡಿದು ತಿನ್ನಿಸಿ ಸಲಹಿದ ಮರಿಯನ್ನು ಕಂಡು, ಶಕುಂತಳೆಗೆ ಬಾಯ್ಬಾರದಂತಾಯಿತು. ಹುಲ್ಲೆಮರಿಗೆ ಮುದ್ದಿಟ್ಟು, ಬೆನ್ನ ಮೇಲೆ ಕೈಯಾಡಿಸಿ, "ವತ್ಸ, ಸಹವಾಸ ಬಿಟ್ಟು ತೆರಳುವ ನನ್ನನ್ನೇಕೆ ಅನುಸರಿಸುವಿ? ಹುಟ್ಟಿದೊಡನೆ ತಾಯಿಂದ ಅಗಲಿದೆ; ಬೇರೆಯವರಿಂದ ಸಾಕಲ್ಪಟ್ಟೆ. ಈಗಲೂ ನನ್ನಿಂದ ಅಗಲಿದ ನಿನ್ನನ್ನು ತಂದೆಯು ಸಲಹುವನು. ಹಿಂದಕ್ಕೆ ಹೋಗಪ್ಪ," ಎಂದು ಅಳುತ್ತಳುತ್ತ ಮುನ್ನಡೆದಳು.

ಸ್ನೇಹಿತರೂ ಬಂಧುಗಳೂ ಪರಸ್ಥಳಕ್ಕೆ ಹೋಗುವರೊಡನೆ ನಡೆದು, ನೀರಿನ ಬಳಿ ನಿಲ್ಲುವುದು ವಾಡಿಕೆಯಿದೆ. ಅಲ್ಲೊಂದು ಕೊಳವು ಅವರಿಗೆ ಸಮೀಪವಾಯಿತು. ಆದುದರಿಂದ ಅಲ್ಲಿಯೇ ಬೆಳೆದಿದ್ದ ಸಪ್ತಪರ್ಣಿಯ ಬುಡದಲ್ಲಿ ಅವರು ನಿಂತುಕೊಂಡರು. ಕಣ್ವನು ದುಷ್ಷಂತನಂತಹ ಮಹಾರಾಜನಿಗೆ ತಾನಾವ ಸಂದೇಶವನ್ನು ಕಳುಹಿಸುವುದೆಂದು ಆಲೋಚಿಸುತ್ತ ನಿಂತನು.

ಎಲ್ಲವೂ ನಿಶ್ಯಬ್ದವಾಗಿತ್ತು. ಎದುರಿದ್ದ ಕೊಳದಲ್ಲಿ ಹೆಣ್ಣು ಚಕ್ರವಾಕವೊಂದು ಕಮಲಪತ್ರದಲ್ಲಿ ಅಡಗಿಬಿಟ್ಟ ತನ್ನ ಸಹಚರನನ್ನು ಕಾಣದೆ ಬಳಲುತ್ತಿದ್ದುದನ್ನು ಶಕುಂತಳೆಯು ಕಂಡು, ಆ ಹೆಣ್ಣುಚಕ್ರವಾಕಕ್ಕಾಗಿ ಬಹಳವಾಗಿ ನೊಂದಳು. ಅನಸೂಯೆಯಾಗ ಮುಂದೆ ಬಂದು, ನೊಂದ ಸಖಿಯನ್ನು ಕುರಿತು, "ಸಖಿ, ಹಾಗೆನ್ನಬೇಡ. ಈ ಚಕ್ರವಾಕ ವಧು ವಿರಹವ್ಯಥೆಯಿಂದ ದೀರ್ಘವಾದ ರಜನಿಯನ್ನು ಕಳೆಯುವಳು; ಏಕೆಂದರೆ, ಆ ದುಃಖವು ಬಹಳ ಕಠಿನವಾದರೂ, ಆಶೆಯೆಂಬುದು ದುಃಖವನ್ನು ಮರೆಯಿಸುವುದು," ಎಂದು ಸಮಾಧಾನ ಪಡಿಸಿದಳು.

ಮರದಡಿಯಲ್ಲಿ ನಿಂತು, ಅರಸನಿಗೆ ತಾನಾವ ಸಂದೇಶವನ್ನು ಕೊಟ್ಟು ಕಳುಹಿಸುವುದೆಂದು ಆಲೋಚಿಸಿ ನಿಂತ ಕಣ್ವನಿಗೆ ಅಪಶಕುನದ ಸೂಚನೆಯಾಯಿತು. ಆದುದರಿಂದ ಆತನು ತನ್ನ ಸಂದೇಶವು ದ್ವಯಾರ್ಥವುಳ್ಳುದನ್ನಾಗಿ ಮಾಡಿ ರಚಿಸಿದನು. ದುಷ್ಯಂತನೇನೋ ಭಾರತದ ಮಹಾರಾಜನು, ಆದರೆ ಶಕುಂತಳೆ ಕಾಡಿನ ಹುಡುಗಿ. ತಾನೇನೊ ದುಷ್ಯಂತನನ್ನು ಚೆನ್ನಾಗಿ ಬಲ್ಲವನಲ್ಲ. ವಿಷಯಾಸಕ್ತನಾಗಿ, ಧರ್ಮಪರಾಙ್ಮುಖನಾಗಿ ಅವನೇಕೆ ಕಾಡಿನ ಹುಡುಗಿಯಲ್ಲಿ ತಾತ್ಸಾರವನ್ನು ತೋರಿಸಬಾರದು? ಆದರೆ, ಹೀಗಾಗಲಿಕ್ಕಿಲ್ಲ. ದುಷ್ಯಂತನ ವಂಶವು ಲೋಕೋತ್ತರವಾದುದು; ಶಕುಂತಳಾ ದುಷ್ಯಂತರ ಪ್ರೇಮವು ಅನ್ಯೋನ್ಯವಾಗಿತ್ತು; ಅಲ್ಲದೆ ಶಕುಂತಳೆಯು ಮಹಾತಪಸ್ವಿಯ ಪ್ರೀತಿಯ ಮಗಳು. ಇದೆಲ್ಲವನ್ನು ಅಲ್ಲಗಳೆದರೆ, ಹಿರಿಯರ ಕೋಪವೂ ಮುನಿಯ ಮುನಿಸೂ ಒಂದಾಗಿ ಅನಿಷ್ಟವಾಗಬಹುದು.

ಕಣ್ವನೆಂದನು—"ಎಲೆ ಶಾರ್ಙ್ಗರವ! ಶಕುಂತಳೆಯನ್ನು ಮುಂದಿಟ್ಟು, ರಾಜನಿಗೆ ಹೀಗೆಂದು ತಿಳಿಸು: ಸಂಯಮವೆ ಧನವಾಗಿದ್ದ ಮುನಿಯ ಪುತ್ರಿಯನ್ನು ನೀನು ಮದುವೆಯಾದೆ; ಗೌರವನೆ ಧನವಾಗುಳ್ಳ ನಿನ್ನಲ್ಲಿ ಈಕೆ ಪ್ರೇಮವನ್ನಿಟ್ಟಳು. ನನ್ನೀ ಪ್ರಿಯಪುತ್ರಿಯನ್ನು, ಆದುದರಿಂದ, ಇತರ ಹೆಂಡಂದಿರಂತೆ ಸರಿಗಂಡು ಬಾಳು. ವಧುವಿನ ಬಂಧುವಾದುದರಿಂದ ಇನ್ನು ಹೆಚ್ಚು ಹೇಳಲಾರೆನು. ಏಕೆಂದರೆ, ಉಳಿದುದೆಲ್ಲ ವಿಧಿವಶವಾಗಿದೆ."

ಕಣ್ವನು ತದನಂತರ ತನ್ನ ಮಗಳಿಗೆ ಬುದ್ಧಿವಾದವನ್ನು ಹೇಳಿದನು; ವನವಾಸಿಯಾದರೂ ಆತನಿಗೆ ಲೌಕಿಕಜ್ಞಾನವು ಬಹಳವಿದ್ದಿತು. "ಮಗಳೆ, ಅರಸನ ಮನೆಯನ್ನು ತುಂಬುವವಳೆ, ಹಿರಿಯರ ಸೇವೆಮಾಡು. ಭಾಗ್ಯ ಬಂತೆಂದು ಹಿಗ್ಗಬೇಡ. ಶಕುಂತಳೆ, ಸೇವಕರಲ್ಲಿ ದಾಕ್ಷಿಣ್ಯದಿಂದ ವರ್ತಿಸಿ, ಸವತಿಯರಲ್ಲಿ

ಗೆಳೆತನದಿಂದಿದ್ದು, ಗಂಡನಿಗೆ ಅನುಕೂಲೆಯಾಗು. ಹೀಗಿದ್ದರೆ ಗರ್ತಿಯಾಗುವೆ; ಇಲ್ಲದಿದ್ದರೆ ಕುಲಕ್ಕೆ ಕಳಂಕವನ್ನು ತಂದೊಡ್ಡುವೆ."

ಗೌತಮಿಯಾಗ, "ಅಮ್ಮ, ಶಕುಂತಳೆ, ಇಂತಿಷ್ಟು ಉಪದೇಶವನ್ನು ಚೆನ್ನಾಗಿ ಅವಧರಿಸು," ಎಂದು ಮಗಳಿಗೆ ಹೇಳಿದಳು. ಶಕುಂತಳೆಯು ಬಾಗಿ, ತಂದೆಯ ಕಾಲ್ಗೆರಗಿದಳು.

"ತಂದೆಯೆ, ಮಲಯಪರ್ವತದ ತಟದಿಂದ ಪರಿಭ್ರಷ್ಟವಾದ ಚಂದನ ಲತೆಯಂತೆ ಇನ್ನು ಮುಂದೆ ನಿಮ್ಮನ್ನು ನೋಡದೆ ಪಟ್ಟಣದಲ್ಲಿ ಹೇಗೆ ಜೀವಿತವನ್ನು ಹಿಡಿದುಕೊಳ್ಳಲಿ? ಈ ಪ್ರಿಯ ಸಖಿಯರನ್ನು ನನ್ನೊಡನೆ ಕಳುಹಿಸಿಕೊಡು," ಎಂದು ಶಕುಂತಳೆಯು ತಂದೆಯೊಡನೆ ಕೇಳಿಕೊಂಡಳು. ಆದರೆ, "ಮಗೂ, ಅಲ್ಲಿಗೆ ಇವರು ತೆರಳುವುದು ಉಚಿತವಲ್ಲ; ಇವರಿಗೂ ಮದುವೆಯಾಗಬೇಕಲ್ಲವೆ?" ಎಂದು, ಕಣ್ವನು ಮಗಳ ಮಾತಿಗೆ ಒಪ್ಪಲಿಲ್ಲ. ಶಕುಂತಳೆಯು ದುಃಖದಿಂದ ಬಿಕ್ಕಿ ಅಳುತ್ತ ತನ್ನ ಜೀವದ ಗೆಳತಿಯರತ್ತ ನಡೆದು, ಅವರಿಬ್ಬರನ್ನೂ ಏಕಕಾಲಕ್ಕೆ ಆಲಿಂಗಿಸಿದಳು. ಅನಸೂಯೆಯು ತನ್ನ ಪ್ರಿಯ ಸಖಿಗೆ, "ಸಖಿ, ಅರಸನು ನಿನ್ನನ್ನು ಗುರುತಿಸುವುದಿಲ್ಲವಾದರೆ, ನಿನ್ನ ಈ ಉಂಗುರವನ್ನು ಆತನಿಗೆ ತೋರಿಸು," ಎಂದು ಸೂಚಿಸಿದಳು. ಈ ಮಾತನ್ನು ಕೇಳಿದೊಡನೆಯೆ ಶಕುಂತಳೆಯ ಹೃದಯವು ಕಂಪಿಸಿತು. ಮೈಯೆಲ್ಲ ರೋಮಾಂಚವಾಯಿತು. "ಹಾಗೇನೂ ಇಲ್ಲ. ಸ್ನೇಹವು ಯಾವಾಗಲೂ ಪಾಪಶಂಕಿಯು," ಎಂದು ಪ್ರಿಯಂವದೆಯು ಶಕುಂತಳೆಯನ್ನು ಸಮಾಧಾನಪಡಿಸಿದಳು.

ಸವಿತೃದೇವನು ನಡುನೆತ್ತಿಗೆ ಬಂದಿದ್ದನು. ಶಾರ್ಙ್ಗರವನಿನ್ನು ಹೊತ್ತಾಗುವುದೆಂದನು. ಶಕುಂತಳೆಯು ತಪೋವನಕ್ಕೆ ಇದಿರಾಗಿ ನಿಂತಳು. ಕಣ್ವನಾಗ, "ಮಗಳೆ, ಕಳವಳ ಪಡಬೇಡ. ಕುಲೀನನಾದ ಪತಿಗೊಪ್ಪುವ ಪಟ್ಟದ ರಾಣಿಯಾಗಿ, ವೈಭವದಿಂದ ಮೆರೆಯುವಳಾಗಿ, ಪತಿಸೇವಾಸಕ್ತೆಯಾಗಿ, ಸುಗಾತ್ರ ಪುತ್ರನ ಜನನಿಯಾಗಿ, ವಿಯೋಗದುಃಖವೆಲ್ಲವನ್ನು ಮರೆತು ಬಿಡುವಿ, ಚಿಂತಿಸದಿರು," ಎಂದು ಮಗಳನ್ನು ತಬ್ಬಿದನು. "ಅಪ್ಪಾ, ಈ ತಪೋವನಕ್ಕೆ ಇನ್ನೆಷ್ಟು ದಿವಸಕ್ಕೆ ಬರುವೆನು?" ಎಂದು ಶಕುಂತಳೆಯು ದುಃಖಿಸಿದಳು. "ಮಗಳೆ, ಕ್ಷಿತಿಸತಿಗೆ ಸವತಿಯಾಗಿ, ಅಪ್ರತಿರಥನಾದ ಪುತ್ರನನ್ನು ಹೆತ್ತು ಆತನನ್ನು ರಾಜ್ಯಭಾರದಲ್ಲಿ ನಿಯೋಜಿಸಿ, ಇದೇ ಕಾಡಿಗೆ, ಇದೇ ಆಶ್ರಮಕ್ಕೆ ಗಂಡನೊಡನೆ ವಾನಪ್ರಸ್ಥಕ್ಕಾಗಿ ಬರುವವಳಾಗುವೆ. ದುಃಖಿಸಬೇಡ," ಎಂದು ಕಡೆಯ ಸಲಕ್ಕೆ

ಮಗಳನ್ನು ಕಣ್ವನು ಹರಸಿದನು. ಶಾರ್ಙ್ಗರವನು ಹಾದಿಹಿಡಿದನು. ಗೌತಮಿಯು ಮುನ್ನಡೆದಳು. ಶಕುಂತಳೆಯೂ ಕಾಲ್ತೆಗೆದಳು.

ಶಾರ್ಙ್ಗರವನೆ ಮೊದಲಾದ ಋಷಿಗಳು ಶಕುಂತಳೆಯೊಡಗೂಡಿ ಹಸ್ತಿನಾವತಿಯತ್ತ ತೆರಳಿದರು. ಅವರೆಲ್ಲರೂ ವನದ ಗಿಡಮರಬಳ್ಳಿಗಳಲ್ಲಿ ಅಡಗಿದೊಡನೆ, ಕಣ್ವನೂ ಪ್ರಿಯಂವದಾನಸೂಯೆಯರೂ ಆಶ್ರಮಕ್ಕೆ ನಡೆದರು. ಶಕುಂತಳೆಯಿಲ್ಲದೆ ಆಶ್ರಮವು ಶೂನ್ಯವಾಗಿತ್ತು. ಶಕುಂತಳೆ ಹೋದುದರಿಂದ ಶೂನ್ಯವಾದ ತಪೋವನವನ್ನು ಸೇರಲು ಅವರಿಗೆ ಮನಸ್ಸು ಒಪ್ಪಲಿಲ್ಲ. ಸ್ನೇಹವೆಂಬುದು ಎಂತಹ ವಿರಕ್ತರನ್ನೂ ಮರುಳು ಮಾಡಬಲ್ಲುದು. ಶಕುಂತಳೆಯು ಕೈಮುಟ್ಟಿ ಬೆಳೆಸಿದ ಗಿಡಬಳ್ಳಿಗಳನ್ನು ಕಂಡು ಕಣ್ವನು ದುಃಖಿಸಿದನು. ಹಿಡಿಹಿಡಿ ನೀವಾರವನ್ನು ಕೊಟ್ಟು ಶಕುಂತಳೆ ರಕ್ಷಿಸಿದ ಹುಲ್ಲೆಮರಿಯನ್ನು ಕಂಡು ಸಖಿಯರು ಕಣ್ಣೀರಿಟ್ಟರು. ಆದರೆ, ಒಂದು ವಿಷಯದಲ್ಲಿ ಮಾತ್ರ ಕಣ್ವನು ನೆಮ್ಮದಿಯಾಗಿದ್ದನು. ಸ್ತ್ರೀಯು ಹೆರವರ ಒಡವೆಯು; ತನ್ನಲ್ಲಿಟ್ಟ ಒಡವೆಯನ್ನು ಅದರ ಯಜಮಾನನಿಗೆ ಕೊಟ್ಟವನಂತೆ ಕಣ್ವನು ಇಂದು ಶಕುಂತಳೆಯನ್ನು ಪತಿಗೃಹಕ್ಕೆ ಕಳುಹಿಸಿ ನಿಶ್ಚಿಂತನಾಗಿದ್ದನು.

---

೯. ಪತಿಗೃಹ ಪ್ರವೇಶ

ಹುಟ್ಟಿ ಬೆಳೆದ ಕಣ್ವಾಶ್ರಮವನ್ನು ಬಿಟ್ಟು ಬಾಳಿ ಬದುಕುವ ದುಷ್ಯಂತನರಮನೆಗೆ ಶಕುಂತಳೆ ನಡೆದಳು. ವನವಾಸಬಂಧುಗಳ ಪರವಾಗಿ ಶಕುಂತಳೆಗೆ ಪ್ರಸ್ಥಾನಮಂಗಲವನ್ನು ಬಯಸಿದ ಕೋಗಿಲೆಯೆಂದಂತೆ, ಪರಿಮಳಯುಕ್ತನಾದ ಮಂದಮಾರುತನು ಅನುಕೂಲವಾಗಿ ಬೀಸಿ ಶಕುಂತಳೆಯನ್ನು ಸುಖಪಡಿಸಿದನು. ಅಲ್ಲಲ್ಲಿ ತಾವರೆಯ ಕೊಳಗಳು ಆಕೆಯ ಕಣ್ಮನಗಳನ್ನು ಆಹ್ಲಾದಪಡಿಸಿದುವು. ಬದಿಬದಿಯ ಗಿಡಬಳ್ಳಿಗಳು ಪಾರ್ಶ್ವಚರರಂತೆ ವರ್ತಿಸಿ, ಶಕುಂತಳೆಗೆ ರಾಜೋಪಚಾರಗಳನ್ನು ಮಾಡುವಂತಿದ್ದುವು. ಆ ಗಿಡಬಳ್ಳಿಗಳಲ್ಲಿ ವಾಸಮಾಡುವ ಹಕ್ಕಿಗಳು ವಂದಿ ಮಾಗಧರಂತೆ ಇಂಪಾಗಿ ಹಾಡಿ ಮಹಾರಾಜ್ಞಿಯನ್ನು ಹೊಗಳುತ್ತಿದ್ದುವು. ಮರದ ನೆರಳಿಂದ ತಂಪಾದ ನೆಲದಲ್ಲಿ ನಡೆಯಲಿಕ್ಕೆ ಶಕುಂತಳೆಗೆ ಆಯಾಸವಾಗಲಿಲ್ಲ. ಆಕೆಯು ಅಲ್ಲಲ್ಲಿಯ ಮರ

ಗಳ ಹೆಸರುಗಳನ್ನು ಕೇಳುತ್ತಲೂ ಹಕ್ಕಿಗಳ ವಿಷಯ ಮಾತಾಡುತ್ತಲೂ ಅಧ್ವ ಖೇದವನ್ನು ಹೋಗಲಾಡಿಸುತ್ತಿದ್ದಳು.

ಅವಳೊಡನಿದ್ದ ಋಷಿಗಳು ಇಂದು ಮೆಲ್ಲನೆ ನಡೆಯುತ್ತಿದ್ದರು. ಕಾರಣ, ಕೋಮಲೆಯಾದ ಶಕುಂತಳೆಗೂ ಮುದುಕಿಯಾದ ಗೌತಮಿಗೂ ಋಷಿಗಳಷ್ಟು ವೇಗವಾಗಿ ನಡೆಯಲಾಗಲಿಲ್ಲ. ಋಷಿಗಳು ಸುತ್ತುಮುತ್ತಲಿನ ಪ್ರಕೃತಿಸೌಂದರ್ಯವನ್ನು ಕಂಡು ವಿಮರ್ಶಿಸುತ್ತ ನಡೆಯುತಿದ್ದರು; ವೇದಶಾಸ್ತ್ರ ದರ್ಶನಾದಿಗಳ ಪುಟ್ಟಪುಟ್ಟ ವಿಷಯಗಳನ್ನೆತ್ತಿ ಪ್ರಸ್ತಾವಿಸುತ್ತಿದ್ದರು. ಕಣ್ವ ಮಹರ್ಷಿಯ ತಪಸ್ಸಿನ ಮಹಿಮೆಯನ್ನು ಕೊಂಡಾಡುತ್ತಿದ್ದರು.

ಹಸ್ತಿನಾವತಿಗೆ ತೆರಳುವಾಗ ಗಂಗಾನದಿಯನ್ನು ಅವರು ದಾಟಬೇಕಾಗಿತ್ತು. ಆ ಗಂಗಾನದಿಯಲ್ಲಿ ಶಚೀತೀರ್ಥವೆಂಬ ಪ್ರಸಿದ್ಧವಾದ ಕ್ಷೇತ್ರವೊಂದು ಅವರಿಗೆ ಸಮೀಪವಾಯಿತು. ಭಾರತದ ಸಾವಿರಾರು ಜನರು ಅಲ್ಲಿಗೆ ಬಂದು ಅಲ್ಲಿಯ ಜಲತೀರ್ಥದಲ್ಲಿ ಮಿಂದು, ಜಪತಪೋನುಷ್ಠಾನಗಳಿಂದ ತಮ್ಮ ಸಮಸ್ತ ದುರಿತವನ್ನು ಹೋಗಲಾಡಿಸುವ ಇಚ್ಛೆಯಿಂದ ಜಗತ್ತಿನ ತಂದೆಗೆ ಮೊಣಕಾಲೂರುವ ಸ್ಥಳವದು! ಸಂತೋಷದಿಂದ ಮೆರೆಯುವ ಜನರು ಸಂಸಾರವನ್ನೊಮ್ಮೆಗೆ ಮರೆತು ಬಿಡುವೆವೆಂದು ಬಂದು, ನಶ್ವರವಾದ ಜಗತ್ತನ್ನು ಮರೆಯುತ್ತ ಪರಮಾತ್ಮನಿಗೆ ಸೆರಗೊಡ್ಡಿ ಬಿನ್ನವಿಸುವ ಸ್ಥಳವದು! ಸುಖದಿಂದ ಮೆರೆದು, ದುಃಖದಿಂದ ನರೆತುಬಂದ ಜನರ ಕೂಡಿಕೆಯ ಸ್ಥಳವೇ ನಾಕನರಕದ ಹೊಂದಿಕೆಯಾದ ಸ್ಥಳವದು! ಆದುದರಿಂದಲೆ ನಮಗೆ ದೇವಸ್ಥಾನಗಳು ಪವಿತ್ರವು! ಆದುದರಿಂದಲೇ ನಮಗೆ ಗಂಗಾ ನದಿಯು ಪುಣ್ಯದಾಯಕಳು. ಆದುದರಿಂದಲೆ ಶಚೀತೀರ್ಥವನ್ನು ಹೊಂದಿದೊಡನೆಯೆ, ಋಷಿಗಳೆಲ್ಲ ಒಂದು ದಿವಸಕ್ಕೆ ಅಲ್ಲಿ ತಂಗಿ ವಿಶ್ರಮಿಸಿದರು.

ಶಚೀತೀರ್ಥವೆಂದರೆ ಪವಿತ್ರವಾದ ಕ್ಷೇತ್ರವಷ್ಟೆ? ಆದುದರಿಂದ ವೈಖಾನಸರೆಲ್ಲರು ಶಚೀತೀರ್ಥವನ್ನು ನಮಸ್ಕರಿಸಿ, ನೀರಲ್ಲಿಳಿದು, ಮಿಂದು ವಿಶೇಷವಾದ ಜಪತಪೋನುಷ್ಠಾನಗಳನ್ನು ಮಾಡಿದರು. ಆ ತೀರ್ಥದಲ್ಲಿ ಸಾವಿರಾರು ಜನರು ಸ್ನಾನಮಾಡಿ ತಮ್ಮ ದೇಹದ ಕೊಳೆಯನ್ನು ಹೋಗಲಾಡಿಸುತ್ತ ಮಾನಸಿಕ ಪಾಪವನ್ನೂ ನಿರ್ಮೂಲ ಮಾಡುತ್ತಿದ್ದರು. ಶಕುಂತಳೆಯು ಸಾವಿರಾರು ಜನರನ್ನು ಪಾವನಗೊಳಿಸುವ ಶಚೀತೀರ್ಥದಲ್ಲಿಳಿದು ಕೈಗಳನ್ನು ಜೋಡಿಸಿ, ಹಣೆಗೊತ್ತಿ ನಮಸ್ಕರಿಸಿದಳು. ತನ್ನ ಸಮಸ್ತ ದುರಿತವನ್ನು

ಹೋಗಲಾಡಿಸೆಂದು ಬೇಡಿಕೊಂಡಳು. ತನ್ನ ಗಂಡನಿಗೆ ಉತ್ತರೋತ್ತರಾಭಿವೃದ್ಧಿಯು ಸಿದ್ಧಿಸಲೆಂದು ಪ್ರಾರ್ಥಿಸಿದಳು. ತನ್ನಿಂದ ವಿಯೋಗ ಹೊಂದಿದ ಕಣ್ವನಿಗೂ ಸಖಿಗಳಿಗೂ ನೆಮ್ಮದಿಯುಂಟಾಗಲೆಂದು ಬಿನ್ನವಿಸಿದಳು. ಅನಂತರ ತನ್ನ ಜೋಡಿಸಿದ ಕೈಗಳನ್ನು ಕೆಳತಂದು ಸಾಷ್ಟಾಂಗವೆರಗಿ ಗೌತಮಿಯೊಡನೆ ದಡವೇರಿದಳು. ಮರುದಿವಸ ಹೊತ್ತಾರೆ ಎದ್ದು, ತಿರಿಗೊಮ್ಮೆ ಶಚೀತೀರ್ಥವನ್ನು ವಂದಿಸಿ, ಶಚೀತೀರ್ಥದ ಸಮಸ್ತ ಜಲಪ್ರಾಣಿಗಳಿಗೆಂದು ಆಹಾರ ಕೊಟ್ಟು, ಹಸ್ತಿನಾವತಿಯತ್ತ ವೈಖಾನಸರೊಡನೆ ಪ್ರಯಾಣ ಬೆಳೆಸಿದಳು. ಆಹಾ! ಶಚೀತೀರ್ಥವೆ, ನಿನ್ನ ದರ್ಶನದಿಂದ ಶಕುಂತಳೆಯು ಕಣ್ಣುಗಳು ಎಷ್ಟು ಪಾವನವಾಗಿರಬೇಕು? ನಿನ್ನ ತೀರದ ಗಿಡಬಳ್ಳಿಗಳಲ್ಲಿಯ ಹಕ್ಕಿಗಳ ಗಾಯನದಿಂದ ಆಕೆಯ ಕಿವಿಗಳು ಎಷ್ಟು ಪವಿತ್ರವಾಗಿರಬೇಕು? ನಿನ್ನ ಮಾಧುರ್ಯಗಾಂಭೀರ್ಯಗಳ ವರ್ಚಸ್ಸಿನಿಂದ ಆಕೆಯ ಮನಸ್ಸು ಎಷ್ಟು ನೆಮ್ಮದಿಯಾಗಿರಬೇಕು? ಹೌದು, ನಿನ್ನ ವರ್ಚಸ್ಸಿನಿಂದ ಶಕುಂತಳೆಯು ಕಣ್ವವಿಯೋಗದ ದುಃಖವೆಲ್ಲವನ್ನು ಮರೆತುಬಿಟ್ಟಳು. ನಿನ್ನ ದರ್ಶನದಿಂದ ಶಕುಂತಳೆಯ ಪಾಪವೆಲ್ಲವೂ ನಿನ್ನಲ್ಲಿಯೆ ಇಳಿದು ನಿನ್ನ ಪುಟ್ಟಪುಟ್ಟ ತೆರೆಗಳೊಡನೆ ಹರಿದುಬಿಟ್ಟಿತು. ನಿನ್ನ ವರಪ್ರಸಾದದಿಂದಲೆ ಶಕುಂತಳೆ ನಾಡನ್ನು ಸೇರುವಳು. ಅವಳಿಗೆ ಶುಭವಾಗಲಿ! ಅವಳಿಗೆ ಮಂಗಳ ಮಸಗಲಿ!!

ವೈಖಾನಸರು ದಾರಿಯ ದಣುವನ್ನು ನೀಗಿ ಮುಂದಡಿಯಿಟ್ಟರು. ಶೀಘ್ರದಲ್ಲಿಯೆ ಅವರು ಪಟ್ಟಣಕ್ಕೆ ಸಮೀಪವಾದರು. ಶಾರ್ಙ್ಗರವನೆ ಮೊದಲಾದ ಕಣ್ವಶಿಷ್ಯರು ಅಷ್ಟರ ತನಕ ತಮ್ಮ ಆಶ್ರಮವನ್ನು ಬಿಟ್ಟು ಪಟ್ಟಣಕ್ಕೆ ಪ್ರಯಾಣ ಬೆಳೆಸಿದವರಲ್ಲ. ಪಟ್ಟಣದ ಗಲಭೆಯನ್ನು ಕಂಡು, ಪಟ್ಟಣದ ಹೆದ್ದಾರಿಗಳಲ್ಲಿ ಸಂಚರಿಸುವ ಪೃಥಕ್‌ಜನರ ವರ್ತನವನ್ನು ಕಂಡು, ಸ್ವಾತಂತ್ರ್ಯದ ಬಯಲನ್ನು ಬಿಟ್ಟು ಗಾಳಿಬೆಳಕಿಗೂ ತಡೆಯಿಟ್ಟು ಸ್ವಾತಂತ್ರ್ಯವನ್ನು ಧ್ವಂಸಮಾಡಿದ ಪಟ್ಟಣದ ಇಕ್ಕಟ್ಟಿನಲ್ಲಿ ಅವರಿಗೆ ಕಾಲಿಟ್ಟಂತಾಯಿತು. ಅವರಿಗೆ ಪಟ್ಟಣವು ಸೇರಲಿಲ್ಲ. ಕಾಳಿದಾಸನ ಅಭಿಪ್ರಾಯದಲ್ಲಿ ಹಳ್ಳಿಯು ಪಟ್ಟಣಕ್ಕಿಂತ ಒಂದು ಹೆಜ್ಜೆ ಮುಂದು, ಹಿಂದಲ್ಲ. ಪಟ್ಟಣದವನು ಸ್ನಾನಕ್ಕಾಗಿ ಮೈಗೆ ಎಣ್ಣೆ ಹಚ್ಚಿದವನಾದರೆ, ಹಳ್ಳಿಯುವನು ಸ್ನಾನವನ್ನೆ ತೀರಿಸಿದವನು. ಹಳ್ಳಿಯುವನು ಗುಣವಂತನಾದರೆ, ಪಟ್ಟಣಿಗನು ನಿಂದಿತನು. ಪಟ್ಟಣಿಗನು ನಿದ್ದೆಯಲ್ಲಿದ್ದರೆ, ಹಳ್ಳಿಯುವನು ಎದ್ದೆಚ್ಚೆತ್ತವನು. ಪಟ್ಟಣವೊಂದು ಬಂಧನವು; ಹಳ್ಳಿಯು ಸ್ವಾತಂತ್ರ್ಯದ

ಆಡುಂಬೊಲವು. ಕಾಳಿದಾಸನು ಹೊಗಳಿದ ಹಳ್ಳಿಗಳಿಗೂ ನಮ್ಮ ಆಧುನಿಕ ಹಳ್ಳಿಗಳಿಗೂ ಅಜಗಜಾಂತರವಿದೆಯಲ್ಲವೆ? ಹಾಗಾಗಲು ಕಾರಣ ವೇನು?

ವೈಖಾನಸರು ಅರಮನೆಯತ್ತ ನಡೆದರು. ಅರಮನೆಯ ಸುತ್ತು ನೆರೆದ ಜನಸ್ತೋಮವನ್ನು ಕಂಡು ವೈಖಾನಸರಿಗೆ ಬಹಳ ಆಶ್ಚರ್ಯವಾಯಿತು. ಬೆಂಕಿ ಬಿದ್ದ ಮನೆಯಲ್ಲಿ ಜನರ ಗಲಭೆಯಿರುವಂತೆ, ಪಟ್ಟಣದಲ್ಲಿ ಗಲಭೆಯಿದೆಯೆಂದು ಅವರು ತಿಳಿದುಕೊಂಡರು. ತಮ್ಮ ಪಟ್ಟಣಕ್ಕೆ ಹಿಮಾಚಲದ ತಪ್ಪಲಿನ ತಪಸ್ವಿಗಳು ಬಂದಿರುವರೆಂದು ಅವರನ್ನು ಜನರೆಲ್ಲ ಸುತ್ತುಗಟ್ಟಿದರು. ತಮಗೆ ಅರಸನೊಡನೆ ಕಾರ್ಯವುಂಟೆಂದೂ ತಾವು ಆತನನ್ನು ಕಾಣಲಿಕ್ಕೆ ಬಂದವರೆಂದೂ ಅವರು ಹೇಳಿದೊಡನೆಯೇ ರಾಜದೂತರು ಬಂದು ಋಷಿಗಳನ್ನು ಕಂಡು ಮಾತಾಡಿಸಿದರು.

ಋಷಿಗಳು ತನ್ನ ದರ್ಶನಾಪೇಕ್ಷಿಗಳಾಗಿ ಬಂದಿರುವರೆಂದು ಕೇಳಿ ಅರಸನು ತನ್ನಿಂದ ಎಲ್ಲಿ ಧರ್ಮಲೋಪವಾಗಿದೆಯೋ ಎಂದು ಶಂಕಿಸಿದನು. ಋಷಿಗಳು ಸ್ತ್ರೀಸಮೇತರಾಗಿ ಇರುವರೆಂದು ಕೇಳಿದಾಗಲಂತೂ ಅರಸನಿಗೆ ಮನಸ್ಸಿನಲ್ಲಿ ಏನೋ ಸಂಶಯವು ಮೊಳೆಯಲನುವಾಯಿತು. ಕಣ್ವಮಹರ್ಷಿಯು ಯಾವ ಸಂದೇಶವನ್ನು ಕೊಟ್ಟುಕಳುಹಿಸಿಯಾನು? ಆಶ್ರಮವಾಸಿಗಳಿಗೆ ಎಡರುಂಟಾಗಿರಬಹುದೇ? ಧರ್ಮಾರಣ್ಯದ ಪ್ರಾಣಿಗಳಿಗೆ ಯಾವನೊಬ್ಬನಿಂದ ಸಂಕಟವಾಗಿರಬಹುದೆ? ಆಶ್ರಮದ ಸಾಧುಗಳಲ್ಲಿ ಆರಾದರೂ ಅತ್ಯಾಚಾರವನ್ನು ಗೈದಿರಬಹುದೆ? ಅಥವಾ ಅರಸನ ದುಷ್ಕೃತಗಳ ಫಲವಾಗಿ ಮುನಿಯ ತಪೋವನದ ಗಿಡಬಳ್ಳಿಗಳು ಫಲಪುಷ್ಪಗಳನ್ನು ತಳೆಯುವುದನ್ನು ಬಿಟ್ಟಿರಬಹುದೆ? ಅರಸನು ಊಹಿಸಲಾರದಾದನು. ಕಣ್ವನು ನಿಷ್ಕಾರಣವಾಗಿ ಸಂದೇಶವನ್ನು ಕೊಟ್ಟು ಕಳುಹಿಸಲಾರನು. ಅರಸನಿಗೆ ಕಣ್ವಾಶ್ರಮವನ್ನು ಕಂಡ ನೆನಪುಂಟು; ಆತನು ಕಣ್ವನಿಂದ ಪ್ರಸಾದಹೊಂದಿದ್ದುದುಂಟು. ಕಣ್ವಾಶ್ರಮದ ಸಾಧುಸಂತರಿಗೆ ಬಾಲಬಾಲೆಯರಿಗೆ, ಮನದಣಿಯುವಷ್ಟು ಸುವರ್ಣದಾನಮಾಡಿದ ನೆನಪುಂಟು. ಆದರೆ ಕಣ್ವನು ಏನೆಂದು ಸಂದೇಶ ಕಳುಹಿಸದೇಕಾಯಿತೆಂದು ಆತನು ತಿಳಿಯಲಾರದಾದನು. ಋಷಿಗಳು ಸಚ್ಚರಿತ್ರವನ್ನು ಕೊಂಡಾಡತಕ್ಕವರು; ಪೂಜ್ಯರಾದ ಮಹಾರಾಜರನ್ನು ಸಂಭಾವಿಸಲಿಕ್ಕೆ ಬಂದಿರಬಹುದೆಂದು ಅರಸನಿಗೊಬ್ಬನು ಸೂಚಿಸಿದನು. ಯಾವುದಕ್ಕೂ ಅವರನ್ನು ತಾನು ಕಾಣುವೆನೆಂದೂ

ಬಂದ ಅತಿಥಿಗಳನ್ನು ಚೆನ್ನಾಗಿ ಸತ್ಕರಿಸಬೇಕೆಂದೂ ಪುರೋಹಿತ ಸೋಮರಾತನಿಗೆ ಅರಸನು ಹೇಳಿ ಕಳುಹಿಸಿದನು.

ಋಷಿಗಳನ್ನು ಕಾಣುವುದಕ್ಕಾಗಿ ಧರ್ಮಾಸನದೆಡೆಗೆ ಅರಸನು ನಡೆಯುತ್ತಿದ್ದಾಗ ಆತನಿಗೊಂದು ಗೀತಿಯು ಕೇಳಿಸಿತು. ಸಮೀಪದಲ್ಲಿ ಮಾಢವ್ಯನಿದ್ದನು. ಗೀತಿಯ ಅರ್ಥವು ಧ್ವನಿಪೂರ್ಣವಾಗಿತ್ತು. "ಎಲೈ ಮಧುಕರನೆ, ಹೊಸ ಜೇನಿಗೆಳಸಿ ಚೂತಮಂಜರಿಯನ್ನೊಮ್ಮೆಗೆ ಚುಂಬಿಸಿ ಕಮಲಪುಷ್ಪವನ್ನು ಸೇರಿದೊಡನೆ ಪೂರ್ವಸಂತೋಷದ ಚೂತಮಂಜರಿಯನ್ನು ಮರೆದೆಯಲ್ಲವೆ?" ಈ ಗೀತಿಯನ್ನು ಕೇಳಿ ಅರಸನು ನಸುನಕ್ಕನು. ತನ್ನ ಹೆಂಡತಿಯಾದ ಹಂಸಪದಿಕೆಯು ತನ್ನನ್ನು ಹೀಗೆ ಏಳಿಸುತ್ತಿರುವಳೆಂದು ಮನಗಂಡನು. ತನ್ನನ್ನು ಜಾಣ್ಮೆಯಿಂದ ಏಳಿಸಿದೆಯೆಂದು ಹಂಸಪದಿಕೆಗೆ ತಿಳಿಸಲಿಕ್ಕೆ ಮಾಢವ್ಯನನ್ನು ಅವಳತ್ತ ಕಳುಹಿಸಿದನು. ಪಾಪ! ಮಾಢವ್ಯನಿಗೆ ಋಷಿಗಳನ್ನು ಕಾಣಬೇಕೆಂಬ ಉತ್ಕಟವಾದ ಇಚ್ಛೆಯಿತ್ತು, ಬ್ರಾಹ್ಮಣನಲ್ಲವೆ? ಆದರೆ ಹಂಸಪದಿಕೆಗೆ ಹೆದರುತ್ತಿದ್ದರೂ ರಾಜಾಜ್ಞೆಯೆಂದು ಆತನಿಗೆ ಅತ್ತ ನಡೆಯಬೇಕಾಯಿತು.

ಮಾಢವ್ಯನತ್ತ ತೆರಳಿದನಂತರ ಗೀತಿಯನ್ನು ಕೇಳಿದ ಅರಸನಿಗೆ ಮನಸ್ಸಿನಲ್ಲೇನೋ ಉಮ್ಮಳಿಸಿತು. ಸುಖದಿಂದಲೂ ವೈಭವದಿಂದಲೂ ಯುಕ್ತನಾದಂತಹ ಅರಸನಿಗೆ ಹಂಸಪದಿಕೆಯ ಗೀತಿಯನ್ನು ಕೇಳಿದೊಡನೆ ಮನಸ್ಸು ಪರ್ಯಾಕುಲವಾಯಿತು. ಮಧುಮಧುರವಾದ ಶಬ್ದವನ್ನು ಕೇಳಿದ ಮಾತ್ರಕ್ಕೆ, ರಮಣೀಯವಾದ ವಸ್ತುವೊಂದನ್ನು ನೋಡಿದ ಮಾತ್ರಕ್ಕೆ, ಮನಸ್ಸು ಕಳವಳಗೊಂಡುದಕ್ಕಾಗಿ ಬಹಳವಾಗಿ ಆಶ್ಚರ್ಯಪಟ್ಟನು. ಸಮೀಪದಲ್ಲಿ ಮಿತ್ರನಾದ ಮಾಢವ್ಯನು ಇದ್ದಿದ್ದರೆ, ಈ ವಿಷಯವನ್ನು ಆತನೊಡನೆ ವಿಚಾರಿಸಿ ತಿಳಿಯಬಹುದಿತ್ತು. ಪೂರ್ವ ಜನ್ಮದ ಮೈತ್ರಿಯು ಹೃದಯದ ಅಂತರಾಳದಲ್ಲಿ ಹುದುಗಿದ್ದು ಅದು ಸರಿಯಾಗಿ ತಿಳಿಯದಂತಾಗಿರಬಹುದೆಂದು ಅರಸನು ಊಹಿಸಿದನು. ಮತ್ತು ಕಣ್ವಾಶ್ರಮದ ಋಷಿಗಳು ತನ್ನನ್ನು ಕಾಯುತ್ತಿರಬಹುದೆಂದು ಶೀಘ್ರವಾಗಿ ಮುನ್ನಡೆದನು.

ಪುರೋಹಿತನು ಬಂದ ಅತಿಥಿಗಳನ್ನು ತಕ್ಕ ರೀತಿಯಿಂದ ಸನ್ಮಾನಿಸಿ ಅರಸನಿದ್ದೆಡೆಗೆ ಕರಕೊಂಡು ಬಂದನು. ಇವರೊಡನೆ ಶಕುಂತಳೆಯೂ ಗೌತಮಿಯೂ ಇದ್ದರು. ಶಕುಂತಳೆಯು ಮುಖಕ್ಕೆ ಸೆರಗಿನ ಮುಸುಕನ್ನು ಇಟ್ಟಿದ್ದಳು. ಅವಳ ಶರೀರಕಾಂತಿಯು ಸ್ವಲ್ಪವೇ ತೋರುತ್ತಿತ್ತು. ಇವಳಾರಿರಬಹುದೆಂದು ಅರ

ಸನು ತರ್ಕಿಸಿದನು. ತಾಪಸರ ಮಧ್ಯದಲ್ಲಿ ಕಾಣುವವಳೀಕೆ ಹಣ್ಣೆಲೆಗಳ ಮಧ್ಯೇ ನೆಗೆದು ಬಂದ ಚಿಗುರೆಲೆಯೆಂದು ಅರಸನು ಎಣಿಸಿದನು. ಆದರೆ ಪರಪತ್ನಿಯನ್ನು ವರ್ಣಿಸಬಾರದೆಂದು ಆತನು ತನ್ನ ದೃಷ್ಟಿಯನ್ನು ಹಿಂದಕ್ಕೆಳೆದುಬಿಟ್ಟನು.

ಶಕುಂತಳೆಗೆ ಅನಿಷ್ಟಸೂಚಕವಾಗಿ ಬಲಗಣ್ಣು ಹಾರಿತು. ಗೌತಮಿಯು ಹೆದರಬೇಡೆಂದಳು. ಪತಿಕುಲದೇವತೆಯು ಮಂಗಳವನ್ನುಂಟುಮಾಡಲೆಂದು ಆಕೆ ಮಗಳನ್ನು ಹರಸಿದಳು. ಆಗ ಶಾರ್ಙ್ಗರವನೇ ಮೊದಲಾದ ಋಷಿಗಳು ಕೈಗಳನ್ನೆತ್ತಿ, "ಎಲೈ ಮಹಾರಾಜನೆ, ಜಯಶೀಲನಾಗು," ಎಂದು ಅರಸನನ್ನು ಆಶೀರ್ವದಿಸಿದರು. ಅರಸನು ಎದ್ದು ನಿಂತು ಎಲ್ಲರನ್ನೂ ನಮಸ್ಕರಿಸಿದನು.

"ಮುನಿಗಳ ತಪಸ್ಸು ನಿರ್ವಿಘ್ನವಾಗಿ ನಡೆಯುವುದಲ್ಲವೆ?" ಎಂದು ರಾಜನು ಮತ್ತೆ ಪ್ರಶ್ನಿಸಿದನು.

"ಮಹಾರಾಜನೆ, ನಿನ್ನಂತಹ ಅರಸನು ನಮ್ಮನ್ನು ರಕ್ಷಿಸುತ್ತಿರಲು, ಸತ್ಪುರುಷರ ತಪಸ್ಸಿಗೆ ವಿಘ್ನಗಳು ಎಂತುಂಟಾದಾವು? ಸೂರ್ಯನು ಪ್ರಜ್ವಲಿಸುವಾಗ ಭೂಮಿಯಲ್ಲಿ ಕತ್ತಲೆ ಹೇಗೆ ಉಳಿದೀತು?" ಎಂದು ಶಾರ್ಙ್ಗರವನು ಪ್ರತ್ಯುತ್ತರವಿತ್ತನು.

"ಹಾಗಾದರೆ, ನನ್ನ ಅರಸುತನವು ಸಾರ್ಥಕವಾದಂತಾಯಿತು. ಪೂಜ್ಯರಾದ ಕಣ್ವರು ಕ್ಷೇಮವಲ್ಲವೆ? ಲೋಕಾನುಗ್ರಹಕ್ಕಾಗಿ ಕಷ್ಟಪಡುತ್ತಿರುವರು."

"ಅವರೇನೋ ಸಿದ್ಧಪುರುಷರು. ಸಿದ್ಧಪುರುಷರಿಗೆ ಕ್ಷೇಮವೆಂಬುದು ತಮ್ಮ ಅಂಕೆಯಲ್ಲಿಯೇ ಇರುವುದು. ಕುಲಪತಿಗಳಾದ ಕಣ್ವರು ಕುಶಲ ಪ್ರಶ್ನಪೂರ್ವಕವಾಗಿ ನಿನಗೆ ಈ ಮಾತನ್ನು ಹೇಳಿರುವರು."

"ಪೂಜ್ಯರಾದ ಕಣ್ವರು ಏನಪ್ಪಣೆ ಕೊಟ್ಟಿರುವರು?"

"ಎಲೈ ಮಹಾರಾಜನೆ, ಕಣ್ವನು ಹೀಗೆಂದಿರುವನು:- ನನ್ನ ಪುತ್ರಿಯನ್ನು ನೀನು ಪರಸ್ಪರ ಪ್ರೀತಿಯಿಂದ ಗಾಂಧರ್ವ ವಿವಾಹ ಮಾಡಿಕೊಂಡ ಕಾರಣಕ್ಕೆ ಪ್ರೀತನಾಗಿ ನಿಮ್ಮಿಬ್ಬರನ್ನು ಹರಸಿರುವೆನು. ಏಕೆಂದರೆ, ನೀನು ಪೂಜ್ಯರಾದವರಲ್ಲಿ ಅಗ್ರೇಸರನು, ಶಕುಂತಳೆಯು ಮೂರ್ತಿತಳೆದು ಬಂದ ಸತ್ಕ್ರಿಯೆಯು. ನಿಮ್ಮಿಬ್ಬರಲ್ಲಿ ಸಮಾನ ಸದ್ಗುಣಗಳುಂಟು. ತುಲ್ಯಗುಣವುಳ್ಳ ನಿಮ್ಮನ್ನು ಕೂಡಿಹಾಕಿದುದರಿಂದ ಬ್ರಹ್ಮನಿಗೆ ಇದ್ದ ಅಪವಾದವು ಹೋದಂತಾಗಿದೆ. ಈಗ ಗರ್ಭಿಣಿಯಾದಂತಹ ಈ ನನ್ನ ಸತ್ಪುತ್ರಿಯನ್ನು ಧರ್ಮಾಚರಣಾರ್ಥವಾಗಿ ಸ್ವೀಕರಿಸಿ, ಬಾಳು."

ಗೌತಮಿಯಾಗ ಮುಂದೆ ಬಂದು, "ಎಲೈ ಮಹಾರಾಜನೆ, ನನ ಮಾತಾಡುವುದಕ್ಕೆ ಅವಕಾಶವಿಲ್ಲ. ಆದರೂ ಒಂದು ಮಾತನ್ನು ಹೇಳಲ ಇಚ್ಛಿಸುವೆನು. ಗುರುಜನರೊಡನೆ ಕೇಳದೆ, ಬಂಧುಜನಗಳೊಡನೆ ವಿಚಾರಿಸದೆ ನೀವು ನೀವೇ ಪರಸ್ಪರ ಪ್ರೀತಿಯಿಂದ ವರ್ತಿಸಿದುದನ್ನು ನೋಡಿದರೆ, ನಿಮ್ಮಲ್ಲಿ ಯಾರಿಗೆ ಏನು ಹೇಳಲಿಕ್ಕಿದೆ?" ಎಂದು ಹಿಂದಕ್ಕೆ ಸರಿದಳು. ಅವಳೇನೊ ಹೇಳಲಿಕ್ಕೆ ಬಂದವಳು ತನಗೆ ಮಾತಾಡಲು ಅವಕಾಶವಿಲ್ಲವೆಂದು ಮನಗಂಡಳು ಶಾರ್ಙ್ಗರವನ ಮಾತನ್ನು ಕೇಳಿ ಅರಸನ ಮುಖವು ಕಪ್ಪು ಕಪ್ಪಾದುದನ್ನು ಅವಳು ಕಂಡುಹಿಡಿದಿದ್ದಳು. ಅನಂತರ, ತಾನು ಸಂಬೋಧಿಸುತ್ತಿದ್ದಾಗ ಅರಸನಿಗೆ ಬೇಸರವಾದುದನ್ನು ನೋಡಿದ್ದಳು. ಆದುದರಿಂದ ಹಿಂದೆ ಸರಿದಳು.

ಅರಸನಿಗೆ ಇದರ ಅರ್ಥವಾಗಲಿಲ್ಲ. ಮುನಿಕುಮಾರನೊಬ್ಬನು ಮುಂದೆ ಬಂದು, "ನಿನ್ನ ಹೆಂಡತಿ ಈಕೆ," ಎಂದನು; ತಾಪಸಿಯೊಬ್ಬಳು ಎದುರು ನಿಂತು, "ನೀನು ಗಾಂಧರ್ವದಿಂದ ಮದುವೆಯಾದೆ," ಎಂದಳು. ಯಾವ ಗಾಂಧರ್ವವೊ, ಯಾವ ಮದುವೆಯೊ, ಆತನಿಗರಿಯದು. ಅರಸರು ಮದುವೆ ಯೆಂಬುದನ್ನು ಯಾರೊಬ್ಬರಿಗೂ ಹೇಳದೆ ಕೇಳದೆ ಮಾಡುವರೇನು? ತಾನೆಲ್ಲಿ, ಹಿಮಾಲಯದ ಕಾಡಾಡಿಗಳೆಲ್ಲಿ? "ಎಲೈ ಮುನಿಕುಮಾರನೆ! ನೀನು ಹೇಳು ತ್ತಿರುವುದಾದರೂ ಏನು? ನನಗರ್ಥವಾಗಲಿಲ್ಲ," ಎಂದು ಅರಸನು ಆಶ್ಚರ್ಯ ದಿಂದ ಕೇಳಿದನು. ಗುಡುಗಿಗೆ ಹೆದರಿ ಬಳುಕುವ ಬಳ್ಳಿಯಂತೆ ಶಕುಂತಳೆ ನಡುಗಿದಳು. ಮಂಜಿನ ಭಾರಕ್ಕೆ ಬಳುಕಿಬೀಳುವ ಹೂವಿನಂತೆ ಮುದುಕಿ ತಲೆಬಾಗಿದಳು. ವನಾಂತರದ ವೃಕ್ಷವು ಬಿರುಗಾಳಿಗೆ ಬೀಸುವಂತೆ ಶಾರ್ಙ್ಗರ ವನು ತಲೆದೂಗಿದನು. ಏನು ಹೇಳಬೇಕೆಂದು ಆತನಿಗೆ ತೋರದಾಯಿತು. ಪತಿಯುಳ್ಳ ಸತಿಯು ತಂದೆಯ ಮನೆಯಲ್ಲಿ ಬಹುಕಾಲಕ್ಕೆ ವಾಸಮಾಡಿದರೆ ಲೋಕನಿಂದೆಯಿದೆ ಎಂಬ ನೀತಿಯ ಮಾತು ಆತನಿಗೆ ಆಗ ನೆನಪಿಗೆ ಬಂತು. ಧೈರ್ಯದಿಂದಾತನು ಅರಸನಿಗೆ ಹೀಗೆಂದನು— "ಲೋಕವ್ಯವಹಾರದಲ್ಲಿ ನಿಷ್ಣಾತ ರಾಗಿದ್ದು ಇರುವ ನೀವೆ ಹೀಗೆಂದರೆ ನಾವು ಹೇಳತಕ್ಕದ್ದೇನು ಉಳಿಯಿತು?"

"ಹಾಗಾದರೆ ನಾನಿವಳನ್ನು ಮುಂಚೆ ಮದುವೆಯಾಗಿದ್ದೇನೆಯೇ?"

"ಅಹಾ! ಗೈದ ಕಾರ್ಯಕ್ಕೇ ದೋಷವನ್ನೆಣಿಸುವೆಯಾ? ಧರ್ಮಕ್ಕೆ ಪರಾಙ್ಮುಖನಾಗಿರುವೆಯಾ? ಧರ್ಮನಿಂದೆಯನ್ನು ಮಾಡಿದೆಯಲ್ಲ!"

"ಎಲೈ ಋಷಿಕುಮಾರನೆ, ಇಲ್ಲದುದನ್ನು ಆರೋಪಿಸಬೇಡ."

"ಭಲೆ! ಇಂತಹ ವಿಕಾರಗಳು ಐಶ್ವರ್ಯವತ್ತರಲ್ಲಿ ತಾನೆ ತೋರುವುವು."

ಹಿಮಾಲಯದ ತಪ್ಪಲಿನ ಕಣ್ವ ಮಹರ್ಷಿಯು ಸಂದೇಶವಾಹಕರೆಂದು ಇಟ್ಟುಕೊಂಡು ಜೋಲುಗಡ್ಡದ ಪ್ರದರ್ಶನದಿಂದ ವಂಚಿಸಬೇಕೆಂದಿರುವವರು ತನ್ನನ್ನು ಧರ್ಮಬಾಹಿರನೆಂದೂ ನೀತಿಭ್ರಷ್ಟನೆಂದೂ ಮನಸ್ವಿಯಾಗಿ ತೆಗಳ ಬೇಕಾದರೆ, ಭಾರತ ಚಕ್ರವರ್ತಿಯಾದ ದುಷ್ಯಂತ ಮಹಾರಾಜನು ಮಾಡಿದ ಪಾಪವಾದರೂ ಯಾವುದಿರಬೇಕು? ಇಲ್ಲದಿದ್ದರೆ, ಕಾಡಾಡಿಯಾದ ಋಷಿ ಕುಮಾರನೊಬ್ಬನು ಅರಸನನ್ನು ಧಿಕ್ಕರಿಸಲು ಶಕ್ತನಾಗಿದ್ದನೆ? ಶಕುಂತಳೆಯನ್ನು ಕಂಡ ನೆನಪು ತನಗಿಲ್ಲ, ಅವಳೊಡನೆ ಸಂಸರ್ಗವನ್ನು ಮಾಡಿದ ಸ್ಮರಣೆಯಂತಿರಲಿ. ಹಾಗಿರುವಾಗ ಕಣ್ವ ಮಹರ್ಷಿಯ ಮಾತೆಂದು ನಂಬಿ, ಋಷಿಕುಮಾರನು ಹುಸಿಯಾಡನೆಂದು ಎಣಿಸಿ, ಜನಾಪವಾದಕ್ಕೆ ಗುರಿಯಾಗಬೇಕೆ? ಅರಸರು ದುರ್ವಾಸನಂತಹ ಋಷಿಗಳ ಶಾಪಕ್ಕೆ ಹೆದರುವುದಿಲ್ಲ; ಆದರೆ ಜನಾಪವಾದಕ್ಕೆ ಗುರಿಯಾಗಲು ಇಚ್ಛಿಸುವುದಿಲ್ಲ.

ಶಾರ್ಙ್ಗರವನು ದುಷ್ಯಂತನಲ್ಲಿ ಕೋಪಗೊಂಡಿದ್ದನು; ಗೌತಮಿಯಾಗ ಮುಂದೆ ಬಂದು, "ಮಗಳೆ! ನಿನ್ನ ಗಂಡನು ನಿನ್ನನ್ನು ಮರೆತಿರುವನು; ತುಂಬಿಯು ಮರೆಯುವುದು ಸಹಜವು. ಆದರೆ, ಒಂದು ಮುಹೂರ್ತ ಲಜ್ಜೆಪಡದಿರು; ನಿನ್ನ ಅವಗುಂಟನವನ್ನು ತೆಗೆದುಬಿಡುವೆನು," ಎಂದು ಮಗಳ ಮುಸುಕನ್ನು ತೆಗೆದಳು. ಕಪ್ಪು ಮೋಡಗಳು ಒಂದಕ್ಕೊಂದು ಘರ್ಷಿಸಿ ಭಿನ್ನವಾದೊಡನೆಯೆ ಮಿಂಚಿನಬಳ್ಳಿ ಹೊಳೆಯುವಂತೆ, ನಿರ್ದುಷ್ಟವಾದ ಕಾಂತಿ ಯೊಂದು ತೋರಿ ಅರಸನನ್ನು ಬೆರಗುಪಡಿಸಿತು. ಎಳಗಬ್ಬದವಳ ಮುಖವು ಚಂದವೆಂಬುದು ಸರ್ವಜ್ಞ ಕವಿಯ ಮಾತು. ಅಂತಹ ರೂಪವನ್ನು ಆತನು ಮುಂಚೆ ನೋಡಿದವನಲ್ಲ; ಅಂತಹ ಬಳ್ಳಿಗಳು ರಾಜಧಾನಿಯ ಉದ್ಯಾನ ದಲ್ಲಿಯೂ ಇಲ್ಲವೆನ್ನಬಹುದು. ಶಕುಂತಳೆಯ ಮುಖವನ್ನು ಕಂಡೊಡನೆಯೆ ಹಿಂದೆ ಹಂಸಪದಿಕೆಯ ಮಧುರ ಗೀತಿಯನ್ನು ಕೇಳಿದಾಗ ಮನಸ್ಸು ಕಳವಳ ಗೊಂಡಂತೆ, ಈಗ ರಮಣೀಯವಾದ ರೂಪವನ್ನು ಕಂಡು ಆತನ ಮನಸ್ಸು ಸಂಶಯಕ್ಕೊಳಗಾಯಿತು. ಜನ್ಮಾಂತರದ ಕಥೆಯೋ ಇದು ಎಂಬಂತೆ ವಿಸ್ಮಯ ಪಟ್ಟನು.

ಕಣ್ವಪುತ್ರಿಯನ್ನು ಮದುವೆಯಾದ ನೆನಪು ಆತನಿಗಿದ್ದಿಲ್ಲ. ಕಣ್ವಪುತ್ರಿ ಯನ್ನು ಕಂಡು ಮಾತಾಡಿಸಿದುದೂ ಇಲ್ಲ. ಆದರೆ, ಹೀಗೆಂದು ಮನಸ್ಸಿಗೆ

ನಿಶ್ಚಯುವಿದ್ದರೂ, ಸಂಶಯುದ ಕೀಟವು ಮನಸ್ಸನ್ನು ಕೊರೆಯುತ್ತಿತ್ತು. ಎಂತಹ ಅಪೂರ್ವವಾದ ಚೆಲುವಿದು? ಬಳಿಗೈದುದರಿಂದ ಸ್ವೀಕರಿಸಲೇ? ಸ್ವೀಕರಿಸೆಂದು ಮುನಿಪುತ್ರನ ಒತ್ತಾಯುವಿದೆ. ಸ್ವೀಕರಿಸಲಿಲ್ಲವೆಂದು ಸಿಟ್ಟಿದೆ.

ಇಲ್ಲ, ಸ್ವೀಕರಿಸಲು ಸಾಧ್ಯವಿಲ್ಲ; ಧರ್ಮಬಾಹಿರನಾಗುವುದು ಪುರು ವಂಶದವರಿಗೆ ಸಲ್ಲದ ಮಾತು. ವಿವಾಹವೆಂಬುದು ಇಚ್ಛೆಯು ವಿಷಯುವಲ್ಲ. ಅದೊಂದು ಸ್ವರ್ಗೀಯು ಪಾಶವು! ಅದೊಂದು ಸಂಸಾರದ ಬಂಧನವು!! ಅರಸನ ಮನಸ್ಸು ಹಿಂಜರಿಯಿತು. ಕುಂದಪುಷ್ಪದಲ್ಲಿ ಸವಿ ಜೇನಿದ್ದರೂ, ತುಂಬಿ ಹೂವಿಂದ ದೂರಕ್ಕೋಡಿತು. ಕಾರಣ, ಪ್ರಾತಃಕಾಲದ ಮಂಜು ಅದರಲ್ಲಿ ತುಂಬಿತ್ತು. ಆ ಮಂಜು ತುಂಬಿಗೆ ಮೃತ್ಯು!

ಆದರೆ ಮಂಜಿನ ಅಡಿಯಲ್ಲಿ ಆ ತುಂಬಿಯೆಳಸುವ ಜೇನುಂಟು; ಜೇನು ತಾನೆ ಸವಿಯುಂಟು. ಹೇಗೆ ಇಂತಹ ಹೂವನ್ನು ಬಿಟ್ಟು ತೆರಳಲು ತುಂಬಿಗೆ ಸಾಧ್ಯವಾಗುವುದಿಲ್ಲವೊ, ಹಾಗೆಯೆ ಬಳಿಗೈದು ಬಂದ ರೂಪವತಿಯುನ್ನು ಅನುಭೋಗಿಸಲಿಕ್ಕಾಗಲಿ ಬಿಟ್ಟುಬಿಡಲಿಕ್ಕಾಗಲಿ ಅರಸನಿಗೆ ಸಾಧ್ಯವಾಗಲಿಲ್ಲ. ಅವನು ದಿಙ್ಮೂಢನಾದನು. ಮುಖವನ್ನು ತಗ್ಗಿಸಿದನು. ಶತ್ರುಗಳಿಗೆ ಮಣಿಯುದ ಅರಸು ಕುಗ್ಗಿದನು; ಋಷಿಗಳನ್ನು ಸನ್ಮಾನಿಸಿ ದಣಿಯುದ ಅರಸು ಬೇಸರದಿಂದ ಬಳಲಿದನು.

ಮುಖವನ್ನು ತಗ್ಗಿಸಿ ಕೂತ ರಾಯುನನ್ನು ಕಂಡು ಶಾರ್ಙ್ಗರವನು, "ಎಲೈ ರಾಯುನೆ, ಇದೇನು ಮೌನ ತಾಳಿದೆ?" ಎಂದು ಗುಡುಗಿದನು.

"ಎಲೈ ತಪಸ್ವಿಯೆ, ಬಹಳ ಯೋಚಿಸಿದೆನು, ಆದರೆ ಈಕೆಯುನ್ನು ಸ್ವೀಕರಿಸಿದ ಸ್ಮರಣೆ ನನಗೆ ಬರುವುದಿಲ್ಲ. ಗರ್ಭಚಿಹ್ನೆಯುಳ್ಳವಳನ್ನು ನಾನೆಂತು ಪರಿಗ್ರಹಿಸಲಿ?" ಎಂದು ರಾಜನು ವಾದಿಸಿದನು.

"ನೀನು ಕಳ್ಳನಂತೆ ಬಂದು ಮುಟ್ಟಿದಂತಹ ಪುತ್ರಿಯುನ್ನು ಅಭಿನಂದಿಸಿ ನಿನ್ನೆಡೆಗೆ ಕಳುಹಿಸಿದ ಮುನಿಗೊಂದು ಅವಮಾನವಾಯಿತು; ಕದ್ದೊಡವೆಯುನ್ನು ಕದಿಯುಲಿಲ್ಲವೆನ್ನದಿರು; ಧನಿಕನಿಗಿದು ಬೇಡ."

ಶಾರ್ಙ್ಗರವನ ಕೋಪವು ತುತ್ತತುದಿಗೇರಿತ್ತು. ಅರಸನನ್ನು ಮುಂಚೆ ಧರ್ಮಬಾಹಿರನೆಂದಿದ್ದನು; ಈಗ ಕಳ್ಳನೆಂದು ಸಂಬೋಧಿಸಿದನು. ಕಳ್ಳರನ್ನು ಶಿಕ್ಷಿಸುವವನೆ ಕಳ್ಳನಾದರೆ . . . . . ? ಮತ್ತೇನು ಉಳಿಯಿತು? ಶಾರದ್ವತನು ಬಳಿಯುಲ್ಲಿ ನಿಂತಿದ್ದನು. ಅವನು ಮುಂಗೋಪಿಯುಲ್ಲ. ಶಾಂತಸ್ವಭಾವದವನು.

ಮುಂದಕ್ಕೆ ಬಂದು ಮೇರೆತಪ್ಪಿ ಮಾತಾಡುವ ಶಾರ್ಙ್ಗರವನನ್ನು ತಡವರಿದು, "ಅಣ್ಣ ಶಾರ್ಙ್ಗರವ, ನೀನೀಗ ಸುಮ್ಮನಿರು," ಎಂದು ಹೇಳಿ, ಶಕುಂತಳೆಯೆಡೆಗೆ ತಿರಿಗಿ, "ಎಲೌ ಶಕುಂತಳೆಯೆ, ಹೇಳಬೇಕಾದುದನ್ನು ನಾವು ಹೇಳಿಬಿಟ್ಟೆವು. ನಿನ್ನನ್ನು ವರಿಸಿದವನು ಹೀಗೆ ಹೇಳುತ್ತಾನೆ; ಆತನನ್ನು ನಂಬಿಸಲಿಕ್ಕೆ ಸಾಧ್ಯವಿದ್ದರೆ ನಂಬಿಸಿಬಿಡು," ಎಂದು ಸ್ವಸ್ಥವಾಗಿ ನಿಂತುಬಿಟ್ಟನು.

ಶಕುಂತಳೆಯು ಇಷ್ಟು ಹೊತ್ತಿಗೂ ಸುಮ್ಮನಿದ್ದಳು. ಅರಮನೆಯನ್ನು ಪ್ರವೇಶಿಸುವಾಗ ಏನೋ ಕಾರಣದಿಂದ ಆಕೆಯ ಮನಸ್ಸು ಕಳವಳಪಡುತ್ತಿತ್ತು. ಅನಂತರ ಮಹಾರಾಜನಿಗೆ ಮದುವೆಯಲ್ಲಿ ಸಂಶಯವಾದ ಮೇಲೆ ಬಹಳ ದೂರಕ್ಕೆ ಹತ್ತಿದ್ದ ಆಕೆಯ ಆಶೆಯು ಬಿಮ್ಮನೆ ಮುರಿದುಬಿಟ್ಟಿತ್ತು. ಮಾಲಿನಿಯ ತೀರದಲ್ಲಿರುವಾಗ ಯಾವ ಅನುರಾಗವನ್ನು ಪ್ರಿಯನು ಆಕೆಗೆ ತೋರಿಸುತ್ತಿದ್ದನೊ, ಅದೀಗ ಗಂಗೆಯ ತೀರವನ್ನು ದಾಟಿದೊಡನೆಯೆ ಅವಸ್ಥಾಂತರವನ್ನು ಹೊಂದಿರುವಾಗ, ನೆನಪು ಹುಟ್ಟಿಸಿ ಪ್ರಯೋಜನವಾದರೂ ಏನಿರಬಹುದು? ನಿದ್ರೆಯಲ್ಲಿದ್ದವನನ್ನು ಎಬ್ಬಿಸಬಹುದು; ನಿದ್ದೆ ನಟಿಸುವವನನ್ನು ಎಬ್ಬಿಸುವವರಾರು? ತಾನು ದುಃಖಭಾಗಿನಿಯಾದಳೆಂದು ಶಕುಂತಳೆ ಬಹಳ ಚಿಂತಿಸಿದಳು. ಶಾರದ್ವತನೀಗ ಎಲ್ಲ ಭಾರವನ್ನು ತನ್ನ ತಲೆಯ ಮೇಲಿರಿಸಿದ ಕಾರಣ, ರಾಜನಿಗೆ ಇದಿರಾಗಿ "ಆರ್ಯ ಪುತ್ರನೆ!" ಎಂದು ಸಂಬೋಧಿಸಿದಳು. ಶಕುಂತಳೆಗೆ ರೀತಿನೀತಿಗಳು ಚೆನ್ನಾಗಿ ಗೊತ್ತು. ಮದುವೆಯಲ್ಲೆ ಸಂದೇಹ ಬಂದಾಗ ಗಂಡನನ್ನು ಆರ್ಯಪುತ್ರನೆಂದು ಕರೆಯುವುದು ಉಚಿತವಲ್ಲವೆಂದು ಎಣಿಸಿದಳು. "ಇಲ್ಲ, ಎಲೈ ಪುರುಕುಲೋತ್ಪನ್ನನೆ, ಆಶ್ರಮಕ್ಕೆ ಬಂದು, ನಿಷ್ಕಪಟಿಯಾದ ಈ ಮುಗ್ಧೆಯನ್ನು ವಿಶ್ವಾಸಪೂರ್ವಕವಾಗಿ ನಂಬಿಸಿದ್ದು, ಈಗ ಇಂತಹ ಕಠಿನೋಕ್ತಿಗಳಿಂದ ತಿರಸ್ಕರಿಸಿ ವಂಚಿಸುವುದು ಧರ್ಮಸಮ್ಮತವೆ? ಅಹಾ!" ಎಂದು ಅವಳು ಮುಂದರಿಸಿದಳು.

ರಾಜನಾಗ ತನ್ನ ಕಿವಿಗಳನ್ನು ಮುಚ್ಚಿದನು. "ಶಾಂತಂ ಪಾಪಂ, ಶಾಂತಂ ಪಾಪಂ! ತೀರದ ಮಣ್ಣನ್ನು ಕೊರೆದು, ಅಲ್ಲಿದ್ದ ಮರವನ್ನು ಬೀಳಿಸಿ ತಾನೂ ಕಳಂಕವಾಗುವ ತೊರೆಯ ನೀರಿನಂತೆ ನನ್ನನ್ನು ನರಕಕ್ಕೆ ಇಳಿಸಿ, ಹೆಂಗಸೆ, ಹಾಳಾಗಬೇಡ!" ಎಂದು ಶಕುಂತಳೆಯನ್ನು ಅರಸನು ಗದರಿಸಿಬಿಟ್ಟನು.

"ಆಗಲಿ, ನನ್ನನ್ನು ಪರಸ್ತ್ರೀಯೆಂದು ಎಣಿಸುವೆ. ಇಕೋ, ಈ ಗುರುತಿನ

ಆಭರಣವನ್ನು ತೋರಿಸುವೆನು. ಹಾಗಾದರೂ ಸಂದೇಹವು ಪರಿಹಾರವಾಗ ಬಹುದು," ಎಂದು ಶಕುಂತಳೆ ಧೈರ್ಯದಿಂದ ಅರಸನಿಗೆ ಹೇಳಿದಳು.

ಹೀಗೆಂದ ಶಕುಂತಳೆ ಕೈಮುಟ್ಟಿದಳು. ಬೆರಳಲ್ಲಿ ಹುಡುಕಿದಳು. ಅರಸನು, 'ಇದೀಗ ಒಪ್ಪತಕ್ಕದ್ದೆ'ಂದನು. ಆದರೆ, ಧಿಕ್ ಧಿಕ್, ಹಸ್ತಿನಾವತಿಗೆ ಮಹಾರಾಜನೂ ಸಮಸ್ತಭಾರತಕ್ಕೆ ಏಕಚಕ್ರಾಧಿಪತಿಯೂ ಆದ ದುಷ್ಯಂತ ರಾಜನು ಮಾಲಿನಿಯ ತೀರದಲ್ಲಿ ತನ್ನ ಪ್ರೀತಿಯ ಮಡದಿಯ ಬೆರಳಿಗೆ ಇಟ್ಟ ನಾಮಾಂಕಿತದ ಉಂಗುರವು ಬೆರಳಲ್ಲಿಲ್ಲ! ಆಶ್ರಮದಿಂದ ಹೊರಡುವಾಗ, "ಅರಸನು ನಿನ್ನನ್ನು ಗುರುತಿಸಿಲ್ಲವಾದರೆ. ಈ ಉಂಗುರವನ್ನು ತೋರಿಸು," ಎಂದು ಸಖಿಯರು ಸೂಚನೆಯಿತ್ತು ತೋರಿಸಿದ ಉಂಗುರವು ಬೆರಳಿಗಿಲ್ಲ.

"ಹಾ, ಹಾ, ನನ್ನ ಬೆರಳಿನ ಉಂಗುರವಿಲ್ಲವಲ್ಲಾ!" ಎಂದು ಶಕುಂತಳೆ ದುಃಖದಿಂದ ಗೌತಮಿಯನ್ನು ನೋಡಿದಳು. ಗೌತಮಿಯಾಗ ಅವಳಿಗೆ ಕಾಣಲಿಲ್ಲ. ವಿಶ್ವವವಳಿಗೆ ತೋರಲಿಲ್ಲ. ದೇಹದಲ್ಲಿದ್ದ ಜೀವವೆಲ್ಲ ಕಂಬನಿ ಸುರಿಯಿತು. ಮುದುಕಿ ಮಗಳ ಕಣ್ಣನ್ನೊರಸಿ, ಮೈತಬ್ಬಿ, "ಮಗಳೆ, ದುಃಖಿಸಬೇಡ. ಶಕ್ರಾವತಾರದಲ್ಲಿ ಶಚೀತೀರ್ಥವನ್ನು ವಂದಿಸುವಾಗ ನೀರಿನಲ್ಲಿ ಉಂಗುರವು ಜಾರಿತು. ಗಂಡಸರ ಉಂಗುರವಲ್ಲವೆ ಅದು?" ಎಂದು ಸಂತಯಿಸಿದಳು. ಮುದುಕಿಯ ಹಲ್ಲಿಲ್ಲದ ಬಾಯಿಂದ ಬಿಸಿ ಬಿಸಿ ಮಾತುಗಳನ್ನು ಕೇಳಿ ಅರಸನು ನಕ್ಕುಬಿಟ್ಟನು. ಸ್ತ್ರೀಯರು ಪ್ರತ್ಯುತ್ಪನ್ನಮತಿಗಳೆಂಬುದು ಸುಳ್ಳಲ್ಲವೆಂದನು; ಲೋಕದ ಅನುಭವವು ಸುಳ್ಳಾಗುವುದುಂಟೆ?

ಮಹಾಸಾಗರದ ಅಲೆಗಳ ಮಧ್ಯದಲ್ಲಿ, ನಿರಾಶೆಯ ಆಕಾಶದ ಅಡಿಯಲ್ಲಿ, ಬಂಡೆಗಳ ಸಂಕುಲದ ಸೆರೆಯಲ್ಲಿ ತೇಲುವ ತೆಪ್ಪವನ್ನು ಹತ್ತಿದ ಶಕುಂತಳೆ ದಿಗ್ಭ್ರಾಂತಳಾದಳು. ಗುರುತಿನ ಧ್ರುವತಾರೆ ಕಾಣುತ್ತಿದ್ದಿಲ್ಲ, ನಶ್ವರವಾದ ಭೂಮಿಯಂತೆ. ಆದರೆ ಶಬ್ದವು ನಶ್ವರವಲ್ಲ. ಆತನು ಹಿಂದೆ ತನಗೆಂದ ಮಾತನ್ನು ನಿರೂಪಿಸುವೆನೆಂದಳು. ಮುಳುಗುವವರು ಹುಲ್ಲನ್ನೇ ಆಧಾರವಾಗಿ ಹಿಡಿಯುವಂತೆ ಹಿಂದಿನ ಕತೆಯನ್ನು ಹೇಳುವೆನೆಂದಳು.

"ನೋಡತಕ್ಕದ್ದಂತೂ ಆಯಿತು; ಇನ್ನು ಕೇಳತಕ್ಕದ್ದು ಉಳಿಯಿತು," ಎಂದು ಅರಸನು ಕೊಂಕು ಮಾತಾಡಿದನು.

"ಒಂದು ದಿನ ನಾವು ಲತಾಗೃಹದ ನೆರಳಲ್ಲಿ ಕೂತಾಗ, ನೀರು ತುಂಬಿದ ಕಮಲ ಪತ್ರದ ಪಾತ್ರೆಯು ನಿನ್ನ ಕೈಯಲ್ಲಿತ್ತು. ಆಗ . . . ."

"ಆ ಮೇಲೆ"

"ಆಗ ದೀರ್ಘಾಪಾಂಗನೆಂಬ ನನ್ನ ಜಿಂಕೆಮರಿಯು ದೀರ್ಘೋಚ್ಛ್ವಾಸಗಳನ್ನು ಎಳೆಯುತ್ತ ನಮ್ಮೆಡೆಗೆ ಬಂದಿತು. ನೀನಾಗ ದಯೆಯಿಂದ, "ಮೊದಲು ಇದು ನೀರು ಕುಡಿಯಲಿ," ಎಂದು ಜಲಪಾತ್ರೆಯನ್ನು ಮುಂದು ತೋರಿಸಲಿಲ್ಲವೆ? ಆದರೆ, ಅದು ನಿನಗೆ ಅಪರಿಚಿತವಾದುದರಿಂದ ನಿನ್ನ ಸಮೀಪಕ್ಕೆ ಬರಲಿಲ್ಲ. ಅನಂತರ ಅದೇ ಪಾತ್ರೆಯನ್ನು ನಿನ್ನ ಕೈಯಿಂದ ಪಡೆದುಕೊಂಡು ನಾನು ಹಿಡಿದುಕೊಂಡಾಗ ಬಳಲಿದ ಹುಲ್ಲೆಮರಿ ಹಾರಿಬಂದು ನೀರನ್ನು ಕುಡಿದುಬಿಟ್ಟಿತು. ನೀನಾಗ ನಕ್ಕು ಬಿಟ್ಟು, "ನೀವಿಬ್ಬರೂ ಕಾಡಾಡಿಗಳು; ಆದ್ದರಿಂದ ನಿಮ್ಮೊಳಗೆ ವಿಶ್ವಾಸವಿದೆ"ಯೆಂದು ನನಗೆ ಹಾಸ್ಯ ಮಾಡಿದ್ದ ನೆನಪಿದೆಯೆ?"

"ಹೀಗೆ ತಾನೇ ತಮ್ಮ ಕಾರ್ಯವನ್ನು ಸಾಧಿಸುವುದಕ್ಕಾಗಿ ಹೆಂಗಸರು ಮಧುವಿನಂತೆ ಮಧುರವಾದ ಅನೃತವಚನಗಳಿಂದ ಕಾಮಿಗಳನ್ನು ಸೆಳೆದು ಬಿಡುವರು," ಎಂದು ಅರಸನು ಮೂಗು ಮುರಿದುಕೊಂಡನು.

ಅರಸನ ಮಾತು ಮುದುಕಿಯ ಹೃದಯಕ್ಕೆ ನಾಟಿತು. ತಾವು ಯಾರು? ಮಹರ್ಷಿಯಾದ ಕಣ್ವನ ಆಶ್ರಮವಾಸಿಗಳು. ಶಕುಂತಳೆಯು ದುಷ್ಯಂತನನ್ನು ವರಿಸಿದ ಸಂಗತಿಯು ಮೊದಲು ಆಕೆಗೆ ತಿಳಿಯದಿದ್ದರೂ ಆತನು ಶಕುಂತಳೆಗಿತ್ತ ಉಂಗುರವನ್ನು ಕಂಡಿದ್ದಳು; ಕಂಡು ಕಣ್ಣರಳಿಸಿದ್ದಳು. ಶಕುಂತಳೆಯಲ್ಲಿ ಆಕೆಗೆ ವಿಶ್ವಾಸವಿದ್ದಿತು. ಆಕೆಯು ಮುಂದೆ ಬಂದು, "ಮಹಾರಾಜನೆ, ಹೀಗೆ ಹೇಳುವುದು ನಿನಗಂದುದಲ್ಲ. ತಪೋವನದಲ್ಲಿ ಬೆಳೆದ ಮಗುವಿದು ಕಪಟವನ್ನು ಅರಿತವಳಲ್ಲ," ಎಂದು ಬೇಸರದಿಂದ ಅರಸನಿಗೆಂದಳು. "ಎಲಾ ಮುದಿತಾಪಸಿಯೆ, ಹೆಣ್ಣು ಹಕ್ಕಿಗಳಿಗೂ ಕೌಶಲವೆಂಬುದು ಕಲಿಸದೆ ಬರುವುದು. ಮತ್ತೆ ಬುದ್ಧಿ ಬಂದ ಇಂತಹ ಹೆಣ್ಣುಗಳ ಮಾತೇನು? ಕೋಗಿಲೆಯು ತನ್ನ ಮರಿಯನ್ನು ಕಾಗೆಗಳ ಗೂಡಿನಲ್ಲಿ ರಕ್ಷಿಸುವುದನ್ನು ಕೇಳಿಲ್ಲವೇ ನೀನು?" ಎಂದು ಅರಸನು ಮುದುಕಿಗೆ ಪ್ರತ್ಯುತ್ತರವಿತ್ತನು.

ಅರಸನ ಈ ಮಾತನ್ನು ಕೇಳಿ ಶಕುಂತಳೆಗೆ ಕೋಪ ಬಂದಿತು. ಅವಳ ಕಣ್ಣು ಕೆಂಪೇರಿತು. ಹುಬ್ಬು ಮುರಿಯಿತು. ಬೆವರಿಳಿಯಿತು. "ಅನಾರ್ಯ! ನಿನ್ನ ಹೃದಯಾನುಮಾನದಿಂದ ನನ್ನನ್ನು ಎಣಿಸಿ ಮಾತಾಡುವೆಯಾ? ಹುಲ್ಲು ಮುಸುಕಿದ ಬಾವಿಯಂತೆ ಧರ್ಮಕಂಚುಕವನ್ನು ತೊಟ್ಟು ಬಂದ ನಿನಗೆ ಯಾವ ಮನುಷ್ಯನು ಸದೃಶನಾಗುವನು?" ಎಂದವಳು ಗಡಗಡನೆ ಗುಡುಗುವಾಗ ಅವಳ

ನಿಷ್ಕಪಟತೆಯು ಮಿಂಚು ಅರಸನನ್ನು ಬೆರಗು ಮಾಡಿತು. ಮದನನ ಧನುಸ್ಸು ಮುರಿಯುವುದಿಲ್ಲ. ಹಿಂದೆ ಮದನನು ದಗ್ಧನಾದರೂ ಆತನ ಧನುಸ್ಸು ಕೃತಕೃತ್ಯ ವಾಗಿತ್ತು! ಆಕೆಯ ಮುರಿದ ಹುಬ್ಬು ಮದನನ ಮುರಿದ ಬಿಲ್ಲಿನಂತೆ ತೋರು ತ್ತಿದ್ದಿತು. ಇದನ್ನು ನೋಡಿ ಅರಸನಿಗೆ ಸ್ವಲ್ಪ ಸಂಶಯವಾಯಿತು; ತಾನೆಲ್ಲವನ್ನು ಮರೆತಿರಬಹುದೆಂದು ಊಹಿಸಿದನು. ಆದರೆ ಯಾವ ಕಾರಣಕ್ಕಾಗಿ ಮರೆಯ ಬೇಕು? ಶಕುಂತಳೆಗಾತನು ಕನಿಕರದಿಂದ ಹೀಗೆಂದನು—"ಎಲೌ ಮಂಗ ಳಾಂಗಿಯೇ, ದುಷ್ಷಂತನ ಚರಿತ್ರವು ಪ್ರಸಿದ್ಧವಾದುದು. ಆದರೆ, ನಿನ್ನನ್ನು ಮದುವೆಯಾದ ಅರಿವಿಲ್ಲವಲ್ಲ?"

"ಮುಖದಲ್ಲಿ ಮಧುವನ್ನೂ ಹೃದಯದಲ್ಲಿ ವಿಷವನ್ನೂ ಇಟ್ಟ ಈತನ ಕೈ ಹಿಡಿದ ನಾನು ಸ್ವಚ್ಛಂದಚಾರಿಣಿಯಾದೆನಲ್ಲವೆ?" ಎಂದು ಶಕುಂತಳೆಯು ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಅತ್ತಳು.

ತಂಗಿ ಅಳುವುದನ್ನು ಕಂಡು ಸಮೀಪವೇ ನಿಂತ ಶಾರ್ಙ್ಗರವನು, "ತಾನು ಮಾಡಿದ ಕರ್ಮಕ್ಕೆ ಅಳುವಳು. ಆದುದರಿಂದಲೇ ಸ್ನೇಹವೆಂಬುದನ್ನು ಪರೀಕ್ಷಿಸಿ ಮಾಡತಕ್ಕದ್ದು; ಇಲ್ಲದಿದ್ದರೆ, ಸ್ನೇಹವೇ ವೈರವಾಗಿ ಪರಿಣಮಿ ಸುವುದು," ಎಂದು ಅರಸನಿಗೆ ವಾಗ್ಬಾಣವನ್ನು ಬಿಟ್ಟನು.

ಈ ಋಷಿಗಳು ಶಕುಂತಳೆಯ ಮಾತನ್ನೆ ನಂಬಿ, ತನ್ನನ್ನು ದೂಷಿಸುವ ರೆಂದು ದುಷ್ಷಂತನು ಅರಿತುಕೊಂಡನು. ಆತನು ಶಾರ್ಙ್ಗರವನಿಗೆಂದನು—"ಎಲೈ ತಪಸ್ವಿಯೆ, ಈಕೆಯನ್ನು ನಂಬಿ, ಪ್ರಸಿದ್ಧಚರಿತನಾದ ನನ್ನನ್ನು ದೂಷಿಸ ಬೇಡಿ."

ಶಾರ್ಙ್ಗರವ— "ಏನು ? ನಾವು ನಿನ್ನನ್ನು ದೂಷಿಸಿದೆವೆನ್ನುವಿಯಾ? ಯಾವಾಕೆ ಜನ್ಮಪ್ರಭೃತಿ ಮರೆಮೋಸವೆಂಬುದನ್ನು ಕೇಳ್ದರಿಯಳೋ ಆಕೆಯ ಮಾತು ಅಪ್ರಮಾಣವೆಂದಾದರೆ, ಪರವಂಚನೆಯನ್ನು ವಿದ್ಯೆಯೆಂದು ಅಭ್ಯಾಸ ಮಾಡುವವರು ಸತ್ಯವಚನಿಗಳಲ್ಲವೆ? ಭಲೆ! ಸಾಕುಮಾಡು, ಸಾಕುಮಾಡು."

ಅರಸನು—"ಎಲೇ ಸತ್ಯವಾದಿಯೇ, ನೀನೆಂದಂತೆ ನಾವೇ ವಂಚಕರಿರ ಬಹುದು. ಈಕೆಯನ್ನು ಬೇರೆ ವಂಚಿಸಿ ನಮಗೆ ಬರತಕ್ಕದ್ದೇನು?"

ಶಾರ್ಙ್ಗರವ—"ವಿನಿಪಾತವು!"

ಅರಸನು—"ಪುರುಕುಲೋತ್ಪನ್ನರು ವಿನಿಪಾತವನ್ನು ಬಯಸುವರೆಂಬು ದನ್ನು ನಂಬಲಾಗದು."

ಶಾರ್ಙ್ಗರವನು ಕೋಪದಿಂದ ಕಿಡಿಯಾಗಿದ್ದನು. ತಿರಿಗೊಮ್ಮೆ ಆತನ

ಸಹಪಾಠಿ ಶಾರದ್ವತನು ಮುಂದಕ್ಕೆ ಬಂದು, "ಅಣ್ಣ, ಪ್ರಶ್ನೋತ್ತರಗಳಿಂದ ಪ್ರಯೋಜನವೇನು? ಗುರುಗಳ ಸಂದೇಶವನ್ನಂತೂ ತಿಳಿಸಿರುವೆವು. ಸುಮ್ಮನಿರು. ನಾವು ಹೊರಟು ಹೋಗುವೆವು. ನೋಡು, ಈಕೆ ನಿನ್ನ ಮಡದಿ; ಈಕೆಯನ್ನು ಬಿಡುವುದಾರೆ ಬಿಡು. ಸ್ವೀಕರಿಸುವಿಯಾದರೆ ಸ್ವೀಕರಿಸು. ಹೆಂಡಿರಲ್ಲಿ ಸರ್ವತೋಮುಖವಾದ ಪ್ರಭುತ್ವವಂತೂ ಗಂಡಂದಿರಿಗಿರುವುದಷ್ಟೆ?" ಎಂದು ತೀರ್ಮಾನವಮಾಡಿದನು.

ಶಾರದ್ವತನು ಹೊರಟನು. ಶಾರ್ಙ್ಗರವನೂ ಆತನನ್ನು ಅನುಸರಿಸಿದನು. ಋಷಿಗಳೆಲ್ಲರೂ ಹಿಂಬಾಲಿಸಿದರು. ಗೌತಮಿ ಮಾತ್ರ ಕದಲಲಿಲ್ಲ; ಆಕೆ ಶಕುಂತಳೆಯೊಡನೆ ಇದ್ದಳು. ಶಾರದ್ವತನು ಗೌತಮಿಯನ್ನು ಕರೆದು, "ಗೌತಮಿ, ಮುಂದಕ್ಕೆ ಹೋಗು," ಎಂದೊಡನೆಯೆ ಅವಳೂ ನಡೆದುಬಿಟ್ಟಳು. ಶಕುಂತಳೆಯು ನಡುಗಿದಳು. ಕಪಟಿಯಾದ ಅರಸನು ತನ್ನನ್ನು ವಂಚಿಸಿದ ನೆಂದಳು. "ಈ ಧೂರ್ತನಂತೂ ನನಗೆ ಮೋಸವಿತ್ತನು; ನೀವೂ ನನ್ನನ್ನು ಬಿಟ್ಟು ಬಿಡುವಿರಾ?" ಎಂದು ಶಕುಂತಳೆ ತನ್ನ ಒಡನಾಡಿಗಳ ಹಿಂದಕ್ಕೆ ನಡೆದಳು. ಶೋಕಾಕುಲೆಯಾಗಿ ತಮ್ಮ ಹಿಂದಕ್ಕೆ ನಡೆದು ಬರುತ್ತಿರುವ ಪುತ್ರಿಕೆಯನ್ನು ಕಂಡು ಗೌತಮಿ ನಿಂತಳು. ತಾಯಿಯಿಲ್ಲದ ಮಗುವನ್ನು ಹೊಟ್ಟೆಯ ಮಗುವ ನ್ನೆಂಬಂತೆ ಸಾಕಿಸಲಹಿದ್ದಳು. "ವತ್ಸ ಶಾರ್ಙ್ಗರವ, ನಿಲ್ಲು. ಕೈಹಿಡಿದ ಗಂಡನೇ ಕ್ರೂರನಾಗಲು ನನ್ನ ಮಗು ಏನು ಮಾಡೀತು?" ಎಂದು ಕಣ್ವಶಿಷ್ಯನೊಡನೆ ಮುದುಕಿ ಬಿನ್ನವಿಸಿದಳು. ಮುನಿದ ಶಾರ್ಙ್ಗರವನು ಫಕ್ಕನೆ ಹಿಂತಿರುಗಿದನು.

ಶಕುಂತಳೆಯನ್ನು ದುರದುರನೆ ನೋಡಿ, "ದೋಷದೃಷ್ಟಿಯುಳ್ಳ ಹೆಂಗಸೇ! ಏನು ಮಾಡುತ್ತಿರುವೆ? ಸ್ವಾತಂತ್ರ್ಯವನ್ನು ಅವಲಂಬಿಸಿದೆಯಾ?" ಎಂದು ಆತನು ಗುಡುಗಿಬಿಟ್ಟನು. ಶಕುಂತಳೆಯೊಮ್ಮೆಗೆ ದೃಷ್ಟಿಯನ್ನು ತನ್ನ ಗಂಡ ನೆಡೆಗೆ ಬೀರಿದಳು. ಆತನು ಮಾತೆತ್ತಲಿಲ್ಲ. ಮಂಜಿನ ಭರಕ್ಕೆ ಬಳಕುವ ಹೂವಿನಂತೆ ಶಕುಂತಳೆ ನಡುಗಿದಳು. ಶಾರ್ಙ್ಗರವನು ಮತ್ತೆ, "ಶಕುಂತಳೆ, ಅರಸಾಡಿದಂತೆ ನೀನು ದುಷ್ಟೆಯಾದರೆ, ತಂದೆಗೆ ಬಾಹಿರಳು. ಪರಿಶುದ್ಧೆ ಯಾದರೆ ಪತಿಕುಲದಲ್ಲಿ ದಾಸಿಯಾಗುವುದೂ ನಿನಗುಚಿತವು. ಆದ್ದರಿಂದ ನಿಲ್ಲು. ತೆರಳುವವರು ನಾವು," ಎಂದು ತಂಗಿಗೆಂದನು. ಹೊರಟುಹೋಗುವ ಋಷಿಗಳನ್ನು ಕಂಡು ಅರಸನು ಎದ್ದು, "ಎಲೈ ತಪಸ್ವಿಗಳೆ, ಈಕೆಯನ್ನಿಲ್ಲಿ ಬಿಟ್ಟು ಹೋಗಬೇಡಿರಿ. ಚಂದ್ರನು ನೈದಿಲೆಯನ್ನೆ ಅರಳಿಸುವನು. ಸೂರ್ಯನು

ಕಮಲವನ್ನೆ ವಿಕಾಸಗೊಳಿಸುವನು. ವಶಿಗಳಾದವರು ಪರಕಳತ್ರವನ್ನು ಕಣ್ಣೆತ್ತಿ ನೋಡರು," ಎಂದು ಆಜ್ಞೆಯಿತ್ತನು. "ನಿನಗೇನು ಹೆದರಿಕೆ? ಮತ್ತೊಬ್ಬಳ ಸಂಗದಿಂದ ಎಲ್ಲವನ್ನು ಮರತೆಯಾದರೆ ನಿನಗೇನು ಹೆದರಿಕೆ?" ಎಂದು ಹೇಳುತ್ತ ಹಿಂತಿರುಗದೆ ನಡೆದುಬಿಟ್ಟನು ಶಾರ್ಙ್ಗರವನು.

ಅರಸನಿಗೆ, ತಾನೆಲ್ಲವನ್ನು ಮರೆತಿರಬಹುದೊ, ಈ ಶಕುಂತಳೆಯು ಹುಸಿಯಾಡುತ್ತಿರಬಹುದೊ, ಎಂಬುದು ತಿಳಿಯಲಿಲ್ಲ. ಆತನಿಗೆ ಅವಳನ್ನು ನಿರಾಕರಿಸಲೂ ಸ್ವೀಕರಿಸಲೂ ಸಾಧ್ಯವಾಗಲಿಲ್ಲ. ನಿರಾಕರಿಸಿದರೆ, ದಾರತ್ಯಾಗಿಯಾಗಬಹುದು; ಸ್ವೀಕರಿಸಿದರೆ ಪರಸ್ತ್ರೀಸ್ಪರ್ಶಪಾಂಸುಲನಾಗಬಹುದು. ಆತನು ಏನು ಮಾಡಬೇಕೆಂದು ತೋಚದೆ ತನ್ನ ಪುರೋಹಿತನೊಡನೆ ಇದರ ಗುರುಲಾಘವವನ್ನು ಕೇಳಿದನು. ಪುರೋಹಿತನು ಸ್ವಲ್ಪ ಆಲೋಚಿಸಿ ಶಕುಂತಳೆಯು ಹೆರುವವರೆಗೆ ತನ್ನಲ್ಲಿರಲೆಂದು ತನ್ನ ಅಭಿಪ್ರಾಯವನ್ನು ಹೇಳಿದನು. ಏಕೆಂದರೆ, ಅರಸನು ಚಕ್ರವರ್ತಿಗುಣೋಪೇತನಾದ ಪುತ್ರನನ್ನು ಪಡೆಯುವನೆಂಬುದು ಋಷಿವಚನವಿದ್ದಿತು. "ಶಕುಂತಳೆಯ ಮಗನು ಸರ್ವಲಕ್ಷಣಸಂಪನ್ನನಾದರೆ ಈಕೆಯನ್ನು ರಾಣಿವಾಸಕ್ಕೆ ಸೇರಿಸುವುದು. ಇಲ್ಲದಿದ್ದರೆ ತವರಿಗೆ ಕಳುಹಿಸಿಕೊಡುವುದು," ಎಂದು ಪುರೋಹಿತನು ನಿಷ್ಕರ್ಷೆಮಾಡಿದನು.

ಅರಸನು ಒಪ್ಪಿದನು. ಪುರೋಹಿತನು ಶಕುಂತಳೆಯನ್ನು ಸಂಗಡ ಕರೆಕೊಂಡು ಮನೆಯತ್ತ ತೆರಳಿದನು. ಗೌತಮಿಯು ಮತ್ತು ಮುನಿಶಿಷ್ಯರ ಗತಿ ಮುಂದೇನಾಯ್ತೆಂದು ತಿಳಿಸಲಾರೆವು. ಶಕುಂತಳೆಯೊಡನೆ ಬಂದವರಿಗೆ ಮೃಷ್ಟಾನ್ನಭೋಜನದ, ಅಭ್ಯಂಗಸ್ನಾನದ ಮನ್ನಣೆಯಾಗಬೇಕಿತ್ತು. ತವರಿನವರನ್ನು ಅತ್ತೆ, ಭಾವ, ಎಂದು ಅರಸನು ಉಪಚರಿಸಬೇಕಿತ್ತು. ಉಪಚಾರವಿಲ್ಲ; ಊಟ ಉಡುಗೊರೆ ಇಲ್ಲ. ಬಂದವರು ಬಂದಂತೆಯೆ ತೆರಳಿದರು.

ಪುರೋಹಿತನೊಡನೆ ಶಕುಂತಳೆ ಬಿಕ್ಕಿಬಿಕ್ಕಿ ಅಳುತ್ತ ನಡೆಯುತ್ತಿದ್ದಳು. ಆಕೆ ತನ್ನ ತೋಳ್ಗಳನ್ನೆತ್ತಿ ತನ್ನ ಹತಭಾಗ್ಯವನ್ನು ಹಳಿಯುತ್ತ, "ಎಲೈ ಭಗವತಿ ವಸುಧೆ, ನನಗೋಸ್ಕರ ಬಾಯ್ಯನ್ನು ತೆರೆ"ಯೆಂದೆನ್ನುವಾಗ ಎಂತಹ ಹೃದಯವೂ ಕರಗುತ್ತಿತ್ತು. ಆಗ ತಾನೆ ಆಕಾಶದಿಂದ ಪ್ರಭಾಮಂಡಲವುಳ್ಳ ಜ್ಯೋತಿಯೊಂದು ಕೆಳಗಿಳಿದು ಶಕುಂತಳೆಯನ್ನು ಆಕಾಶಕ್ಕೆ ಒಯ್ದುಬಿಟ್ಟಿತು. ಈ ಅದ್ಭುತವನ್ನು ಕಂಡು ಎಲ್ಲವರೂ ಬೆಕ್ಕಸಬೆರಗಾದರು. ಅರಸನು ಈ ವರ್ತಮಾನ ಕೇಳಿ ನಿರ್ಲಿಪ್ತನಂತೆ ವರ್ತಿಸಿದನು. "ನಾವಂತೂ ಅವಳನ್ನು

ತಿರಸ್ಕರಿಸಿದವರು. ಸುಮ್ಮನೆ ತರ್ಕಮಾಡುವುದು ನಿಷ್ಫಲ"ವೆಂದು ಅರಸನೆಂದನು. ಹಾಗೆ ತನ್ನ ಮನಸ್ಸನ್ನು ಸಮಾಧಾನಮಾಡಿಕೊಂಡರೂ ಮನಸ್ಸಿಗೆ ಕಳವಳವಿತ್ತು. ಹಾಗಿದ್ದರೂ ತಾನು ನಿರ್ದೋಷಿಯೆಂದು ಮನಸ್ಸು ಅವನನ್ನು ನಂಬಿಸುತ್ತಿತ್ತು.

---

೧೦. ಪಟಪರಿವರ್ತನ

ದುಷ್ಯಂತ ಮಹಾರಾಜನು ಶಕುಂತಳೆಯನ್ನು ತಿರಸ್ಕರಿಸಿದ ಕೆಲವು ದಿವಸಗಳ ನಂತರ ಶಚೀತೀರ್ಥದ ಬೆಸ್ತನೊಬ್ಬನು ಉಂಗುರವೊಂದನ್ನು ರಾಜಧಾನಿಗೆ ಮಾರಲು ತಂದಿದ್ದನು. ಬಂಗಾರದ ಆ ಉಂಗುರದಲ್ಲಿ ವಜ್ರದಿಂದ ಕೆಲವು ಅಕ್ಷರಗಳು ಕೆತ್ತಲ್ಪಟ್ಟಿದ್ದುವು. ನಗರರಕ್ಷಕರು ಕೈಯಲ್ಲಿ ಅನರ್ಘವಾದ ಉಂಗುರವಿದ್ದ ಆ ಬೆಸ್ತನನ್ನು ಬಂಧಿಸಿದರು. ಕಳ್ಳನೆಂದು ಹೊಡೆದರು. ಬೆಸ್ತನು ತನಗೆ ಆ ಉಂಗುರವು ಸೇರಿದ ವಿಷಯವನ್ನು ಇದ್ದಂತೆ ವಿವರಿಸಿದರೂ, ಆ ಅಂಬಿಗನು ಅರಸನ ಉಂಗುರವಿದನ್ನು ಕದ್ದಿರಬೇಕೆಂದು ಅವರು ಎಣಿಸಿದ್ದರು. ಏಕೆಂದರೆ ಅದರಲ್ಲಿ "ದುಷ್ಯಂತ ಮಹಾರಾಜ" ಎಂದು ಏಳಕ್ಷರಗಳ ಪ್ರಭಾಪಂಕ್ತಿಯಿದ್ದಿತು. ನಾನು 'ಶಚೀತೀರ್ಥದವನೆಂದೂ ಎಂದಿನಂತೆ ಮೀನು ಹಿಡಿಯುವಾಗ ಸಿಕ್ಕಿದ ಮೀನಿನ ಹೊಟ್ಟೆಯಲ್ಲಿ ಈ ಉಂಗುರವು ಸಿಕ್ಕಿತೆಂದೂ ತನ್ನನ್ನು ಕ್ಷಮಿಸಬೇಕೆಂದೂ ಅಂಗಲಾಚಿ ಬೆಸ್ತನು ಬೇಡಿಕೊಂಡನು. ಉಂಗುರದ ದುರ್ಗಂಧವಿನ್ನೂ ಮಾಸಿದ್ದಿಲ್ಲ. ಅದರ ಆಕೃತಿಯಂತೂ ವಿರೂಪವಾಗಿತ್ತು. ಬೆಸ್ತನು ಹೇಳುವಂತೆ ಇರಲೂಬಹುದೆಂದು ರಾಜದೂತರಿಗೆ ಕಡೆಗೆ ಅನ್ನಿಸಿತು. ಉಂಗುರವನ್ನು ಅರಸನಿಗೆ ತೋರಿಸಿ, ಮತ್ತೆ ಬೆಸ್ತನ ವಿಷಯದಲ್ಲಿ ಮುಂದುವರಿಸಬಹುದೆಂದು ರಾಜದೂತನೊಬ್ಬನು ರಾಜಸದನಕ್ಕೆ ನಡೆದನು.

ಉಂಗುರವನ್ನು ಕಂಡೊಡನೆಯೇ ಅರಸನ ಮನಸ್ಸಿನಲ್ಲಿ ಪಟಪರಿವರ್ತನವಾಯಿತು. ಕುಳಿತವನು ಎದ್ದು ನಿಂತು, "ಆಹಾ! ಶಕುಂತಳೆಯೆ! ಏನ ನ್ಯಾಯುವಾಯಿತು?" ಎಂದು ಕಣ್ಣಲ್ಲಿ ನೀರುತಂದನು. ಸ್ವಭಾವ ಗಂಭೀರನಾದರೂ, ಉಂಗುರವನ್ನು ಕಂಡೊಡನೆಯೆ ಆತನ ಹೃದಯುವು ದ್ರವಿಸಿತು. ಚಳಿಗಾಲದಲ್ಲಿ ಗಡ್ಡೆಕಟ್ಟಿದ ಹಿಮವು ಬೇಸಗೆಯಲ್ಲಿ ಕರಗಿ ನೀರಾಗುವಂತೆ, ಅರಸನ ಹೃದಯುವು ದ್ರವಿಸಿ, ಕಂಬನಿಯಾಗಿ ಸುರಿದು ಆತನ ಗಂಡಸ್ಥಳವು ಪ್ಲಾವಿತವಾಯಿತು. ಕಣ್ವಮಹರ್ಷಿಯ ಪುತ್ರಿಯು ಕೆಲವು ದಿನಗಳ ಹಿಂದೆ

ತನ್ನ ಆಸ್ಥಾನಕ್ಕೆ ಬಂದು, ಆರ್ಯಪುತ್ರ ಎಂದು ಸಂಬೋಧಿಸಿದಾಗ ತಾನೇ ಅವಳನ್ನು ನಿರ್ದಯನಂತೆ, ಕಟುಕನ ಹಾಗೆ ತಿರಸ್ಕರಿಸಿದೆನೆಂದು ಆತನು ಮರ ಗೊಂಡನು. ಸಾಕ್ಷಾತ್ ಪ್ರಿಯೆಯು ಸಮಕ್ಷಮದಲ್ಲಿ ನಿಂತು ನಾನಾ ವಿಧಗಳಿಂ ಎಚ್ಚರಪಡಿಸಿದರೂ ಮಲಗಿದ ದುಷ್ಟ ಹೃದಯವು ಇಂದು ಕೇವಲ ಉಂಗು ವನ್ನು ಕಂಡೊಡನೆಯೆ ಎದ್ದು ಅತಿಶಯವಾದ ದುಃಖಕ್ಕೇಕೆ ಈಡಾಯಿತೆಂದ ಆತನಿಗೆ ತಿಳಿಯಲಿಲ್ಲ. ತನ್ನಿಂದ ತಿರಸ್ಕೃತಳಾಗಿ, ಮುನ್ನಡೆಯದಿರೆಂದು ಗುರ ಶಿಷ್ಯನಿಂದ ಆಜ್ಞಾಪಿತಳಾಗಿ, ತನ್ನೆಡೆಗೆ ದೀನದೃಷ್ಟಿಯನ್ನು ತಿರುಗಿಸಿದ ಶಕುಂತಳೆಯ ದೃಶ್ಯವು ದುಷ್ಷಂತ ಮಹಾರಾಜನ ಹೃದಯವನ್ನು ವಿಷದ ಬಾಣದಂತೆ ಚುಚ್ಚಿತು ಹೃದಯದ ರುಧಿರವು ನೀರಾಗಿ ಕಣ್ಣುಗಳ ಮಾರ್ಗವಾಗಿ ಹರಿದು, ಕೈಯಲ್ಲಿದ್ದ ವಜ್ರದುಂಗುರವನ್ನು ತೊಯ್ದು ಬಿಟ್ಟಿತು; ಸುತ್ತಲಿದ್ದ ವಿಶ್ವವೆಲ್ಲವನ್ನೂ ಮುಳುಗಿಸಿ ಬಿಟ್ಟಿತು.

ಪ್ರಿಯೆಗೆ ತಾನಿತ್ತ ಉಂಗುರವನ್ನು ಸಕಾಲದಲ್ಲಿ ಒದಗಿಸಿ ಮಹದುಪಕಾರ ವನ್ನು ಮಾಡಿದ ಅಂಬಿಗನಿಗೆ ತಕ್ಕ ಪುರಸ್ಕಾರವನ್ನು ಮಾಡಲಿಕ್ಕೆ ಅರಸನು ರಾಜ ದೂತನಿಗೆ ಅಪ್ಪಣೆಯಿತ್ತನು. ಮಾಢವ್ಯನನ್ನು ಕರೆದು ಏಕೆ ತನಗೆ ಶಕುಂತಳೆಯ ನೆನಪುಂಟುಮಾಡಲಿಲ್ಲವೆಂದು ಕೇಳಿದನು. "ಎಲ್ಲವನ್ನೂ ಹೇಳಿ, ಕಡೆಗೆ ಇದು ಪರಿಹಾಸವೆಂದೆಯಲ್ಲವೆ? ನಾನೂ ಹಾಗೆಯೇ ತಿಳಿದುಕೊಂಡೆ," ಎಂದು ಮಾಢವ್ಯನು ತನ್ನ ತಪ್ಪನ್ನು ಅರಸನ ತಲೆಯ ಮೇಲಿಟ್ಟನು. ಭವಿಷ್ಯವನ್ನು ಮೀರಲಳವಲ್ಲೆಂದು ಅರಸನನ್ನು ಮತ್ತೆ ಸಂತಯಿಸಿದನು.

ಶಕುಂತಳೆಯ ವ್ಯಾಪಾರವೆಲ್ಲವೂ ಸ್ವಪ್ನದಂತೆ ತೋರಿ, ಮಾಯೆಯಂತೆ ನಲಿದು, ಭ್ರಮೆಯಂತೆ ಕ್ಲೇಶಪಡಿಸಿ, ಅಲ್ಪ ಪುಣ್ಯಫಲವಾಗಿ ಪರಿಣಮಿಸಿ, ಇನ್ನೊಮ್ಮೆಗೆ ಅವಳು ಬಾರದಂತಾಯಿತಲ್ಲ ಎಂದು ದುಷ್ಷಂತನು ದುಃಖಿಸಿದನು. ತಾನು ಇನ್ನೆಂದು ಪ್ರಿಯೆಯೊಡನೆ ಸಮಾಗಮ ಪಡೆಯುವಂತಾಗುವುದೆಂದು ಬಹಳವಾಗಿ ದುಃಖಿಸಿದನು. ಬಳಿಗೈದಿ ಬಂದ ಸಾಕ್ಷಾತ್ ಸಹಧರ್ಮಿಣಿಯನ್ನು ನಿರಾಕರಿಸಿ, ಈಗ ಅವಳ ಚಿತ್ರವನ್ನು ಮನಸ್ಸಿನ ಭಿತ್ತಿಯಲ್ಲಿ ಬರೆಯಬೇಕಾಯಿ ತಲ್ಲ? ಎಂದು ಅಂದುಕೊಂಡನು. ಮಾರ್ಗದಲ್ಲಿ ಬಂದ ಹೊಳೆಯನ್ನು ದಾಟಿ, ಬಿಸಿಲುಗುದುರೆಯ ನೀರನ್ನು ಬಯಸುವಂತಾಯಿತಲ್ಲ? ಎಂದು ಶೋಚಿಸಿದನು. ಆತನ ಮನಸ್ಸಿನಲ್ಲಿ ಆಲೋಚನೆಗಳು ಒಂದರ ನಂತರ ಒಂದು ಎದ್ದು ಬಂದುವು; ಸಾವಿರ ಮನೋರಥಗಳು ಉತ್ಪನ್ನವಾದುವು. ವರ್ಷಾಕಾಲದಲ್ಲಿ ಗಂಗಾ

ನದಿಯ ನೀರು ಹರಿಯುವಾಗ ನೀರಿನ ರಭಸಕ್ಕೆ ತಟದ ಮಣ್ಣು ಮೇಲಿಂದ ಮೇಲೆ ಕೆಳಜಾರುವಂತೆ, ಅರಸನ ಮನಸ್ಸಿನಲ್ಲಿ ಮನೋರಥಗಳು ಹುಟ್ಟು ತ್ತಿದ್ದುವು; ಹುಟ್ಟಿದಂತೆ ವಿಲಯಗೊಳ್ಳುತ್ತಿದ್ದುವು.

ದುಷ್ಯಂತನು ತನ್ನ ಪ್ರಿಯೆಯ ಭಾವಚಿತ್ರವೊಂದನ್ನು ಬರೆದನು. ಮೃಗಯಾವಿಹಾರಿಯಾಗಿ ಕಣ್ವಾಶ್ರಮಕ್ಕೆ ತೆರಳಿದಾಗ ತಾನು ಶಕುಂತಳೆಯನ್ನು ಮೊದಲು ಯಾವ ಸ್ಥಿತಿಯಲ್ಲಿ ಕಂಡಿದ್ದನೊ, ಅದೇ ಸ್ಥಿತಿಯಲ್ಲಿ ಅವಳ ಭಾವ ಚಿತ್ರವನ್ನು ಬರೆದನು. ಶಕುಂತಳೆಯು ಹೆದರಿದವಳಂತೆ ತೋರುತ್ತಿದ್ದಳು. ಆಕೆಯು ಇಬ್ಬರು ಸಖಿಯರಿಂದ ಒಡಗೂಡಿದ್ದಳು. ಅವಳ ಮುಡಿಯು ಸಡಿಲಾದುದರಿಂದ ಕುಸುಮಗಳು ಜಾರುವಂತೆ ತೋರುತ್ತಿದ್ದುವು. ಅವಳ ಮುಖದಲ್ಲಿ ಬೆವರಿನ ಹನಿಗಳು ಹೊಮ್ಮುತ್ತಿದ್ದುವು. ಮರಗಳಿಗೆ ನೀರುಣಿಸಿ ಆಯಾಸವಾದುದರಿಂದ ಮಾವಿನ ಮರದ ಪಕ್ಕದಲ್ಲಿ ಬಳಲಿ ನಿಂತುಕೊಂಡಿದ್ದಳು. ಇದಿರಿನಲ್ಲಿ ಜೇನನ್ನೀಂಟುವ ಆಶೆಯಿಂದ ದುರುದುಂಬಿಯೊಂದು ಆಕೆಯ ವದನ ಸರೋಜಕ್ಕೆ ಎರಗುತ್ತಿತ್ತು. ಕೆಂದಾವರೆಯಂತಿದ್ದ ತನ್ನ ಕೈಯಿಂದ ತನ್ನ ಮುಖವನ್ನು ಮುಚ್ಚಿಕೊಂಡು ಭೀತಳಾಗಿದ್ದಳು.

ಚಿತ್ರವನ್ನು ಅರಸನು ಇನ್ನೂ ಪೂರ್ಣಮಾಡಿದ್ದಿಲ್ಲ. ಮಾಲಿನೀತೀರದ ಮಳಲಿನಲ್ಲಿ ಹಂಸಗಳು ಆಡುವುದನ್ನು ತೋರಿಸಿದ್ದಿಲ್ಲ, ಆ ನದಿಯ ಸಮೀಪಕ್ಕೆ ಕೃಷ್ಣಮೃಗಗಳು ಸುಳಿಯುವ ಗೌರೀಗುರು ಗಿರಿಯ ಬುಡವನ್ನು ಬರೆದಿದ್ದಿಲ್ಲ. ಮುನಿಗಳು ಒದ್ದೆ ವಸ್ತ್ರವನ್ನು ಒಣಗಲು ಬಿಟ್ಟ ಮರಗಳ ಅಡಿಯಲ್ಲಿ ತನ್ನ ಶೃಂಗಾಗ್ರದಿಂದ ಸಹಚರಿಯ ವಾಮನಯನವನ್ನು ತುರಿಸುವ ಕೃಷ್ಣಮೃಗವನ್ನು ಕಾಣಿಸಿದ್ದಿಲ್ಲ. ಅಷ್ಟುಮಾತ್ರವಲ್ಲ, ತಾನು ಮೊದಲು ಕಂಡಾಗ ಶಕುಂತಳೆಯು ತನ್ನ ಕಿವಿಯಲ್ಲಿ ಶಿರೀಷ ಕುಸುಮವೊಂದನ್ನು ಮುಡಿದುಕೊಂಡಿದ್ದಳು. ಅದರ ಕೇಸರಗಳು ಆಕೆಯ ಗಂಡಸ್ಥಳದ ವರೆಗೂ ಬಂದಿದ್ದುವು. ಶಕುಂತಳೆಯು ದುಷ್ಟಭೃಂಗಕ್ಕೆ ಹೆದರಿ, "ರಕ್ಷಿಸಿರಿ" ಎನ್ನುವಾಗ ಯಾವುದಾವುದು ತನಗೆ ರಮಣೀಯವಾಗಿ ತೋರಿಬಂದುದೋ ಅದೆಲ್ಲವನ್ನೂ ಬರೆಯಬೇಕೆಂದಿದ್ದನು.

ಅರಸನು ಚಿತ್ರವನ್ನು ತಲ್ಲೀನನಾಗಿ ಬರೆಯುತ್ತಿದ್ದನು. ಸಮೀಪವಿದ್ದ ಮಾಢವ್ಯನೆಂದನು – "ಪೂಜ್ಯಳಾದವಳೀಕೆ ಕೈಯಿಂದ ಮುಖ ಮುಚ್ಚಿಕೊಂಡು ಹೆದರಿದವಳಂತೆ ತೋರುವಳೇಕೆ? ಈ ದುರುದುಂಬಿಯು ಆಕೆಯ ಮುಖಕ್ಕೆ ಎರಗುತ್ತಿರುವುದೆ?" ಅರಸನು ವಿಶ್ವವೆಲ್ಲವನ್ನೂ ಮರೆತುಬಿಟ್ಟಿದ್ದನು. ಆತನ

ಮನಸ್ಸು ಕಣ್ವಾಶ್ರಮದತ್ತ ಪಯಣ ಬೆಳಸಿ, ಶಕುಂತಳೆಯಿಲ್ಲದಿದ್ದರೂ ಅಲ್ಲಲ್ಲಿಯೆ ಸುಳಿಯುತ್ತಿದ್ದಿತು. ಉದ್ವಿಗ್ನನಾದ ಅರಸನು, "ಈ ದುಷ್ಟ ಭೃಂಗವನ್ನು ಅಟ್ಟು" ಎಂದು ಮಾಢವ್ಯನಿಗೆ ಆಜ್ಞೆಯಿತ್ತನು.

"ದುಷ್ಟಶಿಕ್ಷಕನಾದ ನೀನೇ ಅಟ್ಟುವುದು ಉಚಿತವಲ್ಲವೆ?" ಎಂದನು ಮಾಢವ್ಯನು.

ಅರಸನು ರಕ್ಷಾಶಿಕ್ಷೆಯಲ್ಲಿ ದಕ್ಷನಾಗಿದ್ದನು. ತನ್ನ ಪ್ರಿಯೆಯ ಸಮೀಪಕ್ಕೆ ಬಂದ ದುಷ್ಟ ಭೃಂಗವನ್ನು ಸಾಮೋಪಾಯದಿಂದ ಹೊರಡಿಸಬೇಕೆಂದಾತನು ಹೀಗೆಂದನು – "ಎಲೈ ಕುಸುಮಲತೆಗಳಿಗೆ ಪ್ರಿಯನಾದ ಅತಿಥಿಯೆ! ನಿನ್ನ ಸಹಚರಿಯು ಈ ಕುಸುಮದಲ್ಲಿರುವಳು, ಹಸಿದಿರುವಳು. ನಿನ್ನೊಳು ಅನುರಾಗವಿರುವುದರಿಂದ ನಿನ್ನನ್ನು ಬಿಟ್ಟು ಜೇನನ್ನು ಕುಡಿಯಲಾರಳು. ಸಹಚರಿಯೆಡೆಗೆ ಪೋಗು. ಇಲ್ಲಿ ಬಿದ್ದು ದುಃಖವನ್ನು ಅನುಭವಿಸಬೇಡ."

ದುಷ್ಟ ಭೃಂಗವು ಅರಸನ ಆಜ್ಞೆಗೆ ವಿಧೇಯವಾಗಿ ನಡೆಯಲಿಲ್ಲ. "ಈ ಜಾತಿ ಹೋಗುವಂತಹುದಲ್ಲ. ಬಹು ಕೆಟ್ಟದ್ದು" ಎಂದ ಮಾಢವ್ಯನ ಮಾತು ಕೇಳಿ ಅರಸನಿಗೆ ರೇಗಿತು. "ಒಹೊ, ಎಲೆ ತುಂಬಿಯೆ! ನನ್ನಾಜ್ಞೆಯಂತೆ ನಡೆಯಲಾರೆ! ಹಾಗಾದರೆ ಕೇಳು – ಯಾರಿಂದಲೂ ಸ್ಪೃಷ್ಟವಾಗದೆ, ಬಾಲತರು ಪಲ್ಲವದಂತೆ ಸುಂದರವಾದ ನನ್ನ ಪ್ರೇಯಸಿಯ ಬಿಂಬಾಧರವನ್ನು ಮುಟ್ಟುವಿಯಾದರೆ, ನಿನ್ನನ್ನು ಕಮಲೋದರವೆಂಬ ಬಂಧನವನ್ನು ಸೇರಿಸುವೆನು. ತಿಳಿದಿರಲಿ" ಎಂದು ಅರಸನು ಎಂದನು.

"ಇಂತಹ ತೀಕ್ಷ್ಣ ದಂಡಕ್ಕೆ ಭಯಪಡದೆ ಇದ್ದೀತೇ," ಎಂದು ಮಾಢವ್ಯನು ನಕ್ಕನು. ಅರಸನು ಉನ್ಮತ್ತನಾಗಿದ್ದನೆಂದು ಆತನು ತಿಳಿದಿದ್ದನು. "ಇದು ಚಿತ್ರವಲ್ಲವೆ?" ಎಂದು ಅರಸನಿಗೆ ಮತ್ತೆ ಎಚ್ಚರಕೊಟ್ಟನು.

ಚಿತ್ರವಿದೆಂದು ನೆನಪುಂಟಾದೊಡನೆ, ಅರಸನು ಕಟ್ಟಿದ ಗಾಳಿಗೋಪುರವೆಲ್ಲ ನೆಲಕ್ಕೆ ಬಿದ್ದಿತು. ಶಕುಂತಳೆ ಇರುವಳೆಂದು ನಂಬಿ, ಆಕೆಯ ದರ್ಶನಸುಖವನ್ನು ತನ್ಮಯನಾಗಿ ಅನುಭವಿಸುತ್ತಿರಲು, ಸ್ಮೃತಿಹುಟ್ಟಿಸಿ ತಿರುಗೊಮ್ಮೆ ಆತನ ಕಾಂತೆಯನ್ನು ಚಿತ್ರಗತಳನ್ನಾಗಿ ಮಾಢವ್ಯನು ಮಾಡಬಹುದಿತ್ತೆ? ಅರಸನ ಕಣ್ಣಲ್ಲಿ ನೀರು ತುಂಬಿತು. ಅವನ ದುಃಖಕ್ಕೆ ವಿಶ್ರಾಂತಿಯಿರಲಿಲ್ಲ. ಕನಸಿನಲ್ಲಾದರೂ ಅವಳೊಡನೆ ಕೂಡುವೆನೆಂದರೆ, ಆತನಿಗೆ ನಿದ್ದೆಯು ಬರುತ್ತಿದ್ದಿಲ್ಲ; ಚಿತ್ರಾರ್ಪಿತಳನ್ನು ಕಾಣುವನೆಂದರೆ, ಕಣ್ಣಿಂದ ಇಳಿವ ಕಂಬನಿ ಬಿಡುತ್ತಿದ್ದಿಲ್ಲ.

ಆಕಾಶದಿಂದ ಹಠಾತ್ತಾಗಿ ಬಂದ ಪ್ರಭಾಮಂಡಲವುಳ್ಳ ಜ್ಯೋತಿಯು ಶಕುಂತಳೆಯನ್ನು ಎಲ್ಲಿಗೊಯ್ದಿತೆಂದು ಯಾರಿಗೂ ತಿಳಿಯಲೊಲ್ಲದು. ಅರಸನು ವಿರಹದುಃಖದಿಂದ ಬೆಂದನು; ಅಯೋಗ್ಯವಾದುದನ್ನು ಗೈದೆನೆಂದು ಪಶ್ಚಾತ್ತಾಪ ಪಟ್ಟನು. ಮುನಿಶಿಷ್ಯರಿಗೆ ತಾನಾಡಿದ ಮಾತು ತಿರುತಿರುಗಿ ನೆನಪಿಗೆ ಬರುತ್ತಿದ್ದಿತು. ಮಗಳನ್ನು ದೂಷಿಸಬೇಡವೆಂದು ಬೇಡಿದ ಮುದುಕಿಯ ಮಾತುಗಳಿಗೆ ನಕ್ಕು ಅವಮಾನಪಡಿಸಿದುದರ ಸ್ಮರಣೆಯಾಗುತ್ತಿತ್ತು. ಸಾಕ್ಷಾತ್ ಪ್ರಿಯೆಗೆ ತಿರಸ್ಕಾರಮಾಡಿದ ಚಿತ್ರವು ಕಣ್ಮುಂದು ನಿಲ್ಲುತ್ತಿತ್ತು. ಹಿಮಾಲಯದ ತಪ್ಪಲಿನ ಕಣ್ವಮಹರ್ಷಿಯು ಮಗಳಾದ ಶಕುಂತಳೆಯೊಡನೆ ಬಂದು – "ಎಲೈ ರಾಜನೆ, ನಿನ್ನ ಮಡದಿ ಈಕೆ; ಸ್ವೀಕರಿಸಿ ಬಾಳು," ಎಂದು ಹೇಳುತ್ತಿದ್ದರೆ, ತಾನು ಯಾವ ರೀತಿಯಲ್ಲಿ ವರ್ತಿಸಿ ಆತನ ಅಸಂತುಷ್ಟಿಗೆ ಕಾರಣನಾಗುತ್ತಿದ್ದನೊ? ಪ್ರಿಯಂವದಾನಸೂಯೆಯರೇ ಬಂದು, ಚಂದ್ರಸೂರ್ಯರಂತಿದ್ದ ಪ್ರಿಯಂವದಾನಸೂಯೆಯರೇ ಬಂದು – "ಗೆಳೆಯ, ಭೃಂಗದಂತೆ ಬಂದು, ಭೃಂಗದಂತೆ ಸುಳಿದು ಭೃಂಗದಂತೆ ಹಿಂತೆರಳಿದೆಯಾ?" ಎಂದೆನ್ನುವಾಗ ತಾನಾವ ರೀತಿ ಇರುತ್ತಿದ್ದನು? ಅಥವಾ ಚಂದ್ರಸೂರ್ಯರಿಲ್ಲದೆ ಭೂಮಿ ಕತ್ತಲಿಂದ ತುಂಬುವಂತೆ ಗೆಳತಿಯರ ಸಮೀಪವಿಲ್ಲದ ಶಕುಂತಳೆಯನ್ನು ಗುರುತಿಸಲಾರದಾದನೆ ಅರಸನು? ಒಂದು ಉಂಗುರದ ಪ್ರಭಾವದಿಂದ, ಕೇವಲವಾಗಿ ಅಚೇತನವಾದ ಉಂಗುರವೊಂದರ ಪ್ರಭಾವದಿಂದ, ಮರವೆಯು ಸಿಡಿದುಹೋಗುವುದಾದರೆ, ಪ್ರಿಯಂವದಾನಸೂಯೆಯರು ಅಲ್ಲಿಂದ ಹಸ್ತಿನಾವತಿಯ ವರೆಗೆ ನಡೆದು ಬಂದಿದ್ದರೆ ಎಲ್ಲವೂ ಸುಗಮವಾಗುತ್ತಿತ್ತಲ್ಲವೆ? ಛೆ, ಅದಾವ ಮಾತು? ಸಾಕ್ಷಾತ್ ಪ್ರಿಯೆಯು ಬಂದು ನಿಂತಾಗ ಗುರುತಾಗದಿದ್ದರೆ, ಪ್ರಿಯಂವದಾನಸೂಯೆಯರ ಕೂಡಿಕೆಯಿಂದೇನಾಗುವಂತಿತ್ತು? ಉಂಗುರಕ್ಕೆ ಶಕುಂತಳೆಯ ಕೋಮಲವಾದ ಬೆರಳಲ್ಲಿ ಚಿರಕಾಲ ಉಳಿಯುವ ಪುಣ್ಯವಿದ್ದಿಲ್ಲ; ಅಂತೆಯೆ ತನಗೂ ಕೆಲಕಾಲದ ದುಃಖದ ಸವಿಯನ್ನು ತಿಳಿಸುವಂತ ವಿಧಿ ಬರೆದಿದ್ದಿರಬೇಕು.

ದೀಪವಿದ್ದರೂ ಮರವೆಯ ಕಾರಣದಿಂದ ಅರಸನು ಅಂಧಕಾರವನ್ನು ಅನುಭವಿಸಿದನು. ದುರ್ವಾಸನ ಶಾಪವು ಮುಕ್ತವಾಗಿದ್ದರೂ, ಶಾಪಫಲದಿಂದ ಆತನು ವಿಮುಕ್ತನಾಗಿರಲಿಲ್ಲ. ತನ್ನ ನಾಡಿನಲ್ಲಿ ವಸಂತೋತ್ಸವವನ್ನು ಮಾಡಬಾರದೆಂದು ದುಷ್ಯಂತ ಮಹಾರಾಜನು ಕಟ್ಟಪ್ಪಣೆಯಿತ್ತನು. ವಸಂತನೂ ಕೂಡ ಆತನ ಆಜ್ಞೆಗೆ ಬಾಹಿರನಲ್ಲ. ಚಳಿಗಾಲವು ಕಳೆದುಹೋದರೂ ಪುಂಸ್ಕೋಕಿಲದ

ಕಂಠವು ಹೊರಹೊಮ್ಮುತ್ತಿದ್ದಿಲ್ಲ. ಮುಗುಳು ಹುಟ್ಟಿ ಬಹುಕಾಲವಾದರೂ, ಅದರಲ್ಲಿ ಪರಾಗವಾಗಲಿ, ಜೇನಾಗಲಿ ಬೆರೆಯಲಿಲ್ಲ; ವಿಕಾಸವಾಗದೆ ಮುಕು ಲಾವಸ್ಥೆಯಲ್ಲಿಯೆ ಉಳಿದಿತ್ತು.

---

೧೧. ಶಾಕುಂತಳ

ಸ್ವರ್ಗಲೋಕದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಘೋರ ಸಮರ ವುಂಟಾಯಿತು. ಕಾಲನೇಮಿಯೆಂಬ ರಾಕ್ಷಸಾಧಮನ ಮಕ್ಕಳು ಇಂದ್ರನಿಗೆ ವಿರೋಧ ನಿಂತಿದ್ದರು. ಸುರಾಸುರರ ಯುದ್ಧಗಳಲ್ಲಿ ಸುರರು ಯಾವಾಗಲೂ ದುಷ್ಯಂತನ ಸಹಾಯಸಂಪತ್ತಿಯಿಂದಲೆ ಜಯಶೀಲರಾಗುತ್ತಿದ್ದರು. ಇಂದ್ರನು ದುಷ್ಯಂತನಿಗೆ ಕರೆಕಳುಹಿಸಿದನು; ಬಂದು ತನಗೆ ಸಹಾಯವೀಯಬೇಕೆಂದನು. ಶಕುಂತಳಾವಿಯೋಗದಿಂದ ನಿರುತ್ಸಾಹಿಯಾದ ಅರಸನು ಗೆಳೆಯನ ಕರೆಯೆಂದು ಶರದ್ವಿತೀಯನಾಗಿ ಸ್ವರ್ಗಲೋಕಕ್ಕೆ ತೆರಳಿದನು. ದೇವಸೈನ್ಯದಲ್ಲಿ ಮುಖ್ಯವಾದ ಭಾಗವನ್ನು ವಹಿಸಿಕೊಂಡು, ರಾಕ್ಷಸರನ್ನೆಲ್ಲ ನಿರಾಯಾಸವಾಗಿ ಸೋಲಿಸಿ, ಅವರ ಹುಟ್ಟನ್ನಡಗಿಸಿದನು. ಸಂತುಷ್ಟನಾದ ಮಹೇಂದ್ರನು ತನ್ನ ಗೆಳೆಯನನ್ನು ನಾನಾ ವಿಧಗಳಿಂದ ಸನ್ಮಾನಿಸಿ, ಉಪಚರಿಸಿ, ಬೀಳ್ಕೊಟ್ಟನು.

ಮಾತಲಿಯೆ ಸಾರಥಿಯಾಗಿದ್ದ ಇಂದ್ರನ ರಥದಲ್ಲಿ ಕುಳಿತು ದುಷ್ಯಂತನು ಸ್ವದೇಶಕ್ಕೆ ಇಳಿಯುತ್ತಿದ್ದಾಗ ಸ್ವರ್ಗಲೋಕದ ದೇವತೆಗಳು ತನ್ನನ್ನು ಹೊಗಳು ವುದನ್ನು ಕಂಡನು. ಅವರಲ್ಲಿ ಕೆಲವರು ತಮ್ಮನ್ನು ರಾಕ್ಷಸರಿಂದ ರಕ್ಷಿಸಿದ ಮಹಾರಾಜನ ಚರಿತ್ರೆಯನ್ನು ಗಾಯನಯೋಗ್ಯವಾಗುವಂತೆ ರಚಿಸಿ, ತಮ್ಮ ಪ್ರೇಯಸಿಯರನ್ನು ಸಿಂಗರಗೊಳಿಸಿ ಉಳಿದ ಅಂಗರಾಗದ ವಿವಿಧ ಬಣ್ಣಗಳಿಂದ ಕಲ್ಪಲತಾಂಶುಕಗಳಲ್ಲಿ ಅದನ್ನು ಬರೆಯುತ್ತಿದ್ದರು. ರಥವು ಮೇಘಗಳ ಮಾರ್ಗವಾಗಿ ಇಳಿಯುವಾಗ ಅರಸನಿಗೆ ಮನುಷ್ಯಲೋಕವು ಆಶ್ಚರ್ಯಕರ ವಾಗಿಯೂ ರಮಣೀಯವಾಗಿಯೂ ಕಂಡುಬಂದಿತು. ಮೊದಲು ಶೈಲಗಳ ಶಿಖರಗಳು ಕಾಣುತ್ತ ಬಂದು, ಅನಂತರ ಆ ಶಿಖರಗಳಿಂದ ಭೂಮಿಯು ಕೆಳ ಗಿಳಿಯುವಂತೆ ತೋರಿತು. ತಮ್ಮ ತಮ್ಮ ಎಲೆಗಳ ರಾಶಿಯಲ್ಲಿ ಅಡಗಿದ ಮರಗಳು ಕ್ರಮೇಣ ಶಾಖಾಪ್ರದರ್ಶನವನ್ನು ಮಾಡಿ, ಕಣ್ಣಿಗೆ ಗೋಚರಿಸಿದುವು. ನೀರಿಲ್ಲದಂತೆ ತೋರುವ ನದಿಗಳು ವಿಸ್ತಾರವಾಗಿ ಹರಿಯುವುದು ಕಂಡುಬಂದಿತು.

ಅರಸನು ಕೆಳಕೆಳಗೆ ಇಳಿಯುವಾಗ ಭೂಮಿಯು ಮೇಲೆ ಮೇಲೆ ಎತ್ತಲ್ಪಟ್ಟಂತೆ ತೋರುತ್ತಿತ್ತು.

ರಥವು ಮುಂದಕ್ಕೆ ಇಳಿಯುತ್ತಿದ್ದಾಗ, ಅರಸನಿಗೆ ಒಂದು ಪರ್ವತವು ಕಂಡುಬಂದಿತು; ಆ ಪರ್ವತವು ಪೂರ್ವ ಪಶ್ಚಿಮ ಸಮುದ್ರಗಳ ವರೆಗೂ ವ್ಯಾಪಿಸಿ, ಸಂಧ್ಯಾಕಾಲದ ಮೇಘಮಂಡಳದಂತೆ ತೋರುತ್ತಿದ್ದಿತು. ಸ್ವಾಯಂಭುವನ ಮಗನಾಗಿ ಪ್ರಜಾಪತಿಯೆನಿಸಿಕೊಂಡು, ಸುರರಿಗೂ ಅಸುರರಿಗೂ ತಂದೆಯಾದಂತಹ ಕಶ್ಯಪ ಮುನಿಯು ಮಡದಿಯಾದ ಅದಿತಿಯೊಡನೆ ಕೂಡಿ ತಪಸ್ಸ ಮಾಡುತ್ತಿದ್ದ ಕ್ಷೇತ್ರವೇ ಅದಾಗಿತ್ತು. ಅದಕ್ಕೆ ಕಿಂಪುರುಷ ಪರ್ವತವೆನ್ನುತ್ತಿದ್ದರು. ಅಲ್ಲಿ ಸೂರ್ಯನಿಗೆ ಅಭಿಮುಖವಾಗಿ ನಿಂತು ಕಲ್ಲಿನಂತೆ ವರ್ಷಗಳ ಬಳಿಕ ವರ್ಷವೂ ಮೌನಿಯಾಗಿ ನಿಂತು ಅತಿ ಕಷ್ಟದಿಂದ ತಪಸ್ಸನ್ನು ಮಾಡುತ್ತಿದ್ದ ಋಷಿಗಳು ಹಲವರಿದ್ದರು. ಕೆಲವರ ಮೈಗೆಲ್ಲ ಗೆದ್ದಲು ಮುಸುಕಿತ್ತು. ಕೆಲವರ ಹೃದಯದ ಮೇಲೆ ಸರ್ಪಗಳು ತಮ್ಮ ಪದರು ಬಿಟ್ಟಿದ್ದುವು. ಕೆಲವರ ಕಂಠಗಳಲ್ಲಿ ಜೀರ್ಣವಾದ ಲತೆಗಳು ಸುತ್ತುಬಂದಿದ್ದುವು. ಇನ್ನು ಕೆಲವರ ಜಡೆಗಳಲ್ಲಿ ಹಕ್ಕಿಗಳು ಗೂಡುಗಳನ್ನು ಕಟ್ಟಿದ್ದುವು. ಇಂತಹ ಪವಿತ್ರವಾದ ಕ್ಷೇತ್ರವನ್ನು ಕಂಡು, ಶ್ರೇಯಸ್ಸನ್ನು ಅತಿಕ್ರಮಿಸಿ ನಡೆಯಬಾರದೆಂದು ಅರಸನು ತನ್ನ ರಥವನ್ನು ನಿಲ್ಲಿಸಿದನು. ಭಗವಂತನಾದ ಕಶ್ಯಪನನ್ನು ಕಂಡು, ಆತನಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ, ಆತನಿಂದ ಆಶೀರ್ವಾದವನ್ನು ಪಡೆಯಬೇಕೆಂದು ಅರಸನು ಇಚ್ಛೈಸಿದನು.

ಕಶ್ಯಪನು ತನ್ನ ಪತ್ನಿಯಾದ ಅದಿತಿದೇವಿಗೆ ಪತಿವ್ರತಾಧರ್ಮವನ್ನು ಅಧಿಕರಿಸಿ ಉಪದೇಶಮಾಡುತ್ತಿದ್ದನು. ಆದುದರಿಂದ ಅರಸನಿಗೆ ಆತನ ಸಮಯವನ್ನು ಕಾಯಬೇಕಾಯಿತು. ಮಾತಲಿಯು ತಾನು ಮುಂದು ಹೋಗಿ, ದುಷ್ಯಂತನು ಬಂದ ವಾರ್ತೆಯನ್ನು ಕಶ್ಯಪನಿಗೆ ತಿಳಿಸುವೆನೆಂದು ಅತ್ತ ನಡೆದನು. ಮಹಾರಾಜನು ಅಲ್ಲಿಯೆ ಬೆಳೆದ ಅಶೋಕವೃಕ್ಷದ ಬುಡದಲ್ಲಿ ಕುಳಿತುಕೊಂಡು, ಆ ಪವಿತ್ರ ಕ್ಷೇತ್ರದ ಸೌಂದರ್ಯವನ್ನೂ ಗಾಂಭೀರ್ಯವನ್ನೂ ಅನುಭವಿಸಿದನು.

ಅಶೋಕವೃಕ್ಷದ ಬುಡದಲ್ಲಿ ಕುಳಿತ ದುಷ್ಯಂತನ ಬಲಗಣ್ಣು ಹಾರಿತು. ಆತನ ಜೀವನದ ಮನೋರಥವು ಸರ್ವಥಾ ಕೈಗೂಡುವಂತಿರಲಿಲ್ಲ. ಒಮ್ಮೆ ಬಳಿಸೇರಿದ ಕಲ್ಯಾಣಮೂರ್ತಿಯನ್ನು ತಿರಸ್ಕರಿಸಿದ್ದನು; ಅದರ ಫಲವಾಗಿ ನಿರಂತರವಾದ ದುಃಖವಲ್ಲದೆ ಸುಖವು ಪರಿಣಮಿಸೀತೇ? ಹಿಂದೆ ರಾಮನಿಂದ

ವಿಯುಕ್ತಳಾದ ಸೀತಾದೇವಿಯು ಅಶೋಕವೃಕ್ಷದ ಆಶ್ರಯವನ್ನು ಹೊಂ
ನಿಮಿಷಗಳನ್ನು ಯುಗಗಳಂತೆ ಕಳೆದಿದ್ದಳು. ಅಂತಹ ಅಶೋಕವೃಕ್ಷ
ಬುಡವನ್ನು ಸೇರಿದೊಡನೆ ರಾಜನಿಗೆ ಶಕುಂತಳಾ ವಿರಹದಿಂದುಂಟಾದ ದುಃಖ
ಮತ್ತೊಮ್ಮೆ ಕಾಣಿಸಿಕೊಂಡಿತು.

ಸಮೀಪದಲ್ಲಿ ಬಾಲಕನೊಬ್ಬನು ಆಡುತ್ತಿದ್ದನು. ಆತನು ಪುಷ್ಟಾಂ
ನಾಗಿಯೂ ದೃಢಾಂಗನಾಗಿಯೂ ಇದ್ದು ಕಾಣಲು ಸುಂದರನಾಗಿದ್ದನು. ಆತನ
ಸಿಂಹದ ಮರಿಯೊಂದನ್ನು ಎಳೆದಾಡುತ್ತ ಅದನ್ನು ನೋಯಿಸುತ್ತಿದ್ದನು
ಋಷ್ಯಾಶ್ರಮದವರಿಗೆಲ್ಲ ಪ್ರಾಣಿಗಳು ಮಕ್ಕಳಂತಿರುವುವು. ಹುಲಿಯಾದರೇನು
ಹುಲ್ಲೆಯಾದರೇನು? ಅವೆಲ್ಲವೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟವಲ್ಲವೇ
ಆದರೆ, ಈತನೇನು ಇಂತಹ ಪುಣ್ಯಕರವಾದ ಸ್ಥಳದಲ್ಲಿ ಹಿಂಸೆಮಾಡಲಿಕ್ಕೆ
ತೊಡಗಿದನೆಂದು ಅರಸನು ಬೇರೆ ತಿಳಿಯಲಿಲ್ಲ. ಹಿಂದೆ ಕಣ್ವಾಶ್ರಮದಲ್ಲಿ
ವಿಹರಿಸುವಾಗ, ತನ್ನ ಪ್ರಿಯೆಯು ಹುಲ್ಲೆಮರಿಗಳಿಗೆ ಮುದ್ದಿಟ್ಟು ಪ್ರೀತಿಸುವ
ದನ್ನು ಕಂಡಿದ್ದನು. ಸೌಂದರ್ಯೋಪಾಸಕನಾಗಿ ಅದನ್ನು ಕಂಡುಕಂಡು
ದಣಿಯದಿದ್ದನು. ಇಂದು ಕಶ್ಯಪಾಶ್ರಮವನ್ನು ಹೊಕ್ಕು, ಮಗುವೊಂದು
ತನ್ನ ಪ್ರಾಯಕ್ಕೆ ಮೀರಿದ ಶಕ್ತಿಯಿಂದ ಸಿಂಹದ ಮರಿಯನ್ನು ನೋಯಿಸುವ
ದನ್ನು ಕಂಡು, ಬೆರಗಾಗದಿದ್ದರೂ ಬಹಳವಾಗಿ ಸಂತೋಷಪಟ್ಟನು. ಅಲ್ಲಿ
ಶೃಂಗಾರದ ಸೌಂದರ್ಯವನ್ನು ಅನುಭವಿಸಿದ್ದರೆ, ಇಲ್ಲಿ ಬೀರದ ಚೆಲುವನ್ನು
ಪಾನಮಾಡಿದನು. ಆದರೆ, ಈ ಬಾಲಕನಾರು?

"ಸರ್ವದಮನ! ನಿನ್ನ ಛಲ ಹೆಚ್ಚಾಗುತ್ತಿದೆ. ಸಿಂಹದ ಮರಿಯನ್ನು
ಬಿಡು, ಸರ್ವದಮನ!" ಎಂದು ತಾಪಸಿಯೊಬ್ಬಳು ಬಾಲಕನನ್ನು ಗದರಿಸಿದಳು.
ಆತನು ಅತ್ತ ಗಮನಕೊಡದೆ, ತಾಯಿಯ ಮೊಲೆಹಾಲನ್ನು ಅರ್ಧ ಕುಡಿದ
ಸಿಂಹದ ಮರಿಯನ್ನು ಎಳೆದೆಳೆದು, "ಮರಿಯೆ! ಆಕಳಿಸು. ನಿನ್ನ ಹಲ್ಲುಗಳನ್ನು
ಲೆಕ್ಕಮಾಡುವೆನು," ಎಂದು ಅದರ ಬಾಯನ್ನು ಅಗಲಮಾಡಿ, "ಒಂದು,
ಎರಡು, ಮೂರು, ನಾಲ್ಕು," ಎಂದು ಲೆಕ್ಕಹಾಕಿದನು. "ಮರಿಯನ್ನು
ಬಿಡದಿದ್ದರೆ, ಅದರ ತಾಯಿ ಖಂಡಿತವಾಗಿ ನಿನ್ನ ಮೇಲೆ ಬೀಳುವುದು," ಎಂದು
ತಾಪಸಿಯು ಮೂಗಿನ ಮೇಲೆ ಕೈಯಿಟ್ಟು ತಿರಿಗೊಮ್ಮೆ ಬೆದರಿಸಿದಳು.
ಬಾಲಕನು ನಕ್ಕು, "ಓಹೋ, ನನಗೆ ಭಯವಾಗುತ್ತದೆ," ಎಂದು ತನ್ನ ತುಟಿ
ಯನ್ನು ತೋರಿಸಿ, ತಾನು ಹೆದರುವವನಲ್ಲವೆಂದು ಆಕೆಗೆ ತಿಳಿಸಿದನು.

ರಾಜನು ಬಾಲಕನ ರೂಪವನ್ನು ಕಂಡು ಮುಗ್ಧನಾದನು. ಅರ್ಧಮಾತ್ರ ಸ್ತನವನ್ನು ಕುಡಿದ ಸಿಂಹದ ಮೇಲೆ ತನ್ನ ಪರಾಕ್ರಮವನ್ನು ತೋರಿಸುವ ಬರೇ ಮೂರುವರ್ಷ ಪ್ರಾಯದ ಬಾಲಕನ ಧೈರ್ಯವನ್ನು ಕಂಡು, ಮಹತ್ತಾದ ಶಕ್ತಿಯು ಬೀಜವಾಗಿರುವ ಈ ಮಗು ಕಿಡಿಯರೂಪದಲ್ಲಿರುವ ಬೆಂಕಿಯೆಂದು ಮನಗಂಡನು. ಚಂದನವೃಕ್ಷದ ಬುಡದಲ್ಲಿ ಹುತ್ತಕಟ್ಟುವ ಸರ್ಪವು ಚಂದನವೃಕ್ಷವನ್ನೆ ಹಾಳು ಮಾಡುವಂತೆ ಈ ಋಷಿಕುಮಾರನು ಆಶ್ರಮರೀತಿಗೆ ವಿರುದ್ಧವಾಗಿ ಆಚರಿಸಲು ಕಾರಣವೇನಿರಬಹುದೆಂದು ಆತನಿಗೆ ತಿಳಿಯಲಿಲ್ಲ. ಆದರೆ, ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲಿ ಅನುರಾಗವುಂಟಾಗುವಂತೆ, ಬಾಲಕನಲ್ಲಿ ಆತನಿಗೆ ಪ್ರೀತಿಯುಂಟಾಯಿತು. ಮಕ್ಕಳಿಲ್ಲದೆ ಊರವರ ಮಕ್ಕಳಲ್ಲಿ ಪ್ರೀತಿಯುಂಟಾಗುವಂತೆ ಈ ಬಾಲಕನಲ್ಲಿಯೂ ಹಾಗಾಗಿರಬಹುದೆಂದು ಊಹಿಸಿ ಸಪ್ಪೆಯಾದನು.

ತಾಪಸಿಯು ಬಾಲಕನೆಡೆಗೆ ಬಂದು, "ವತ್ಸ ಸರ್ವದಮನ! ಹಾಗೆ ಮಾಡಬಾರದಪ್ಪ. ಸಿಂಹದ ಮರಿಯನ್ನು ಬಿಟ್ಟುಬಿಡು. ನಿನಗೆ ಆಡುವುದಕ್ಕೆ ಇನ್ನೊಂದು ವಸ್ತುವನ್ನು ಕೊಡುವೆನು," ಎಂದು ದಾನೋಪಾಯಕ್ಕೆ ಇಳಿದಳು. "ಎಲ್ಲಿ? ಅದೇನು ಕೊಡುವಿ"ಯೆಂದು ಕೈಯೊಂದನ್ನು ಆತನು ನೀಡಿದನಲ್ಲದೆ, ಸಿಂಹದ ಮರಿಯನ್ನು ಮಾತ್ರ ಬಿಡಲಿಲ್ಲ. ಹುಡುಗನನ್ನು ಮಾತುಗಳಿಂದ ಸುಮ್ಮನಿರಿಸಲಾಗಲಿಲ್ಲ. ಅಲ್ಲಿಯೇ ಇನ್ನೊಬ್ಬಳು ತಾಪಸಿಯಿದ್ದಳು. ಆಕೆಗೆ, ಆಶ್ರಮಕ್ಕೆ ಹೋಗಿ ಋಷಿಕುಮಾರನಾದ ಮಾರ್ಕಂಡೇಯನು ಬಣ್ಣದಿಂದ ಚಿತ್ರಿಸಿದ ಮಣ್ಣಿನ ನವಿಲನ್ನು ತಂದುಕೊಡೆಂದು ಅವಳು ಹೇಳಿದಳು. ಬಾಲಕನಾದರೊ, "ಆ ವರೆಗೆ ಈ ಸಿಂಹದ ಮರಿಯೊಡನೆ ಆಡುವೆನು," ಎಂದು ನಗುತ್ತ, ಬಿಡಿಸಲಿಕ್ಕೆ ಬಾರದ ಮುಂಗಮುಷ್ಟಿಯಿಂದ ಸಿಂಹದ ಮರಿಯನ್ನು ಹಿಡಿದು, ಅದು ಕೋಪದಿಂದ ಗರ್ಜಿಸುತ್ತಿದ್ದರೂ ಹೆದರದೆ ಅದನ್ನು ಬಾಧಿಸಿದನು. ಬಾಲಕನ ದುರುಳತನವನ್ನು ಕಂಡು ಅರಸನಿಗೆ ಬಾಲಕನನ್ನು ಹಿಡಿದುಕೊಳ್ಳಬೇಕೆಂಬ ಆಶೆಯುಂಟಾಯಿತು. ನಿಷ್ಕಾರಣವಾದ ಹಾಸದಿಂದ ಮುಗುಳು ಹಲ್ಲುಗಳನ್ನು ತೋರುವ, ತೊದಲ್ನುಡಿಗಳಿಂದ ಮನಸ್ಸನ್ನು ಸೆಳೆಯುವ ಮಕ್ಕಳನ್ನು ತೊಡೆಯ ಮೇಲೇರಿಸಿ ಅವುಗಳ ಪಾದಧೂಳಿಯಿಂದ ಮಲಿನರಾಗುವವರೇ ಧನ್ಯರೆಂದನು ಅರಸನು.

ಸರ್ವದಮನನು ಕಶ್ಯಪಾಶ್ರಮದಲ್ಲಿ ಮಾಡುವ ಕಾರ್ಯವನ್ನು ಕಂಡು ತಾಪಸಿಯು ಸಹಿಸಲಾರದಾದಳು. ತನ್ನ ಅಂಕೆಗೆ ಆತನು ಬರುವವನಲ್ಲ.

ಸಮೀಪವಿರುವ ಋಷಿಕುಮಾರನೊಬ್ಬನನ್ನು ಕರೆದು, ಅವನಿಂದ ಸಹಾಯವನ ಪಡೆಯುವೆನೆಂದು ಅತ್ತಿತ್ತ ನೋಡುವಾಗ ಅಶೋಕವೃಕ್ಷದ ಅಡಿಯಲ್ಲಿ ಕೂ ದುಷ್ಯಂತನನ್ನು ಕಂಡು, ಬಂದು ಸಿಂಹದ ಮರಿಯನ್ನು ಬಿಡಿಸೆಂದಳು.

ಬಾಲಕನನ್ನು ಕೈಯಾರೆ ಮುಟ್ಟುವಂತಹ ಭಾಗ್ಯವು ತನಗುಂಟಾಯಿ ತೆಂದು ಅರಸನು ಸಂತುಷ್ಟನಾದನು. "ಋಷಿಪುತ್ರನೆ! ಮುನಿಯ ಕುಲದಲ್ಲಿ ಹುಟ್ಟಿ, ಆಶ್ರಮಧರ್ಮಕ್ಕೆ ವಿರುದ್ಧವಾಗಿ ನಡೆಯಬಾರದಪ್ಪ!" ಎಂದು ಆತನು ಬಾಲಕನ ಎಡೆಗೆ ನಡೆದನು. "ಭದ್ರಮುಖನೆ! ಇವನು ಋಷಿಕುಮಾರನಲ್ಲ ವಲ್ಲ!" ಎಂದು ತಾಪಸಿಯು ಅರಸನಿಗೆಂದಳು.

"ಈತನು ಋಷಿಕುಮಾರನಲ್ಲವಾದರೆ, ಯಾವ ಕುಲದಲ್ಲಿ ಹುಟ್ಟಿದವ ನಿವನು?"

"ಪುರುವಂಶದಲ್ಲಿ."

ಈ ಮಾತನ್ನು ಕೇಳಿದೊಡನೆಯೆ ಅರಸನಿಗೆ ಆಶ್ಚರ್ಯವಾಯಿತು. "ಈತನು ನಮ್ಮ ಕುಲದವನೆ? ಹಾಗಾದರೆ ಸರಿ, ಪುರುವಂಶದವರು ಅಂತ್ಯದಲ್ಲಿ ವನವಾಸವನ್ನು ಮಾಡುವವರು. ಯಾವನೊಬ್ಬ ಪುರುವಂಶದರಸನು ಇಲ್ಲಿ ಬಂದಿರಬೇಕು," ಎಂದು ಆತನು ಊಹಿಸಿದನು. "ಹಾಗಾದರೆ, ಮನುಷ್ಯರು ಈ ದೇವಭೂಮಿಯಲ್ಲಿ ಇರುವುದು ತಾನೆ ಹೇಗೆ?" ಎಂದು ಅರಸನು ಪುನಶ್ಚ ಪ್ರಶ್ನಿಸಿದನು.

"ಹಾಗಾದರೋ ಕೇಳು. ಈತನ ತಾಯಿ ಅಪ್ಸರ ಸ್ತ್ರೀಗೆ ಮಗಳಾದ ಕಾರಣ, ದೇವಗುರುವಾದ ಕಶ್ಯಪನ ಆಶ್ರಮದಲ್ಲಿ ಹೆತ್ತಳು." ಅರಸನಿಗೆ ಮನಸ್ಸಿನಲ್ಲಿ ಏನೋ ಒಂದು ಕುತೂಹಲವು ಸಮನಿಸಿತು. "ಆಕೆಯು ಯಾವ ರಾಜರ್ಷಿಯ ಧರ್ಮಪತ್ನಿಯು?" ಎಂದು ತನ್ನ ಉತ್ಸುಕತೆಯನ್ನು ಆತನು ಹೊರಗೆಡವಿದನು.

"ಧರ್ಮಪತ್ನಿಯ ತ್ಯಾಗಮಾಡಿದ ಆತನ ಹೆಸರನ್ನು ಎತ್ತುವುದಕ್ಕೆ ಯಾರಿಗೂ ಮನಸ್ಸಾಗಲಿಕ್ಕಿಲ್ಲವಲ್ಲ?" ಎಂಬ ಮುದುಕಿಯ ಮಾತು ಅರಸನ ಮನಸ್ಸಿಗೆ ನಾಟಿತು. ಕಥೆಯಿದೆಲ್ಲ ತನಗೆ ಅನ್ವಯಿಸುತ್ತಿದೆಯೆಂದು ಅರಸನಿಗೆ ಗೊತ್ತಾಯಿತು. ನಿಶ್ಚಿತವಾಗಿ ತಿಳಿಯಲೆಂದು ಶಿಶುವಿನ ತಾಯಿಯ ಹೆಸರನ್ನು ಕೇಳೋಣವೆಂಬ ಇಚ್ಛೆ ಆತನಿಗಾಯಿತು. ಆದರೆ, ಪರಪತ್ನಿಯರ ವಿಚಾರವನ್ನು ಮಾಡಬಾರದೆಂದು ಸುಮ್ಮನಾದನು.

ನವಿಲನ್ನು ತರಲು ಕುಟೀರಕ್ಕೆ ತೆರಳಿದ ತಾಪಸಿಯು ಹಿಂದಕ್ಕೆ ಬಂದಳು. "ಸರ್ವದಮನನೆ! ಈ ಶಕುಂತಲಾವಣ್ಯವನ್ನು ಕಾಣು," ಎಂದಾಕೆಯು ಬಾಲಕನನ್ನು ಕರೆದಳು. "ಅಮ್ಮ ಬಂದಿರುವಳೆ? ಎಲ್ಲಿರುವಳು?" ಎಂದು ಆತನು ಕಣ್ಣೆತ್ತಿ ನೋಡಿದನು. "ಇಲ್ಲ, ಮಗು. ನಿನ್ನ ತಾಯಿ ಬಂದಿಲ್ಲ. ಶಕುಂತದ ಲಾವಣ್ಯವನ್ನು ನೋಡೆಂದೆನು," ಎಂದು ನವಿಲನ್ನು ಬಾಲಕನಿಗೆ ಕೊಟ್ಟಳು. ಆತನು ಸಂತೋಷದಿಂದ ಕೈ ನೀಡಿ ನವಿಲನ್ನು ತೆಗೆದುಕೊಂಡನು. ಆಗ ತಾಪಸಿಯು ಬಾಲಕನ ಕೈಯಲ್ಲಿ ರಕ್ಷಾಯಂತ್ರವನ್ನು ಕಾಣದೆ ದಿಗಿಲುಗೊಂಡಳು. ಆತನ ಕೈಗೆ ಕಶ್ಯಪನು ರಕ್ಷಾಯಂತ್ರವನ್ನು ಕಟ್ಟಿದ್ದನು. ಅದು ನೆಲಕ್ಕೆ ಬಿದ್ದರೆ ತಂದೆತಾಯ್ಗಳಲ್ಲದೆ ಮತ್ತಾರೂ ಅದನ್ನು ಮುಟ್ಟಲಾಗದು. ಒಂದು ಪಕ್ಷ ಮುಟ್ಟಿದರೆ, ಅದು ಸರ್ಪವಾಗಿ ಕಚ್ಚುವುದು. "ಬಾಲಕನ ರಕ್ಷಾಯಂತ್ರವಿಲ್ಲ ವಲ್ಲ!" ಎಂದಾಕೆ ಸುತ್ತಲೂ ಕಣ್ಣನ್ನು ಹರಡಿಸಿದಳು.

ದುಷ್ಯಂತನು ಆಗ ತನ್ನ ಕಾಲಿನ ಬುಡದಲ್ಲಿದ್ದ ರಕ್ಷಾಯಂತ್ರವನ್ನು ಹೆಕ್ಕಿ ತೆಗೆದು, "ಅಮ್ಮಾ, ಸಿಂಹದ ಮರಿಯನ್ನು ಮರ್ದಿಸುವಾಗ ಬಿದ್ದ ಯಂತ್ರವಿದು," ಎಂದು ಅದನ್ನು ತಾಪಸಿಯ ಕೈಯಲ್ಲಿಟ್ಟನು. ತಾಪಸಿಗೆ ಬಹಳ ಆಶ್ಚರ್ಯವಾಯಿತು. "ಪರಪುರುಷನೊಬ್ಬನು ಮುಟ್ಟಿದರೂ ಯಂತ್ರವೇಕೆ ಸರ್ಪವಾಗಲಿಲ್ಲ? ಈ ಮುಂಚೆ ಅನೇಕಾವೃತ್ತಿ ಹಾಗೆ ನಡೆದಿತ್ತು. ಇಂದೇಕೆ ಯಂತ್ರದ ಪ್ರಭಾವವು ಕುಗ್ಗಿಹೋಯಿತು?" ಎಂದು ಆಕೆ ತಿಳಿಯದಾದಳು. ನಡೆದ ವೃತ್ತಾಂತವನ್ನು ಬಾಲಕನ ತಾಯಿಯೊಡನೆ ನಿವೇದಿಸಲು ಕುಟೀರದತ್ತ ಹೊರಟಳು.

ದುಷ್ಯಂತ ಮಹಾರಾಜನು ಬಾಲಕನನ್ನೆತ್ತಿ ಮುದ್ದಿಸಿದನು. ತಾಪಸಿಯರಿಬ್ಬರೂ ಆಶ್ರಮಕ್ಕೆ ಹೊರಟ ಕಾರಣ, ತಾನೂ ತಾಯಿಯೆಡೆಗೆ ಹೋಗಲು ಬಾಲಕನು ಇಚ್ಛಿಸಿದನು. ತನ್ನನ್ನು ತೊಡೆಯ ಮೇಲೇರಿಸಿಕೊಂಡ ದುಷ್ಯಂತನೊಡನೆ, "ನನ್ನನ್ನು ಬಿಡು. ನಾನು ತಾಯಿಯ ಬಳಿಗೆ ಹೋಗುವೆನು," ಎಂದು ಕೆಳಗಿಳಿಯಲು ಆತನು ಯತ್ನಿಸಿದನು. "ಮಗನೆ, ನಿಲ್ಲು. ನಿನ್ನ ತಾಯನ್ನು ನನ್ನೊಡನೆಯೆ ಕಾಣುವೆ," ಎಂದು ದುಷ್ಯಂತನು ಸರ್ವದಮನನಿಗೆಂದನು. "ನನ್ನ ತಂದೆಯು ನೀನಲ್ಲ! ದುಷ್ಯಂತನು," ಎಂದು ಸರ್ವದಮನನು ಧೈರ್ಯದಿಂದ ಪರುಷವಾಗಿಯೆ ಮಾತಾಡಿದನು.

ಅಷ್ಟರಲ್ಲಿ, – ಕನಸೋ ನನಸೋ – ರಾಜನಿಗೆ ಸರಿ ತಿಳಿಯದಂತಾಯಿತು.

ಮಲಿನಾಂಬರದಿಂದ, ಕೊರಗಿದ ಮೊಗದಿಂದ, ಒಂದೆ ಜಡೆಯಿಂದ ಶಕುಂತಳೆಯು ಕಾಣಬಂದಳು. ಶುದ್ಧಶೀಲಳಾಗಿ ಇಷ್ಟು ಸಮಯವೂ ವಿರಹವ್ರತವನ್ನು ಕೈಗೊಂಡು ಬಂದವಳು ಸರ್ವದಮನನ ರಕ್ಷಾಯಂತ್ರವು, ಅದನ್ನು ಮುಟ್ಟಿದವನನ್ನು ಸರ್ಪವಾಗಿ ಕಚ್ಚಲಿಲ್ಲವೆಂಬುದನ್ನು ನೋಡಬಂದಿದ್ದಳು. ಬಂದ ಆಗಂತುಕನನ್ನು ಕಂಡು ಆಕೆಗೆ ಆಶ್ಚರ್ಯವಾಯಿತು.

ದುಷ್ಷಂತ ಮಹಾರಾಜನನ್ನು ಶಕುಂತಳೆಯು ಗುರುತಿಸಲಾರದೆ ಹೋದಳು. ಪಶ್ಚಾತ್ತಾಪದಿಂದ ಕಳೆಗುಂದಿದ ಮಹಾರಾಜನು ಎದ್ದು ನಿಂತು, "ಅಹಾ! ಇದೋ ಪೂಜ್ಯಳಾದ ಶಕುಂತಳೆ!" ಎಂದು ಮೆಲ್ಲಗೆ ಉಸುರಿದನು. ಒಂದು ಹೆಜ್ಜೆ ಮುಂದಿಟ್ಟನು. ಸರ್ವದಮನನು ತಾಯಿಯೆಡೆಗೆ ಹಾರಿ, "ಅಮ್ಮಾ! ಇವನಾವನು? ನನ್ನನ್ನು ಪುತ್ರನೆಂದು ಕರೆಯುತ್ತಾನೆ?" ಎಂದು ವಿಚಾರಿಸಿದನು.

"ಪ್ರಿಯೆ, ವಿಯೋಗದುಃಖದಿಂದ ಬಡನಾದ ನನ್ನನ್ನು ಗುರುತಿಸಲಾರದಾದೆ. ಕ್ಷಮಿಸು," ಎಂದು ದುಷ್ಷಂತನು ದೀನನಾಗಿ ನುಡಿದನು.

ಶಕುಂತಳೆ ತನ್ನ ಕಣ್ಣನ್ನು ಅರಳಿಸಿದಳು! ಸರ್ವದಮನನು ರೆಪ್ಪೆಹಾಕದೆ ನಿಂತುಕೊಂಡನು.

"ಪ್ರಿಯೆ, ಚಂದ್ರನು ರಾಹುವಿನಿಂದ ಬಿಡುಗಡೆಹೊಂದಿ ರೋಹಿಣಿಯೊಡನೆ ಸೇರುವಂತೆ, ಮೋಹದಿಂದ ಮುಕ್ತನಾಗಿ ನಿನ್ನೊಡನೆ ನಾನು ಸೇರಿರುವೆನು," ಎಂದು ದುಷ್ಷಂತನು ಕಣ್ಣೀರಿಟ್ಟನು.

"ಆರ್ಯಪುತ್ರನೆ, ಜಯಶೀಲನಾಗು," ಎಂದು ತನ್ನ ಪ್ರಿಯನಿಗೆ ಜಯಶಬ್ದವನ್ನು ಹಾಡುವಾಗ ಶಕುಂತಳೆಯ ಕಂಠವು ಗದ್ಗದವಾಯಿತು; ಕಣ್ಣು ಕಂಬನಿಯಿಂದ ಪೂರ್ಣವಾಯಿತು. ಮನಸ್ಸು ಶೂನ್ಯತೆಯಿಂದ ಅಳಿದುಹೋಯಿತು.

"ಶಕುಂತಳೆ! ನೀನೆಂದ ಜಯಶಬ್ದವು ಗದ್ಗದದಿಂದ ಹೊರಬಾರದಿದ್ದರೂ ನಾನು ಜಯಶೀಲನಾದೆನು. ಏಕೆಂದರೆ, ಸ್ವಾಭಾವಿಕವಾಗಿ ಪಾಟಲವರ್ಣವಿರುವ ನಿನ್ನ ತುಟಿಗಳನ್ನು ಕಾಣುವಂತಾಯಿತು," ಎಂದು ರಾಜನು ಶಕುಂತಳೆಯ ಸಮೀಪಕ್ಕೆ ಬಂದನು.

ಅಳುವ ತಾಯನ್ನು ಕಂಡು "ಅಮ್ಮಾ! ಈತನಾರೆ"ಂದು ಸರ್ವದಮನನು ಕೇಳಿದನು. "ಮಗನೆ, ನಿನ್ನ ಅದೃಷ್ಟವನ್ನು ಕೇಳು," ಎಂದು ಶಕುಂತಳೆಯು ತನ್ನ ಮಗನನ್ನು ತಬ್ಬಿಹಿಡಿದುಕೊಳ್ಳಲು, ಪಶ್ಚಾತ್ತಾಪದಿಂದ ದಗ್ಧನಾದ ಮಹಾ

ರಾಜನು ಶಕುಂತಳೆಯ ಕಾಲ್ಗೆರಗಿದನು; "ಮಂಗಳಾಂಗಿಯೆ, ನಾನು ಮಾಡಿದ ಸರ್ವಾಪರಾಧವನ್ನು ಕ್ಷಮಿಸು. ಕುರುಡನು ತನ್ನ ತಲೆಯ ಮೇಲಿರುವ ಹೂಮಾಲೆಯನ್ನು ಸರ್ಪವೆಂದು ಭ್ರಮಿಸಿ, ತೊರೆಯುವನು. ಪ್ರಿಯೆ! ಅಂದು, ನಾನು ನಿನ್ನನ್ನು ನಿರಾಕರಿಸಿ ತೋರಿದ ಸಮಸ್ತವನ್ನೂ ಮರೆತುಬಿಡು; ಯಾವುದೋ ಕಾರಣದಿಂದ ಮನಸ್ಸಿಗೆ ಆಗ ಅರಿವಿಲ್ಲದೆಹೋಯ್ತೆ"ಂದು ಕಣ್ಣೀರ ಧಾರೆಯಿಂದ ಆಕೆಯ ಪಾದಗಳನ್ನು ತೊಳೆದನು. ಶಕುಂತಳೆಯು ಅಶ್ರುಪೂರ್ಣನಯನಳಾಗಿ ಗಂಡನನ್ನು ಹಿಡಿದೆಬ್ಬಿಸಿ, "ಆರ್ಯಪುತ್ರನೆ, ಏಳು! ನನ್ನ ಪ್ರಾಚೀನ ಕರ್ಮವು ಆಗ ಪರಿಣಮಿಸಿತು. ಆದುದರಿಂದ ಸ್ವಭಾವಕೃಪಾಳುವಾದರೂ ನನ್ನಲ್ಲಿ ವಿರಸನಾಗಲು ಕಾರಣವಾಯ್ತು," ಎಂದೆಂದಳು.

ಹೀಗಾಗಲು ಕಾರಣವೇನೆಂದೂ, ದುಃಖಭಾಗಿನಿಯಾದ ತನ್ನನ್ನು ಮತ್ತೆ ಹೇಗೆ ಸ್ಮರಿಸುವಂತಾಯಿತೆಂದೂ ಶಕುಂತಳೆ ಗಂಡನೊಡನೆ ವಿಚಾರಿಸಿದಳು. "ಅದೆಲ್ಲವನ್ನು ಮತ್ತೆ ಹೇಳುವೆನು. ನಿನ್ನೀ ರೆಪ್ಪೆಗಳ ಮಧ್ಯದಲ್ಲಿ ತೋರುವಂತಹ ಬಾಷ್ಪವನ್ನು ಮುಂಚೆ ಒರಸದಾದೆನು. ಈಗಲಾದರೂ ಅದನ್ನು ಒರಸಿ, ದುಃಖವನ್ನು ಪರಿಹರಿಸುವೆನೆ"ಂದು ಆಕೆಯ ಬಾಷ್ಪಬಿಂದುಗಳನ್ನು ಒರಸುವಾಗ, ಶಕುಂತಳೆಗೆ ದುಷ್ಷಂತನ ಬೆರಳಲ್ಲಿದ್ದ ಉಂಗುರವು ತೋರಿತು. ಅದೇ ಉಂಗುರವಿದು! ಯಾವ ಉಂಗುರವನ್ನು ತನ್ನ ಬೆರಳಲ್ಲಿಟ್ಟು ಕೆಲವು ದಿವಸಗಳೊಳಗೆ ಬರುವೆನೆಂದು ನಂಬಿಸಿದ್ದನೋ ಅದೇ ಉಂಗುರವಾಗಿದ್ದಿತಿದು!! "ಆರ್ಯಪುತ್ರ! ಆ ಉಂಗುರವಲ್ಲವೆ ಇದು?" ಎಂದು ಶಕುಂತಳೆ ಪಿಸುಗುಟ್ಟಿದಳು.

"ಹೌದು, ಈ ಉಂಗುರದಿಂದಲೆ ನೆನಪುಂಟಾಯಿತೆ"ಂದು ದುಷ್ಷಂತನು ಒಪ್ಪಿದನು.

"ಆರ್ಯನಿಗೆ ನಂಬಿಕೆಯನ್ನುಂಟುಮಾಡುವ ಕಾಲದಲ್ಲಿ ದೊರೆಯದೆ ಅನಿಷ್ಟಮಾಡಿತು," ಎಂದು ಶಕುಂತಳೆ ನುಡಿದಳು.

"ಚಿಂತೆಯಿಲ್ಲ. ತಿರಿಗೊಮ್ಮೆ ಬಳ್ಳಿಯಲ್ಲಿ ಹೂವಾಗುವಂತೆ ನಿನ್ನ ಬೆರಳಲ್ಲಿ ಉಂಗುರವಿದಿರಲಿ," ಎಂದು ದುಷ್ಷಂತನು ಉಂಗುರವನ್ನು ಬೆರಳಿಂದ ತೆಗೆದನು. "ಬೇಡ. ನನಗಿದರಲ್ಲಿ ವಿಶ್ವಾಸವಿಲ್ಲ. ಧರಿಸಿಕೊಳ್ಳೋಣಾಗಲಿ," ಎಂದು ಶಕುಂತಳೆಯು ಅದನ್ನು ಸ್ವೀಕರಿಸಲಿಲ್ಲ.

ಕಶ್ಯಪನು ದುಷ್ಷಂತ ಮಹಾರಾಜನಿಗೆ ಕರೆಕಳುಹಿಸಿದನು. ಶಕುಂತಳಾ ಸರ್ವದಮನರೊಡನೆ ಆತನು ಕಶ್ಯಪನ ದರ್ಶನಾಪೇಕ್ಷಿಯಾಗಿ ನಡೆದನು.

ಈ ತ್ರಿತಯವು ಶ್ರದ್ಧೆ, ವಿತ್ತ ಮತ್ತು ವಿಧಿಯ ಸಮಾಗಮವೆಂಬಂತೆ ತೋರುತ್ತಿದ್ದಿತು.

ದುಷ್ಷಂತನು ಮುಂದುವರಿದು ಕಶ್ಯಪನನ್ನು ನಮಸ್ಕರಿಸಿದನು. ವ್ಯಾಸಾದಿ ಮುನಿಗಳು ಯಾವಾತನನ್ನು ದ್ವಾದಶಮಾಸಗಳಲ್ಲಿ ದ್ವಾದಶಮೂರ್ತಿಗಳನ್ನು ತಳೆಯುವ ಸೂರ್ಯನ ತಂದೆಯೆನ್ನುವರೊ, ಯಾವಾತನು ಯಜ್ಞೇಶ್ವರನಾಗಿಯೂ ಮೂಲೋಕದ ಗಂಡನಾಗಿಯೂ ಇರುವ ಇಂದ್ರನ ಜನಕನಾಗಿರುವನೊ, ಯಾವಾತನು ಸ್ವಯಂಭುವನಿಗಿಂತ ಶ್ರೇಷ್ಠನಾದ ವಿಷ್ಣುವಿಗೆ ವಾಮನಾವತಾರದಲ್ಲಿ ತಾತನಾದನೊ, ಅಂತಹ ಕಶ್ಯಪನಿಗೂ ಆತನ ಸಹಧರ್ಮಿಣಿ ಅದಿತಿದೇವಿಗೂ ಅಭ್ಯುದಯಕಾಲದಲ್ಲಿ ಪ್ರದಕ್ಷಿಣೆ ಬರುವಂತಾಯಿತೆಂದು ಆತನು ಬಹಳವಾಗಿ ಸಂತೋಷಪಟ್ಟನು. "ವತ್ಸ, ಚಿರಂಜೀವಿಯಾಗು. ಪೃಥಿವಿಯನ್ನು ಪಾಲಿಸು," ಎಂದು ಕಶ್ಯಪನು ಆಶೀರ್ವದಿಸಿದನು. ಶಕುಂತಳೆಯು ಅದಿತಿಯನ್ನೂ ಕಶ್ಯಪನನ್ನೂ ವಂದಿಸಲು, "ನಿನ್ನ ಪತಿ ಸುರಪತಿಗೆ ಸಮಾನನು; ನಿನ್ನ ಪುತ್ರನು ಜಯಂತನಿಗೆ ಸದೃಶನು. ನಿನಗೆ ಬೇರೆ ಆಶೀರ್ವಾದವು ಉಚಿತವಲ್ಲ—ಇಂದ್ರಾಣಿಗೆ ಸಾಟಿಯಾಗಿ ಬಾಳು," ಎಂದು ಕಶ್ಯಪನು ಪ್ರೀತಿಯಿಂದ ನುಡಿದನು.

ದುಷ್ಷಂತನು ಮುಂದೆ ಬಂದು, "ಪೂಜ್ಯನಾದ ಗುರುವೆ, ನಿಮ್ಮ ಆಜ್ಞಾಧಾರಿಣಿಯನ್ನು ಗಾಂಧರ್ವದಿಂದ ಮದುವೆಯಾದೆನು. ಕೆಲಕಾಲದ ನಂತರ ಬಂಧುಗಳು ಇವಳನ್ನು ನನ್ನೆಡೆಗೆ ಒಯ್ಯಲು, ಸ್ಮೃತಿಶೈಥಿಲ್ಯದಿಂದ ಈಕೆಯನ್ನು ತಿರಸ್ಕರಿಸಿ, ತಮ್ಮ ಗೋತ್ರದ ಕಣ್ವಮಹರ್ಷಿಯಲ್ಲಿ ಅಪರಾಧ ಮಾಡಿರುವೆನು. ಅನಂತರ ಉಂಗುರವೊಂದರ ದರ್ಶನದಿಂದ ಈಕೆಯೊಡನೆ ನಾನು ಮಾಡಿಕೊಂಡ ವಿವಾಹವು ನೆನಪಿಗೆ ಬಂದಿತು. ನಡೆಯುವಂತಹ ಆನೆಯನ್ನು ಕಂಡಾಗ ಆನೆಯೋ, ಅಲ್ಲವೋ ಎಂಬ ಸಂಶಯವುಂಟಾಗಿ ಅನಂತರ ಅದರ ಚರಣಗಳ ಚಿಹ್ನೆಗಳನ್ನು ಕಂಡು ಆನೆಯಿದು ಎಂದು ತಿಳಿಯುವಂತಾಯಿತು. ಇದೀಗ ಬಹಳ ವಿಚಿತ್ರವಾದುದು," ಎಂದು ಬಿನ್ನವಿಸಿಕೊಂಡನು.

"ವತ್ಸ! ಇದು ನಿನ್ನ ತಪ್ಪಲ್ಲ. ನಿನಗೆ ಮರವೆಯುಂಟಾಗುವುದಕ್ಕೆ ಕಾರಣವಿದೆ. ಮೇನಕೆಯು ದುಃಖಿತಳಾದ ಇವಳನ್ನು ಇಲ್ಲಿಗೆ ಒಯ್ದು ಅದಿತಿಯ ಸಮೀಪಕ್ಕೆ ಬಂದೊಡನೆಯೆ, ದುರ್ವಾಸನ ಶಾಪದಿಂದಾಗಿ ಈ ತಪಸ್ವಿನಿಯು ನಿರಾಕೃತಳಾದಳೆಂದೂ ಆ ಶಾಪವು ಅಂಗುಲೀಯಕ ದರ್ಶನಾವಸಾನವಾಗಿ

ತ್ತೆಂದೂ ಧ್ಯಾನಬಲದಿಂದ ತಿಳಿದುಕೊಂಡಿದ್ದೆನು," ಎಂದು ಕಶ್ಯಪನು ಹೇಳಿದೊಡನೆಯೆ, ದುಷ್ಷಂತನು ಒಂದು ನಿಟ್ಟುಸಿರಿಟ್ಟು, "ನಾನು ಅಪವಾದದಿಂದ ಮುಕ್ತನಾದೆ," ಎಂದಂದುಕೊಂಡನು. ಶಕುಂತಳೆಗೂ ಇದರಿಂದ ತನ್ನ ಗಂಡನ ವಿಷಯದಲ್ಲಿ ಪಶ್ಚಾತ್ತಾಪವುಂಟಾಯಿತು. ಕಶ್ಯಪನು, "ಮಗಳೆ, ನಿನ್ನ ಪತಿಯಲ್ಲಿ ಕೋಪಗೊಳ್ಳಬೇಡ. ಶಾಪದಿಂದಾಗಿ ದುಷ್ಷಂತನಿಗೆ ಮರವೆಯುಂಟಾಯಿತು. ಈಗ ಆ ಶಾಪವು ಕಳೆದು ನಿನ್ನ ಗಂಡನು ಶುದ್ಧಮನಸ್ಕನಾಗಿರುವನು. ನಿನ್ನ ಛಾಯೆಯು ಆಗ ಕನ್ನಡಿಯಲ್ಲಿ ಹಿಡಿಯಲಾರದೆ ಹೋಯಿತು. ಏಕೆಂದರೆ, ಅದಕ್ಕೆ ಕಿಲುಬು ಹಿಡಿದಿತ್ತು. ಈಗಲಾದರೊ ನಿನ್ನ ಗಂಡನಲ್ಲಿ ನಿನ್ನ ಪ್ರಭುತ್ವವು ಸುಲಭಾವಕಾಶವಾಗಿದೆ," ಎಂದು ಮಗಳಿಗೆ ಬುದ್ಧಿವಾದವನ್ನು ಹೇಳಿದನು.

ಕಶ್ಯಪನು ಸರ್ವದಮನನನ್ನೂ ಆಶೀರ್ವದಿಸಿದನು – "ನಿಶ್ಚಲ ಗತಿಯ ರಥದಿಂದ ಸಪ್ತಸಾಗರಗಳನ್ನು ದಾಟಿ, ಸಪ್ತದ್ವೀಪಗಳನ್ನೂ ಜಯಿಸಿ, ಎಲೆ ದುಷ್ಷಂತನೆ, ನಿನ್ನ ಸತ್ಪುತ್ರನು ಸಮಸ್ತ ಪ್ರಾಣಿಗಳನ್ನು ತನ್ನ ಅಂಕೆಯಲ್ಲಿಟ್ಟು ಕೊಳ್ಳುವನು, ಮತ್ತು ಯಥಾರ್ಥನಾಮನಾಗಿ ಬಾಳುವನು. ಮುಂದಕ್ಕೆ ಲೋಕವೆಲ್ಲವೂ ಸದ್ರಕ್ಷಕನಾದ ಕಾರಣ ಈತನನ್ನು ಭರತನೆಂತಲೂ ಹೊಗಳುವುದು." ದುಷ್ಷಂತನು ತಲೆಬಾಗಿದನು; ಶಕುಂತಳೆಯು ಕೈಮುಗಿದಳು. ಸರ್ವದಮನನೂ ತಂದೆತಾಯ್ಗಳಂತೆ ಮುನಿಯನ್ನು ವಂದಿಸಿದನು.

ಕಶ್ಯಪಾಶ್ರಮದಲ್ಲಿ ಶಕುಂತಳಾ ದುಷ್ಷಂತರ ಮಿಲನವಾಯಿತೆಂಬ ವಾರ್ತೆ ಕಣ್ವಾಶ್ರಮಕ್ಕೆ ಹರಡಿತು. ತನ್ನ ಪ್ರೀತಿಯ ಸಾಕುಮಗಳು ಪುತ್ರವತಿಯಾಗಿ ಪತಿಯಿಂದ ಸ್ವೀಕೃತಳಾದಳೆಂದು ಕಣ್ವನು ಸಂತೋಷದಿಂದ ನಲಿದಾಡಿದನು; ಆಶ್ರಮದ ತನ್ನ ಒಡನಾಡಿಗಳಿಗೆಲ್ಲರಿಗೂ ಈ ವರ್ತಮಾನವನ್ನು ತಿಳಿಸಿದನು. ಕಣ್ವಾಶ್ರಮವು ಸಂತೋಷದ ಒರತೆಯಾಗಿ ಹರಿದು ವಿಪುಲವಾದ ಪೃಥಿವಿಯ ಮೇಲೆ ವಿಸ್ತರಿಸಿತು. ಕಣ್ವಾಶ್ರಮದ ಹೆಸರು ತೇಜಃಪುಂಜವಾಗಿ ನೆಗೆದು ಬಿತ್ತರದ ಬಾನಿನಲ್ಲಿ ವ್ಯಾಪಿಸಿತು.

ಈ ಕಥೆಯನ್ನು ಕುಸುಮವಾಗಿ ಅರಳಿಸಿದ ಕಾಳಿದಾಸನ ಕೌಶಲವು ಜಗತ್ತಿನ ಆತ್ಮವನ್ನು ಮೋಹಿಸಿ, ಸಂತೋಷ ಕೊಟ್ಟು ವರ್ಧಿಸಿ ಅಜರಾಮರವಾಯಿತು. ಜರ್ಮನಿಯ ಪ್ರಸಿದ್ಧ ಮಹಾಕವಿ ಗಟೆ ಎನ್ನುವಂತೆ ಅಭಿಜ್ಞಾನ ಶಾಕುಂತಳವೆಂಬ ಬಳ್ಳಿಯಲ್ಲಿರುವ ವರ್ಷಾದಿಯ ಅಲರೂ ವರ್ಷಾಂತ್ಯದ ಫಲವೂ ತಂತಮ್ಮ ಸುವಾಸನೆಯನ್ನೂ ಮಾಧುರ್ಯವನ್ನೂ ಏಕಕಾಲಕ್ಕೆ

ಕೊಡುತ್ತಿರುವುವು. ಆತನೆನ್ನುವಂತೆ, ಸ್ವರ್ಗಮರ್ತ್ಯವೆರಡೂ ಶಕುಂತಳೆಯಲ್ಲಿ ಹೊಂದಿಕೆಯಾಗಿರುವುವು. ಅಂತಹ ನಾಟಕವನ್ನು ರಚಿಸಿದ ಮಹಾತ್ಮನು ತನ್ನ ಭರತವಾಕ್ಯದಲ್ಲಿ ವಿದ್ವಾಂಸರಿಗೆ ಸರಸ್ವತೀದೇವಿಯು ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸಿರುವನು. ಅರಸನು ತನ್ನ ಪ್ರಜೆಗಳನ್ನು ಧರ್ಮದಿಂದ ರಕ್ಷಿಸಲೆಂದು ಬಿನ್ನವಿಸಿರುವನು. ತನಗೆ ಪರಮಾತ್ಮನು ಪುನರ್ಜನ್ಮವನ್ನು ಕೊಡದೆ ಮೋಕ್ಷದಾಯಕನಾಗಲೆಂದು ಬೇಡಿಕೊಂಡಿರುವನು.

ಕಾಳಿದಾಸನಂತಹ ಕವಿಯು ಇನ್ನೊಬ್ಬನಿಲ್ಲ;
ಶಾಕುಂತಳದಂತಹ ಕಥೆಯು ಮತ್ತೊಂದಿಲ್ಲ.

- ಸಂಪೂರ್ಣ -

Printed at the Sharada Press, Mangalore.